ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜೂನ್ 21 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 66 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಮಹಿಳಾ ಸ್ವಸಹಾಯ ಗುಂಪುಗಳಿಂದ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆ ಸಂಗ್ರಹ

● ಸಂಪುಟ ಸಭೆಯಲ್ಲಿ ತೀರ್ಮಾನ ● ವಿಶ್ವಬ್ಯಾಂಕ್‌ನಿಂದ 5190 ಕೋಟಿ ಸಾಲ ಮಾಡಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ● ಮೈಸೂರು ಕೆ.ಆರ್.ಆಸ್ಪತ್ರೆ ಆವರಣದಲ್ಲಿ 75 ಕೋಟಿ ವೆಚ್ಚದಲ್ಲಿ ಹೊರರೋಗಿ ವಿಭಾಗದ ಕಟ್ಟಡ ನಿರ್ಮಾಣ

ಬೆಂಗಳೂರು, ಜೂ.20(ಕೆಎಂಶಿ) – **ಮಹಿಳಾ ಸ್ವಸಹಾಯ ಗುಂಪುಗಳ ಸಹಕಾರದಿಂದ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆ ಬಾಕಿ ವಸೂಲಿಗೆ ಇಂದಿಲ್ಲಿ ಸೇರಿದ್ದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.**

ವಿಶ್ವಬ್ಯಾಂಕ್‌ನಿಂದ ಸಾಲ ಪಡೆದು ಗ್ರಾಮೀಣ ರಸ್ತೆಗಳ ಅಭಿವೃದ್ಧಿಯ ಮಹತ್ವದ ತೀರ್ಮಾನವನ್ನೂ ಸಂಪುಟ ತೆಗೆದುಕೊಂಡಿದೆ. ಅಲ್ಲದೆ, ಮೈಸೂರಿನ ಕೆ.ಆರ್. ಆಸ್ಪತ್ರೆ ಆವರಣದಲ್ಲಿ 75 ಕೋಟಿ ರೂ.ಗಳ ವೆಚ್ಚದಲ್ಲಿ ಹೊರರೋಗಿಗಳ ನೂತನ ವಿಭಾಗದ ಕಟ್ಟಡ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.


ಹೆಚ್.ಕೆ.ಪಾಟೀಲ್

ಬೆಂಗಳೂರು ಹೊರತುಪಡಿಸಿ ಉಳಿದ ಮಹಾನಗರ ಪಾಲಿಕೆಗಳೂ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಬಾಕಿ ಇರುವ ಆಸ್ತಿ ತೆರಿಗೆ, ವಿದ್ಯುತ್, ನೀರು ಬಿಲ್ ಬಾಕಿ ವಸೂಲಿ ಅಧಿಕಾರವನ್ನು ಮಹಿಳಾ ಸ್ವಸಹಾಯ ಗುಂಪುಗಳಿಗೆ ನೀಡಲಾಗುವುದು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಗ್ರಾಮೀಣ ಭಾಗದಲ್ಲಿ ತೆರಿಗೆ ವಸೂಲಿ ಅಭಿಯಾನ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಕಳೆದ ಹಲವಾರು ವರ್ಷಗಳಿಂದ ತೆರಿಗೆ ವಸೂಲಾಗದೆ ಬಾಕಿ ಉಳಿದಿದೆ. ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ದಾವಣಗೆರೆ ನಗರಪಾಲಿಕೆ ಸೇರಿದಂತೆ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಂದ 1,860 ಕೋಟಿ ರೂ. ಆಸ್ತಿ ತೆರಿಗೆ ವಸೂಲಿ ಆಗಬೇಕಿದೆ. ಮಹಿಳಾ ಸಂಘಗಳು ವಸೂಲಿ ಮಾಡುವ ಹಣದಲ್ಲಿ ಶೇಕಡ 5ರಷ್ಟನ್ನು ಆ ಸಂಸ್ಥೆಗೆ ಸರ್ಕಾರ ಪ್ರೋತ್ಸಾಹ ಧನವನ್ನಾಗಿ ನೀಡಲಿದೆ. ಗ್ರಾಮೀಣ, ನಗರ, ಪಟ್ಟಣವಲ್ಲದೆ, ಪಾಲಿಕೆ ವ್ಯಾಪ್ತಿಯಲ್ಲೂ ದೊಡ್ಡ ● 5ನೇ ಪುಟಕ್ಕೆ





66 ಮೈಸೂರು ಕೆ.ಆರ್.ಆಸ್ಪತ್ರೆ ಬರೀ ಮೈಸೂರು ಜಿಲ್ಲೆಯವರಿಗಲ್ಲದೆ ದಕ್ಷಿಣ ಕರ್ನಾಟಕದ ಜನರಿಗೆ ಆರೋಗ್ಯ ಧಾಮದಂತಿದೆ. ಈ ಹಿನ್ನೆಲೆಯಲ್ಲಿ ತಮ್ಮ ಮನವಿ ಮನ್ನಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಜನರಿಗೆ ಆರೋಗ್ಯ ಅನುಕೂಲಕ್ಕಾಗಿ ಹೊರರೋಗಿಗಳ ಹೊಸ ವಿಭಾಗದ ಕಟ್ಟಡ ನಿರ್ಮಾಣಕ್ಕೆ 75 ಕೋಟಿ ನೀಡಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. –ಕೆ.ಹರೀಶ್‌ಗೌಡ, ಶಾಸಕರು



ಸರ್ಕಾರಿ ಶಾಲೆ, ಪಿಯು ಕಾಲೇಜುಗಳಿಗೆ ಉಚಿತ ವಿದ್ಯುತ್, ನೀರು ಪೂರೈಕೆ

ಬೆಂಗಳೂರು: ರಾಜ್ಯಾದ್ಯಂತ ಇನ್ನು ಮುಂದೆ ಸರ್ಕಾರಿ ಸ್ವಾಮ್ಯದ ಎಲ್ಲ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಿಕ್ಷಣ ಇಲಾಖೆಯ ಎಲ್ಲ ಸರ್ಕಾರಿ ಶಾಲೆ ಹಾಗೂ ಪದವಿ ಕಾಲೇಜುಗಳಿಗೆ ಉಚಿತ ವಿದ್ಯುತ್ ಪೂರೈಕೆಗೆ ನಿರ್ಧಾರ ಮಾಡಲಾಗಿದೆ. 29.15 ಕೋಟಿ ರೂ. ● 5ನೇ ಪುಟಕ್ಕೆ

ದರ್ಶನ್ ಪರ ಲಾಬಿ ಸಂಪುಟ ಸಹೋದ್ಯೋಗಿಗಳಿಗೆ ಸಿಎಂ ಎಚ್ಚರಿಕೆ

ಬೆಂಗಳೂರು, ಜೂ.20– ದರ್ಶನ್ ಅಂಡ್ ಗ್ಯಾಂಗ್‌ನಿಂದ ದಾರುಣವಾಗಿ ಕೊಲೆಗೀಡಾದ ರೇಣುಕಾಸ್ವಾಮಿ ವಿಚಾರ ಗುರುವಾರ ಕ್ಯಾಬಿನೆಟ್ ಸಭೆಯಲ್ಲೂ ಸದ್ದು ಮಾಡಿದೆ. ಈ ವಿಚಾರದಲ್ಲಿ ಯಾವುದೇ ಕಾರಣಕ್ಕೂ ನನ್ನ ಬಳಿ ಸುಳಿಯಬೇಡಿ ಎಂದು ಸಿಎಂ ಸಿದ್ದರಾಮಯ್ಯ ತಮ್ಮ ಸಂಪುಟ ಸಹೋದ್ಯೋಗಿಗಳಿಗೆ ಖಡಕ್ ಎಚ್ಚರಿಕೆ ರವಾನಿಸಿದ್ದಾರೆ ಎನ್ನಲಾಗಿದೆ. ಕ್ಯಾಬಿನೆಟ್ ಸಭೆಯಲ್ಲಿ ವಾರ್ನಿಂಗ್ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದಕ್ಕಿಂತ ಕ್ರೂರ ಕೃತ್ಯ ಮತ್ತೊಂದಿಲ್ಲ. ಯಾರೂ ಈ ವಿಚಾರದಲ್ಲಿ ನನ್ನ ಹತ್ತಿರ ಬರುವ ಕೆಲಸ ಮಾಡಬೇಡಿ. ಯಾರೂ ಒತ್ತಡ ಹಾಕುವುದಾಗಲೀ, ಮನವಿ ಮಾಡುವುದಕ್ಕಾಗಲೀ ಬರಬೇಡಿ. ಈ ಘಟನೆ ಎಂಥದ್ದು ಅಂತ ನಾನು ನೋಡಿದ್ದೇನೆ ಎಂದು ಸಿಎಂ ಹೇಳಿದ್ದಾರೆ. ಆ ಮೂಲಕ ದರ್ಶನ್ ಪರ ಲಾಬಿ ಮಾಡಲು ಮುಂದಾದ ಕೆಲ ಸಂಪುಟ ಸಹೋದ್ಯೋಗಿಗಳಿಗೆ ಸಿಎಂ ವಾರ್ನಿಂಗ್ ಕೊಟ್ಟಿದ್ದಾರೆ. ಅದರಂತಹ ಕ್ರೂರತನ ನಾನು ನೋಡೇ ಇಲ್ಲ ಎಂದು ರೇಣುಕಾಸ್ವಾಮಿ ಕೊಲೆ ಪ್ರಕರಣದ ಬಗ್ಗೆ ಸಂಪುಟ ಸಭೆಯಲ್ಲಿ ಸಿದ್ದರಾಮಯ್ಯ ಹೇಳಿದ್ದಾರೆ. ಇದೇ ವೇಳೆ ಪೊಲೀಸರು ತಮಗೆ ತೋರಿಸಿದ ದೃಶ್ಯಾವಳಿಯನ್ನೂ ಸಿಎಂ ಸಿದ್ಧರಾಮಯ್ಯ ಪ್ರಸ್ತಾಪ ಮಾಡಿದ್ದಾರೆ. ಪೊಲೀಸ್ ಅಧಿಕಾರಿಗಳು ದೃಶ್ಯಗಳನ್ನು ತೋರಿಸಿದ ಬಳಿಕವೇ ಸಿಎಂ ಪ್ರಕರಣದಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ಕೆಲಸ ಮಾಡಲು ಸೂಚನೆ ನೀಡಿದ್ದರು.



ಪ್ರಕರಣದ ಕುರಿತು ಯಾರೂ ಹೆಚ್ಚಿಗೆ ಮಾತನಾಡುವ ಅಗತ್ಯವಿಲ್ಲ. ಅನಗತ್ಯವಾಗಿ ಮಾತಿಗೆ ಸಿಕ್ಕಬೇಡಿ. ● 5ನೇ ಪುಟಕ್ಕೆ


ಕೇಜ್ರಿವಾಲ್‌ಗೆ ಜಾಮೀನು; ಇಂದು ಜೈಲಿನಿಂದ ಬಿಡುಗಡೆ

ನವದೆಹಲಿ, ಜೂ.20– ದೆಹಲಿ ಅಬಕಾರಿ ಹಗರಣದಲ್ಲಿ ಸಿಎಂ ಅರವಿಂದ್ ಕೇಜ್ರಿವಾಲ್‌ಗೆ ಇಂದು ಜಾಮೀನು ಮಂಜೂರಾಗಿದೆ. ಮಾರ್ಚ್ ತಿಂಗಳಲ್ಲಿ ಅಬಕಾರಿ ಕಾಯ್ದೆಯ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ರನ್ನು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಆದರೆ ಚುನಾವಣೆಯ ಸಮಯದಲ್ಲಿ ಕೆಲ ದಿನ ಬೇಲ್ ಮೇಲೆ ಹೊರಗಿದ್ದ ಕೇಜ್ರಿವಾಲ್ ಜೂನ್ 2ರಂದು ಜಾಮೀನು ಅವಧಿ ಮುಗಿದ ಹಿನ್ನೆಲೆಯಲ್ಲಿ ಮತ್ತೆ ಜೈಲಿಗೆ ಶರಣಾಗಿದ್ದರು. ಈಗ ದೆಹಲಿ ● 5ನೇ ಪುಟಕ್ಕೆ



ದರ್ಶನ್ ಮತ್ತೆ ಪೊಲೀಸ್ ಕಸ್ಟಡಿಗೆ: ಪವಿತ್ರಾಗೌಡ ಸೇರಿ 10 ಮಂದಿ ಜೈಲಿಗೆ

ಬೆಂಗಳೂರು, ಜೂ. 20– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ ನಾಲ್ವರನ್ನು ಮತ್ತೆ ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಲಯ ಆದೇಶಿಸಿದೆ. ಆತನ ಗೆಳತಿ ಪವಿತ್ರಾಗೌಡ ಸೇರಿ 10 ಮಂದಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಪೊಲೀಸ್ ಕಸ್ಟಡಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಪೊಲೀಸರು ಇಂದು 14 ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನಟ ದರ್ಶನ್, ಧನರಾಜು ಅಲಿಯಾಸ್ ರಾಜು, ವಿನಯ್ ಹಾಗೂ ಪ್ರದೋಶ್ ಅವರನ್ನು ಮತ್ತೆ 4 ದಿನ ಪೊಲೀಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದರು. ಇದಕ್ಕೆ ದರ್ಶನ್ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರಾದರೂ ನ್ಯಾಯಾಧೀಶರು ಪೊಲೀಸರ ಮನವಿ ಪುರಸ್ಕರಿಸಿ ಇವರೆಲ್ಲರನ್ನೂ ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿದರು. ಈಗಾಗಲೇ ಆರೋಪಿಗಳಾದ ರವಿಶಂಕರ್, ಕಾರ್ತಿಕ್, ನಿಖಿಲ್ ನಾಯಕ್ ಜೈಲಿನಲ್ಲಿದ್ದು, ಗುರುವಾರ ಪವಿತ್ರಾಗೌಡ, ಪವನ್, ರಾಘವೇಂದ್ರ ನಂದೀಶ್, ಜಗದೀಶ್, ಅನುಕುಮಾರ್, ನಾಗ ರಾಜ್, ಲಕ್ಷ್ಮಣ್, ದೀಪಕ್, ಕೇಶವ್‌ಮೂರ್ತಿ ಸೇರಿದಂತೆ 10 ಮಂದಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು ಅವರೆಲ್ಲರನ್ನೂ ಪರಪ್ಪನ ಅಗ್ರಹಾರ ಜೈಲಿಗೆ ಕರೆದೊಯ್ಯಲಾಯಿತು.





ಪೊಲೀಸರ ಪರವಾಗಿ ಎಸ್‌ಪಿಪಿ ಪಿ.ಪ್ರಸನ್ನ ಕುಮಾರ್ ವಾದಿಸಿದರು. ದರ್ಶನ್ ಪರ ವಕೀಲ ಅನಿಲ್‌ಬಾಬು ಮತ್ತು ಪವಿತ್ರಾಗೌಡ ಪರ ವಕೀಲ ನಾರಾಯಣಸ್ವಾಮಿ ವಾದಿಸಿದರು.

ಅರ್ಜುನ ಮಡಿದ ಯಸಳೂರು, ನೆಲೆಸಿದ್ದ ಬಳ್ಳೆಯಲ್ಲಿ ಸ್ಮಾರಕ

● ಜುಲೈನಲ್ಲಿ ಶಂಕುಸ್ಥಾಪನೆ ● ನಾಗರಹೊಳೆಗೆ ನೂತನ ಸಫಾರಿ ಬಸ್ಸುಗಳು



ವಿಧಾನಸೌಧದ ಮುಂಭಾಗ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಗುರುವಾರ ನಾಗರಹೊಳೆಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾಗಿರುವ ಮೂರು ಮಿನಿ ಬಸ್‌ಗಳಿಗೆ ಹಸಿರು ನಿಶಾನೆ ತೋರಿದರು. ಶಾಸಕರುಗಳಾದ ಎ.ಎಸ್.ಪೊನ್ನಣ್ಣ, ಜಿ.ಡಿ.ಹರೀಶ್‌ಗೌಡ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಉಪಸ್ಥಿತರಿದ್ದರು.



ಬೆಂಗಳೂರು, ಜೂ.20(ಎಂಟಿವೈ)–ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಹಾಸನ ಜಿಲ್ಲೆ ಯಸಳೂರು ವಲಯದಲ್ಲಿ ಡಿ.4ರಂದು ಹುತಾತ್ಮನಾದ ದಸರಾ ಆನೆ ಅರ್ಜುನನ ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಜುಲೈನಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ವಿಧಾನಸೌಧದ ಮುಂಭಾಗ ಗುರುವಾರ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಸಫಾರಿಗಾಗಿ ವಿಶೇಷ ವಿನ್ಯಾಸದ 3 ಹೊಸ ಮಿನಿ ಬಸ್‌ಗಳಿಗೆ ಹಸಿರು ನಿಶಾನೆ ತೋರಿ, ಮಾತನಾಡಿದ ಅವರು, ಹಾಸನ ಜಿಲ್ಲೆ ಯಸಳೂರು ಬಳಿ ಅರ್ಜುನನ ಸಮಾಧಿ ಸ್ಥಳ ಮತ್ತು ಅರ್ಜುನನ ಆವಾಸ ಸ್ಥಾನವಾಗಿದ್ದ, ನಾಗರಹೊಳೆಯ ಬಳ್ಳೆ ಆನೆ ಶಿಬಿರದಲ್ಲಿ ಸ್ಮಾರಕ ನಿರ್ಮಾಣ ಮಾಡಲಾಗುವುದು. ಈ ಎರಡೂ ಸ್ಮಾರಕಗಳಲ್ಲಿ ಅರ್ಜುನನ ಪ್ರತಿಕೃತಿ ಪ್ರತಿಷ್ಠಾಪಿಸಲಾಗುವುದು ಜೊತೆಗೆ ಚಿನ್ನದ ಅಂಬಾರಿ ಹೊತ್ತ ಅರ್ಜುನನ ಚಿತ್ರಗಳು, ಆನೆ, ಹುಲಿ ಮತ್ತು ಚಿರತೆ ಕಾರ್ಯಾಚರಣೆಯಲ್ಲಿ ಅರ್ಜುನನ ಪರಾಕ್ರಮ ದೃಶ್ಯಗಳನ್ನು ಪ್ರದರ್ಶಿಸುವ ಮೂಲಕ ಜನರ ಮನದಲ್ಲಿ ಅರ್ಜುನನ ಸಾಹಸ, ಸೇವೆ ಚಿರಸ್ಥಾಯಿಯಾಗುವಂತೆ ಮಾಡಲಾಗುವುದು. ಡಿಸೆಂಬರ್ 4 ಅರ್ಜುನನ ಪ್ರಥಮ ಪುಣ್ಯಸ್ಮರಣೆ. ಅಷ್ಟರಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಆನೆ ಶಿಬಿರಗಳಲ್ಲಿದ್ದ ಕೆಲವು ಸಾಕಾನೆಗಳು ಮೃತಪಟ್ಟಿರುವುದು ನೋವಿನ ಸಂಗತಿ. ಈ ಕುರಿತಂತೆ ತನಿಖೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. ವರದಿ ಬಂದ ಬಳಿಕ ● 5ನೇ ಪುಟಕ್ಕೆ

ಮೈಸೂರು ಮಿತ್ರ


ಶುಕ್ರವಾರ 21 ಜೂನ್ 2024

ಸಚ್ಚಿದಾನಂದ ಶ್ರೀಗಳ ಆಶೀರ್ವಾದ ಪಡೆದ ಸಂಸದ ಯದುವೀರ್



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ, ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಉಪ ರಾಷ್ಟ್ರಪತಿಗಳ ಭೇಟಿಯಾದ ಕೇಂದ್ರ ಸಚಿವ ಕುಮಾರಸ್ವಾಮಿ



ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಕೇಂದ್ರ ಉಕ್ಕು-ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೂಗುಚ್ಛ ನೀಡಿ, ಅಭಿನಂದಿಸಿದರು.

ಬೆಂಗಳೂರು, ಜೂ.20(ಕೆಎಂಶಿ)- ಉಪ ರಾಷ್ಟ್ರಪತಿಗಳಾದ ಜಗದೀಪ್ ಧನಕರ್ ಅವರನ್ನು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದು ಸೌಜನ್ಯ ಭೇಟಿಯಾದರು. ಉಪ ರಾಷ್ಟ್ರಪತಿಗಳ ಭೇಟಿಯಿಂದ ಸಂತೋಷವಾಗಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಆರೋಗ್ಯವನ್ನು ವಿಚಾರಿಸಿದರು ಎಂದು ಕುಮಾರಸ್ವಾಮಿ ತಮ್ಮ ಜಾಲತಾಣ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಉಪರಾಷ್ಟ್ರಪತಿಗಳ ಪ್ರೀತಿ, ವಿಶ್ವಾಸ ಹಾಗೂ ಮಾರ್ಗದರ್ಶನಕ್ಕೆ ನಾನು ಆಭಾರಿಯಾಗಿದ್ದೇನೆ ಎಂದು ತಿಳಿಸಿದ್ದಾರೆ.

ನಾಳೆ ಶನಿ ಮಹಾಶಾಂತಿ

ಮೈಸೂರು, ಜೂ.20- ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಜೂ.22ರಂದು ಶನಿವಾರ ಬೆಳಗ್ಗೆ 9.30ಕ್ಕೆ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾನಿವಾರಕ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಪ್ರತಿಯೊಬ್ಬರಿಗೂ ಪ್ರತ್ಯೇಕ ಸಂಕಲ್ಪ ಮಾಡಿಸಲಾಗುತ್ತದೆ. ಮಧ್ಯಾಹ್ನ 12.30 ಪೂರ್ಣಾಹುತಿ ಮಹಾ ಮಂಗಳಾರತಿ ನೆರವೇರಲಿದೆ ಎಂದು ಪ್ರಕಟಣೆ ತಿಳಿಸಿದೆ.


ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿ ಇಂದು ಯೋಗೋತ್ಸವ

ಮೈಸೂರು, ಜೂ.20(ಎಂಕೆ)- ಮೈಸೂರಿನ ಹೊರವಲಯದಲ್ಲಿರುವ ಕೆ.ಹೆಮ್ಮನಹಳ್ಳಿಯ ಪುರಾತನ, ಇತಿಹಾಸ ಪ್ರಸಿದ್ಧ ಶ್ರೀ ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿ ನಾಳೆ(ಜೂ.21) 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ(ಯೋಗೋತ್ಸವ) ನಡೆಯಲಿದೆ.



ಹಳ್ಳಿ ಪರಿಸರದ ಸುಂದರ ಪ್ರಕೃತಿ ನಡುವೆ ಯೋಗ ಗುರು ಶ್ಯಾಮಲಕ್ಕ ನೇತೃತ್ವದಲ್ಲಿ ಯೋಗೋತ್ಸವ ನಡೆಯಲಿದೆ. ಬೆಳಗ್ಗೆ 6 ಗಂಟೆಗೆ ದೇವಾಲಯದ ಆವರಣದಲ್ಲಿ ನೂರಾರು ಮಂದಿ ಯೋಗ ಪ್ರಿಯರು, ಯೋಗ ಪಟುಗಳು ಯೋಗಾಸನದ ಮೂಲಕ ಆರೋಗ್ಯ ಕಾಳಜಿಯ ಸಂದೇಶ ನೀಡಲಿದ್ದಾರೆ. ಮೊದಲಿಗೆ ಓಂಕಾರ, ದೇಹ ಬಿಸಿ ಮತ್ತು ಸಡಿಲ ಮಾಡುವ ಚಲನೆಗಳ ಬಳಿಕ, ಸಾಮೂಹಿಕ ಯೋಗಾಸನವನ್ನು ಎಲ್ಲರೂ ಮಾಡಲಿದ್ದಾರೆ ಎಂದು ದೇಗುಲದ ಶ್ರೀ ದೇಗುಲದ ಆಡಳಿತ ಮಂಡಳಿ ಕಾರ್ಯದರ್ಶಿ ಅನಂತವರ್ಧನ ತಿಳಿಸಿದ್ದಾರೆ.

ಪ್ರೊ. ಜಿ.ಪಾಂಡುರಂಗಮೂರ್ತಿಯವರಿಗೆ ರಾಂಚಿ ವಿವಿಯಿಂದ 'ವರ್ಷದ ವಿಜ್ಞಾನಿ-2024' ಪ್ರಶಸ್ತಿ ಪ್ರಧಾನ



ಮೈಸೂರು, ಜೂ.20-ಜಾರ್ಖಂಡ್‌ನ ರಾಂಚಿ ವಿಶ್ವವಿದ್ಯಾಲಯ ಸಂಯೋಜನೆಯ ಪ್ರತಿಷ್ಠಿತ ಗಾಸ್ನರ್ ಕಾಲೇಜಿನಲ್ಲಿ ಜೂ.8 ಮತ್ತು 9ರಂದು ನಡೆದ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಮೈಸೂರಿನ 'ಡಾಕ್ಟರ್ ಆಫ್ ಸೈನ್ಸ್' ಪದವಿ ಪುರಸ್ಕೃತರಾದ ಪ್ರೊ. ಜಿ.ಪಾಂಡು ರಂಗಮೂರ್ತಿಯವರಿಗೆ 'ವರ್ಷದ ವಿಜ್ಞಾನಿ-2024' ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.


ರಾಂಚಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಜಿತ್ ಕುಮಾರ್ ಸಿನ್ಹ ಮತ್ತು ಸಿಎಸ್ಐರ್-ಐಸಿಎಆರ್ ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಡಾ. ಜನಾರ್ಧನ್‌ಜೀ ಅವರು ಪಾಂಡು ರಂಗಮೂರ್ತಿಯವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಪಾಂಡುರಂಗ ಮೂರ್ತಿ ಯವರು ಕೃಷಿ ಬೆಳೆಗಳ ಮೇಲೆ ರಾಸಾಯನಿಕ ಕೀಟ ನಾಶಕಗಳ ಪರಿಣಾಮಗಳ ಕುರಿತ ಸಂಶೋಧನೆಗಾಗಿ ಮೈಸೂರು ವಿವಿಯಿಂದ ಪಿಹೆಚ್‌ಡಿ ಪಡೆದಿದ್ದು, ನಂತರ ಪಾರಂಪರಿಕ ಗಿರಿಜನ ಔಷಧ ಪದ್ಧತಿಯ ವೈಜ್ಞಾನಿಕ ಮತ್ತು ಔಷಧ ಶಾಸ್ತ್ರದ ರಾಸಾಯನಿಕ ಸಮೀಕರಣ ಕುರಿತು ನಡೆಸಿದ ಸಂಶೋಧನೆಗೆ ಆಂಧ್ರಪ್ರದೇಶದ ಜೆಎನ್‌ಟಿಯು ವಿವಿಯಿಂದ ಜೈವಿಕ ರೂಪದ ಔಷಧಶಾಸ್ತ್ರದಲ್ಲಿ ಪಿಹೆಚ್‌ಡಿ ಪಡೆದಿದ್ದಾರೆ.

ಸಮುದಾಯದ ವಿವಿಧ ಕ್ಷೇತ್ರಗಳಲ್ಲಿ ಬಳಕೆಗಾಗಿ ವೈಜ್ಞಾನಿಕ ಇಂಧನ ತಯಾರಿಕೆ, ಕೃಷಿ ಯಂತ್ರ ತಂತ್ರಜ್ಞಾನದ ಬಳಕೆ, ಗಿರಿಜನ ಔಷಧಿ ಪದ್ಧತಿಯ ಗಣಕೀಕೃತ ದತ್ತಾಂಶದ ಸಾಫ್ಟ್‌ವೇರ್ ಸೆನ್ಸಾರ್ ಆಯೋಜಿತ ಜೈವಿಕ ಇಂಧನ ವಿಶ್ಲೇಷಣೆ, ಕೃಷಿ ಬೆಳೆಗಳಿಗೆ ಜೈವಿಕ ಬಲವರ್ಧಕ ನಿರೂಪಣೆ ಕುರಿತಾಗಿ 6 ತಂತ್ರಜ್ಞಾನಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ಇವರು ಶಕ್ತಿಯ ಆಕರಗಳು ಮತ್ತು ತಂತ್ರಜ್ಞಾನದ ಕುರಿತಾದ ಸಂಶೋಧನೆಗಾಗಿ ರಾಂಚಿ ವಿವಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಉತ್ಕೃಷ್ಟ ಪದವಿಯಾದ 'ಡಾಕ್ಟರ್ ಆಫ್ ಸೈನ್ಸ್' ಪಡೆದಿದ್ದು, ಮೇಕ್ ಇನ್ ಇಂಡಿಯಾ ಧ್ಯೇಯೋದ್ದೇಶದ ಸಂಶೋಧನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ.

ಮೋಹನ್ ಭಂಡಾರ್ ಮಾಲೀಕ ಸಂಜಯ್ ಗೋಯೆಲ್ ನಿಧನ

ಮೈಸೂರು,ಜೂ.20- ಮೈಸೂರಿನ ಅತ್ಯಂತ ಹಳೆಯ ಸೂಪರ್ ಮಾರ್ಕೆಟ್‌ಗಳಲ್ಲಿ ಒಂದಾದ ಮೋಹನ್ ಭಂಡಾರ್‌ನ ಮಾಲೀಕ ಹಾಗೂ ಯಾದವಗಿರಿ ನಿವಾಸಿ ಸಂಜಯ್ ಗೋಯೆಲ್ (67) ಗುರುವಾರ ಬೆಳಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಮೃತರು ಪತ್ನಿ, ಒಬ್ಬ ಪುತ್ರಿ, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಡಾಗೇಕೆ ಮೈಸೂರು ವಿಶ್ವವಿದ್ಯಾಲಯದ ಸುಪರ್ದಿಗೊಳಪಟ್ಟ ಕುಕ್ಕರಹಳ್ಳಿ ಕೆರೆ ಉಸಾಬರಿ...!

ಖಾಸಗಿ ಸಂಸ್ಥೆಗೆ ಕೆರೆ ಸಂರಕ್ಷಣೆ ಸಂಬಂಧ ಯೋಜನಾ ವರದಿ ಸಿದ್ಧಪಡಿಸುವ ಜವಬ್ದಾರಿ ಹಿಂದೆ ನಾನಾ ಲೆಕ್ಕಾಚಾರ

• ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಲೋಕಾಯುಕ್ತಗೆ ದೂರು ಸಲ್ಲಿಕೆ • ಸರ್ಕಾರಿ ಕೆರೆಯನ್ನ ಕಾನೂನು ಬಾಹಿರವಾಗಿ ಹಸ್ತಾಂತರಿಸಿ; ಲಕ್ಷಾಂತರ ರೂ. ನಷ್ಟದ ಆರೋಪ

ಮೈಸೂರು, ಜೂ.20-ಮೈಸೂರಿನ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಸಂಬಂಧ ಯೋಜನಾ ವರದಿ (ಡಿಪಿಆರ್) ತಯಾರಿಸಲು ನವದೆಹಲಿಯ ಇಂಟಕ್ ಎಂಬ ಖಾಸಗಿ ಸಂಸ್ಥೆಗೆ ಕಾನೂನು ಬಾಹಿರವಾಗಿ ಸರ್ಕಾರಿ ಕೆರೆ ಹಸ್ತಾಂತರಿಸಿ ಲಕ್ಷಾಂತರ ರೂ. ಸಾರ್ವಜನಿಕ ಹಣವನ್ನು ನೀಡುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಲಾಗಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್ ಪಕ್ಷ) ಜಿಲ್ಲಾ ಕಾರ್ಯದರ್ಶಿ ಎನ್.ನಾಗರಾಜು ಲೋಕಾಯುಕ್ತಗೆ ದೂರು ಸಲ್ಲಿಸಿದ್ದಾರೆ.



ಅವರ ದೂರಿನಲ್ಲಿ ಜಿಲ್ಲಾಧಿಕಾರಿ ಕೆ.ರಾಜೇಂದ್ರ ಮುಡಾ ಆಯುಕ್ತ ಜಿ.ಪಿ.ದಿನೇಶ್ ಕುಮಾರ್, ಮುಡಾ ಅಧೀಕ್ಷಕ ಎನ್.ಬಿ.ಚನ್ನಕೇಶವ, ಮುಡಾ ವಲಯ ಕಚೇರಿ-4ರ ವಲಯಾಧಿಕಾರಿ ಸಂಪತ್ ಕುಮಾರ್, ಕಾರ್ಯಪಾಲಕ ಅಭಿಯಂತರ ಧರಣೇಂದ್ರಪ್ಪ, ತಾಂತ್ರಿಕ ಸಹಾಯಕ ಬೆಟ್ಟಸ್ವಾಮಿ, ಮುಡಾ ಡಿಎಂ ಶಾಖೆಯ ಸಹಾಯಕ ಅಭಿಯಂತರ ಮಲ್ಲಿಕಾರ್ಜುನ, ಪ್ರಭಾರ ಮುಖ್ಯ ಲೆಕ್ಕಾಧಿಕಾರಿ ಡಿ.ಬಿ.ಕವಿತಾ, ಲೆಕ್ಕ ಶಾಖೆಯ ಪ್ರಥಮ ದರ್ಜೆ ಸಹಾಯಕ ಖಾಸಿಂ ಖಾನ್, ಮೈಸೂರು ವಿವಿ ಕುಲಪತಿ ಎನ್.ಕೆ.ಲೋಕನಾಥ್, ಕುಲಸಚಿವೆ ಶ್ರೀಮತಿ ವಿ.ಆರ್.ಶೈಲಜಾ ಅವರನ್ನು ಆರೋಪಿಗಳಾಗಿ ನಮೂದಿಸಿದ್ದು, ಇವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಕುಕ್ಕರಹಳ್ಳಿ ಕೆರೆಯ ಸ್ವಾಧೀನವನ್ನು ವಾಪಸ್ ಪಡೆಯುವುದರೊಂದಿಗೆ ಇಂಟಕ್ ಸಂಸ್ಥೆಗೆ ಪಾವತಿಸಿರುವ ಸರ್ಕಾರದ ಹಣವನ್ನು ವಸೂಲು ಮಾಡಲು ಸೂಚಿಸಿ, ಅಕ್ರಮಗಳಿಗೆ ಕಾರಣರಾಗಿರುವ ಇತರ ತಪ್ಪಿತಸ್ಥರ ವಿರುದ್ಧ ಕೂಡ ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸಬೇಕೆಂದು ಅವರು ಕೋರಿದ್ದಾರೆ.

ವಿವರ: ಮೈಸೂರು ಹೃದಯ ಭಾಗದಲ್ಲಿರುವ ಈಗ ಮೈಸೂರು ವಿಶ್ವವಿದ್ಯಾನಿಲಯದ ಸುಪರ್ದಿಗೊಳಪಟ್ಟ ಕುಕ್ಕರಹಳ್ಳಿ ಕೆರೆಯನ್ನು ಮೈಸೂರು ಜನತೆಗೆ ಕುಡಿಯುವ ನೀರಿನ ಸಂಗ್ರಹಣೆ ಮತ್ತು ಇತರ ಉಪಯೋಗಕ್ಕಾಗಿ ಮೈಸೂರು ಮಹಾರಾಜರು 1860ರಲ್ಲಿ ನಿರ್ಮಿಸಿದ್ದರು. ರಾಷ್ಟ್ರಕವಿ ಕುವೆಂಪು ಹಾಗೂ ಅವರ ಶಿಷ್ಯರಿಗೆ ಸ್ಫೂರ್ತಿ ಸೆಲೆಯಾಗಿದ್ದ ಕುಕ್ಕರಹಳ್ಳಿ ಕೆರೆ, ಮೈಸೂರಿನ ಪ್ರವಾಸಿ ತಾಣಗಳಲ್ಲಿ ಹೆಸರುವಾಸಿಯಾಗಿದೆ.

ಈ ಕುಕ್ಕರಹಳ್ಳಿ ಕೆರೆ ಕಲುಷಿತವಾಗಿದ್ದು, ಅದರ ಅಭಿವೃದ್ಧಿಗೆ ಕೋಟ್ಯಾಂತರ ರೂ. ಅಗತ್ಯವಿದೆ ಎಂದು ತಿಳಿಸಿ, ಅಕ್ರಮ ಹಣ ಸಂಪಾದಿಸುವ ದೃಷ್ಟಿಯಿಂದ ಕೆಲವು ಅಧಿಕಾರಿಗಳು ಸಂಚು ರೂಪಿಸಿ, ಪ್ರಾಥಮಿಕ ಹಂತದಲ್ಲೇ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂ. ನಷ್ಟವನ್ನುಂಟು ಮಾಡಿದ್ದಾರೆ ಎಂದು ನಾಗರಾಜು ದೂರಿನಲ್ಲಿ ಪ್ರಾಸ್ತಾವಿಕವಾಗಿ ತಿಳಿಸಿದ್ದಾರೆ.

ಕುಕ್ಕರಹಳ್ಳಿ ಕೆರೆಯ ಸಂರಕ್ಷಣೆ ವಿಚಾರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ಅನುಮತಿ ಪಡೆಯುವ ಮುನ್ನವೇ 2023ರ ಸೆ.6ರಂದು ಮುಡಾ ಸಾಮಾನ್ಯ ಸಭೆಯಲ್ಲಿ, ಸಭೆಯ ಕಾರ್ಯಸೂಚಿಯೇ ಇಲ್ಲದೆಯೂ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಸಂಬಂಧ ಯೋಜನಾ ವರದಿ ತಯಾರಿ ಸುವ ಅವಶ್ಯಕತೆ ಇದೆ. ಯೋಜನಾ ವರದಿ ತಯಾರಿಸಲು 60 ಲಕ್ಷ ರೂ. ಬಿಡುಗಡೆಗಾಗಿ ಅನುಮೋದನೆ ನೀಡಿ, ಇಂಟಕ್ ಎಂಬ ಖಾಸಗಿ ಸಂಸ್ಥೆಯನ್ನು ಕೇಂದ್ರ ಸರ್ಕಾರದ ಅಂಗ ಸಂಸ್ಥೆ ಎಂದು ಸುಳ್ಳು ಹೇಳಿ, ನಡಾವಳಿ ನಮೂದಿಸಿದ್ದಾರೆ.

ತಮ್ಮ ಸ್ವಾಧೀನದಲ್ಲೇ ಇಲ್ಲದ ಕುಕ್ಕರಹಳ್ಳಿ ಕೆರೆ ಸಂರಕ್ಷಣೆಯ ಡಿಪಿಆರ್‌ಗೆ ಸಂಬಂಧಪಟ್ಟಂತೆ ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಅಧೀಕ್ಷಕ ಅಭಿಯಂತರ ಎನ್.ಬಿ.ಚನ್ನಕೇಶವ, ಇಂಟಕ್ ಸಂಸ್ಥೆಯೊಂದಿಗೆ 2023ರ ಡಿ.18ರಂದು ಡಿಪಿಆರ್ ಸಂಬಂಧ 63.80 ಲಕ್ಷ ರೂ.ಗಳಿಗೆ ಒಪ್ಪಂದ ಮಾಡಿಕೊಂಡು ಅದೇ ದಿನ ಇಂಟಕ್ ಪ್ರಧಾನ ನಿರ್ದೇಶಕರಿಗೆ ಕಾರ್ಯಾದೇಶವನ್ನು ನೀಡಿದ್ದಾರೆ.

ನಂತರ ಯಾವುದೇ ಕೆಲಸವನ್ನೂ ನಿರ್ವಹಿಸದೇ ಭದ್ರತಾ ಠೇವಣಿಯನ್ನೂ ಜಮಾ ಮಾಡದೇ ಡಿಪಿಆರ್ ತಯಾರಿಸಲು ಇಂಟಕ್ ಸಂಸ್ಥೆಯವರು ಮೊದಲ ಹಂತದಲ್ಲಿ 18,49,650 ರೂ. ಬಿಡುಗಡೆ ಮಾಡಲು ಕೋರಿದ್ದು, ಅವರ ಕೋರಿಕೆಯ ಮೇರೆಗೆ ಕಚೇರಿ ಟಿಪ್ಪಣಿ ತಯಾರಿಸಿಕೊಂಡು ಅಂದು ಮುಡಾ ಆಡಳಿತಾಧಿಕಾರಿಯಾಗಿದ್ದ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಸೇರಿದಂತೆ ತಾವು ನಮೂದಿಸಿರುವ ಮುಡಾದ ಎಲ್ಲಾ ಅಧಿಕಾರಿಗಳು ಸೇರಿ ಸದರಿ ಹಣದಲ್ಲೇ ಶೇ.5ರಷ್ಟು ಭದ್ರತಾ ಠೇವಣಿಯನ್ನು ಕಟಾಯಿಸಿಕೊಂಡು ಇಂಟಕ್ ಸಂಸ್ಥೆಗೆ 15,83,175 ರೂ.ಗಳ ಚೆಕ್ ಅನ್ನು 2023ರ ಡಿ.22ರಂದು ನೀಡಿದ್ದಾರೆ ಎಂದು ನಾಗರಾಜ್ ದೂರಿನಲ್ಲಿ ಆರೋಪಿಸಿದ್ದಾರೆ.

ಇಂಟಕ್ ಸಂಸ್ಥೆಗೆ ಮುಡಾದಿಂದ 15.83 ಲಕ್ಷ ರೂ.ಗಳ ಚೆಕ್ ಅನ್ನು ನೀಡಿದಾಗಲೂ ಕುಕ್ಕರಹಳ್ಳಿ ಕೆರೆ ಮುಡಾ ಸ್ವಾಧೀನದಲ್ಲಿರಲಿಲ್ಲ ಎಂಬುದನ್ನು ಉಲ್ಲೇಖಿಸಿರುವ ಅವರು, 2024ರ ಜ.20ರಂದು ಮುಡಾ ವಲಯ-4ರ ವಲಯಾಧಿಕಾರಿ, ಮೈಸೂರು ವಿವಿಯ ಕುಲಸಚಿವರಿಗೆ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಸಂಬಂಧ ಡಿಪಿಆರ್ ತಯಾರಿಸುವ ಸಲುವಾಗಿ ಕೆರೆಯನ್ನು ಮುಡಾಗೆ ಹಸ್ತಾಂತರಿಸುವಂತೆ ಪತ್ರ ಬರೆದಿದ್ದು, ಇದರ ಆಧಾರದ ಮೇರೆಗೆ ಮೈಸೂರು ವಿವಿ ಕುಲಪತಿ ಎನ್.ಕೆ. ಲೋಕನಾಥ್ ಹಾಗೂ ಕುಲಸಚಿವೆ ವಿ.ಆರ್.ಶೈಲಜಾ, ಕೆರೆಯನ್ನು ಮುಡಾ ಸ್ವಾಧೀನಕ್ಕೆ ನೀಡಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ನಾಗರಾಜ್ ದೂರಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿರುವ ಹಲವಾರು ಪ್ರತಿಭಾವಂತ ವಿದ್ಯಾರ್ಥಿಗಳು ವಿಷಯ ತಜ್ಞರು, ಕುಕ್ಕರಹಳ್ಳಿ ಕೆರೆ ಸಂರಕ್ಷಣೆಗಾಗಿ ಉಚಿತವಾಗಿ ಯೋಜನಾ ವರದಿ ತಯಾರಿಸಲು ಮುಂದೆ ಬಂದರೂ ಅದನ್ನು ಪುರಸ್ಕರಿಸದೇ ಇಂಟಕ್ ಸಂಸ್ಥೆಗೆ ಕುಕ್ಕರಹಳ್ಳಿ ಕೆರೆ ಹಸ್ತಾಂತರಿಸಿರುವುದು ಹಣ ಲಪಟಾಯಿಸುವ ಉದ್ದೇಶವಾಗಿದ್ದು, ಇದು ಕಾನೂನು ಬಾಹಿರ. ಮೈಸೂರು ವಿವಿ ವ್ಯಾಪ್ತಿಯಲ್ಲೇ ಭೂ ವಿಜ್ಞಾನ, ಪರಿಸರ ಹಾಗೂ ನೀರಿನ ಗುಣಮಟ್ಟ ಪರೀಕ್ಷೆ ಮತ್ತು ವಿಶ್ಲೇಷಣೆ ಪ್ರಯೋಗಾಲಯಗಳಿದ್ದರೂ, ಈ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುವ ವಿಷಯ ಪರಿಣಿತರ ಅಭಿಪ್ರಾಯವನ್ನೂ ಪಡೆಯದೆ, ದೂರದ ನವದೆಹಲಿಯ ಇಂಟಕ್ ಸಂಸ್ಥೆಯೊಂದಿಗೆ ಡಿಪಿಆರ್ ತಯಾರಿಸಲು ಒಪ್ಪಂದ ಮಾಡಿಕೊಂಡು ಕೆರೆಯನ್ನು ಹಸ್ತಾಂತರಿಸಿರುವುದು ಅನುಮಾನಾಸ್ಪದವಾಗಿದೆ ಎಂದು ಅವರು ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ನಾಳೆ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ; ನಿರ್ವಹಣೆ ಕಾರ್ಯಾಗಾರ

ಮೈಸೂರು, ಜೂ.20-ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಟೀಂ ವತಿಯಿಂದ ದಟ್ಟಗಳ್ಳಿಯಲ್ಲಿರುವ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಭಾಂಗಣದಲ್ಲಿ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತು ಜೂ.22ರಂದು ಬಾಧ್ಯಸ್ಥರ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 9.30ಕ್ಕೆ ನೋಂದಣಿ ಆರಂಭವಾಗಲಿದ್ದು, 10 ಗಂಟೆಗೆ ಇಂಟೆಕ್ ಸಂಸ್ಥೆಯ ಪ್ರಧಾನ ನಿರ್ದೇಶಕ ಮನು ಭಟ್ನಾಗರ್ ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ಮುಡಾ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಪ್ರಧಾನ ವಾಸ್ತುಶಿಲ್ಪಿ ಪ್ರೊ. ಬಿ.ಎಸ್.ರಾವ್ ವಿಚಾರ ಮಂಡಿಸಲಿದ್ದಾರೆ.

ನಂತರ 10.30ಕ್ಕೆ ಇಂಟೆಕ್ ಪ್ರಧಾನ ನಿರ್ದೇಶಕ ಮನು ಭಟ್ನಾಗರ್ ಅವರು ಕುಕ್ಕರಹಳ್ಳಿ ಕೆರೆಯ ಡಾಟಾ ಬೇಸ್ ಪ್ರಸ್ತುತಪಡಿಸುವರು. ಪಾರಂಪರಿಕ ತಜ್ಞ ಪ್ರೊ. ಕೆ.ಎಸ್.ರಂಗರಾಜು ಅವರು ಕುಕ್ಕರಹಳ್ಳಿ ಕೆರೆಯ ಐತಿಹಾಸಿಕ ವಿಷಯ ಮತ್ತು ಪ್ರಸ್ತುತ ಸನ್ನಿವೇಶವನ್ನು ಪ್ರಸ್ತುತಪಡಿಸುವರು. ಎನ್‌ಐಇ ಕಾಲೇಜಿನ ನಿವೃತ್ತ ಪ್ರೊ.ಡಾ.ಆರ್.ಯದುಪತಿ ಪುಟ್ಟಿ ಅವರು ಕುಕ್ಕರಹಳ್ಳಿ ಕೆರೆಯ ನೀರು ನಿರ್ವಹಣೆ ಮತ್ತು ಜಲ ವಿಜ್ಞಾನದ ಬಗ್ಗೆ ಪ್ರಸ್ತುತಪಡಿಸಲಿದ್ದು, ವೆಟ್ ಲ್ಯಾಂಡ್ ಕನ್ಸರ್‌ವೇಷನ್ ತಜ್ಞ ಯು.ಎನ್.ರವಿಕುಮಾರ್ ಅವರು, ಪೂರ್ಣಯ್ಯ ನಾಲೆ ಬಗ್ಗೆ ವಿವರಿಸಲಿದ್ದಾರೆ. ನಂತರ ಕರ್ನಾಟಕ ನಗರ ನೀರು ಸರಬರಾಜು ನಿಗಮದ ಆಸೀಫ್ ಖಲೀಲ್ ಅಭಿಪ್ರಾಯ ಮಂಡಿಸಲಿದ್ದು, ಪರಿಸರ ತಜ್ಞ ಸಂಪತ್ ಗಿರೀಶ್ ಕುಕ್ಕರಹಳ್ಳಿಕೆರೆ ಜಲ ವೈವಿಧ್ಯತೆ ಬಗ್ಗೆ ವಿಷಯ ಪ್ರಸ್ತಾಪಿಸುವರು. ಪರಿಸರ ವಿಜ್ಞಾನ ತಜ್ಞ ಡಾ. ಮೇವಾಸಿಂಗ್ ಅಭಿಪ್ರಾಯ ಮಂಡಿಸಲಿದ್ದು, ಇಂಟೆಕ್ ಟೀಂ ವಾಟರ್ ಗ್ರೂಪ್ ಬಗ್ಗೆ ಚರ್ಚೆ ನಡೆಸಲಿದೆ. ಅಂದು ಬೆಳಗ್ಗೆ 10 ಗಂಟೆಗೆ ಆರಂಭವಾಗುವ ಕಾರ್ಯಾಗಾರ ಸಂಜೆ 5ಕ್ಕೆ ಮುಕ್ತಾಯವಾಗಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.06.2024 ಶುಕ್ರವಾರ, ಮಳೆ ನಕ್ಷತ್ರ: ಮೃಗಶಿರ, 08.06.2024ರಿಂದ 21.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ರೀಜುವೆನೇಷನ್ ಕುರಿತು ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಮಾಹಿತಿ ಮತ್ತು ಗ್ರಂಥಾಲಯ ವಿಜ್ಞಾನ ಅಲ್ಯೂಮ್ನಿ ನೆಟ್‌ವರ್ಕ್ :** ಅಕಾಡೆಮಿಕ್ ಪಬ್ಲಿಷಿಂಗ್, ಲೈಬ್ರರೀಸ್ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮಾಜಿ ನಿರ್ದೇಶಕ ಪದ್ಮಭೂಷಣ ಪ್ರೊ.ಪಿ.ಬಲರಾಮ್, ಪ್ರಾಸ್ತಾವಿಕ ನುಡಿ: ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ ಡೀನ್ ಪ್ರೊ.ಶ್ರೀನಾಥ್ ಶ್ರೀನಿವಾಸ, ಗೌರವ ಅತಿಥಿಗಳು: ಡಾ.ಶಾಲಿನಿ ಆರ್.ಅರಸ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ

■ **ದಕ್ಷಿಣ ನೈಋತ್ಯ ರೈಲ್ವೆ :** ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ: ಅಜಾದಿ ಕಾ ಅಮೃತ ಮಹೋತ್ಸವ ಉದ್ಯಾನವನ, ಬೆಳಗ್ಗೆ 7ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ ಮುಂಭಾಗ, ಬೆಳಗ್ಗೆ 7.30ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ :** ಅಂತಾರಾಷ್ಟ್ರೀಯ ಯೋಗ ದಿನ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಭಾರತೀ ಯೋಗಧಾಮ ಸಂಸ್ಥಾಪಕ ಡಾ. ಕೆ.ಎಲ್. ಶಂಕರನಾರಾಯಣ ಜೋಯಿಸ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷ ಅಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಶಿಕ್ಷಣ ಸಂಸ್ಥೆ ಸಭಾಂಗಣ, ಬೆಳಗ್ಗೆ 6ಕ್ಕೆ.

■ **ಕೋರಮಂಡಲ್ ಶುಗರ್ಸ್ ಲಿಮಿಟೆಡ್, ಬಿ.ಎಸ್. ನಿಜಲಿಂಗಪ್ಪ ಶುಗರ್ ಇನ್‌ಸ್ಟಿಟ್ಯೂಟ್, ಬೆಳಗಾವಿ :** ದಕ್ಷಿಣ ಕರ್ನಾಟಕದ 22ನೇ ಸಕ್ಕರೆ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಾಗಾರ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ವಿದ್ಯಾಗಣಪತಿ ಹಾಗೂ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ :** 5ನೇ ವರ್ಷದ ಶ್ರೀನಿವಾಸ ಕಲ್ಯಾಣೋತ್ಸವ, ಬೆಳಗ್ಗೆ 7ಕ್ಕೆ ಸುಪ್ರಭಾತ ಸೇವೆ, ಕಾಶಿಯಾತ್ರೆ, ಕಂಕಣಧಾರಣೆ, ಅಂತರಪಟ, ಅಕ್ಷತಾರೋಹಣ, ಕನ್ಯಾದಾನ, ಶ್ರೀನಿವಾಸಸ್ವಾಮಿ ಅವರಿಗೆ ಕಲ್ಯಾಣೋತ್ಸವ, ಮಹಾಮಂಗಳಾರತಿ, ಪುಷ್ಪವೃಷ್ಟಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ವಿಷ್ಣು ದೀಪೋತ್ಸವ, 7.30ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ವಿನಾಯಕನಗರ.

■ **ಕರ್ನಾಟಕ ಚಾಲಕರ ಒಕ್ಕೂಟ, ಮೈಸೂರು ಜಿಲ್ಲಾ ಘಟಕ :** ಚಾಲಕರ ಕ್ಷೇಮಾಭಿವೃದ್ಧಿ ಬೃಹತ್ ಮೇಳ, ಸ್ಥಳ: ಪುರಭವನ, ಬೆಳಗ್ಗೆ 11ಕ್ಕೆ

■ **ಓದುಗ ಪ್ರಕಾಶನ, ಮೈಸೂರು ಕಲ್ಚರಲ್ ಅಸೋಸಿಯೇಷನ್, ಭಾರತೀ ಯೋಗಧಾಮ :** ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ ಯೋಗ ಸಂಗೀತ, ಮೈಸೂರು ಪರಂಪರೆ ಕೃತಿ ಬಿಡುಗಡೆ ಹಾಗೂ ಯೋಗ ದರ್ಶಿನಿ ಪ್ರದರ್ಶನ, ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಭಾರತೀಯೋಗಧಾಮ ಸಂಸ್ಥಾಪಕ ಡಾ. ಕೆ.ಎಲ್. ಶಂಕರನಾರಾಯಣ ಜೋಯ್ಸ್, ಕೃತಿ ಬಿಡುಗಡೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉಪಸ್ಥಿತರು : ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ. ನಾಗೇಶ್, ಓದುಗ ಪ್ರಕಾಶನದ ಪ್ರಕಾಶ್ ಚಿಕ್ಕಪಾಳ್ಯ, ದಿ ಸ್ಟಾರ್ ಆಫ್ ಯೋಗ ಪ್ರಶಸ್ತಿ : ಅಂತಾರಾಷ್ಟ್ರೀಯ ಯೋಗ ಗುರು ಡಾ. ಪಿ.ಎನ್. ಗಣೇಶ್‌ಕುಮಾರ್, ಯೋಗ ತಜ್ಞ ಡಾ. ಎ.ಎಸ್. ಚಂದ್ರಶೇಖರ್, ದಿ ರೈಸಿಂಗ್ ಸ್ಟಾರ್ ಆಫ್ ಯೋಗ ಪ್ರಶಸ್ತಿ : ಅಂತಾರಾಷ್ಟ್ರೀಯ ಯೋಗ ಪಟುಗಳಾದ ಕು. ಎಚ್. ಖುಷಿ, ಕು. ಅಮೂಲ್ಯ ಕು. ಆರ್. ಅಂಕಿತ, ಸ್ಥಳ: ಭಾರತೀ ಯೋಗಧಾಮ, ವಿಜಯಗಿರಿ, ಉತ್ತನಹಳ್ಳಿ, ಬೆಳಗ್ಗೆ 10.30ಕ್ಕೆ

■ **ಡಿಪಾರ್ಟ್‌ಮೆಂಟ್ ಆಫ್ ಯೋಗ, ಜೆಎಸ್‌ಎಸ್ ಆಸ್ಪತ್ರೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ: ಶ್ರೀ ಶಿವರಾತ್ರೀಶ್ವರ ಭವನ, ಜೆಎಸ್‌ಎಸ್ ಓಪಿಡಿ ಬ್ಲಾಕ್ ಹಿಂಭಾಗ, ಮಧ್ಯಾಹ್ನ 3 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು-ಬಾನುಲಿ ಸರಣಿ. ರಚನೆ-ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ-ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಸುಕನ್ಯಾ. ಆರ್, ಮುಖ್ಯಸ್ಥರು, ವಾಣಿಜ್ಯ ಶಾಸ್ತ್ರ ಅಧ್ಯಯನ ಹಾಗೂ ಸಂಶೋಧನಾ ವಿಭಾಗ. ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ- ಎನ್.ಕೇಶವಮೂರ್ತಿಮ, 6.50 ರೈತರಿಗೆ ಸಲಹೆ, 7.15 ಯೋಗೋತ್ಸವ: ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 9.00 ನಮ್ಮ ಆರೋಗ್ಯ: ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ವಿಶೇಷ ಕಾರ್ಯಕ್ರಮ. 'ಯೋಗೋತ್ಸವ' ಕುರಿತು ಮೈಸೂರು ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ ಅವರೊಂದಿಗೆ ಮಾತುಕತೆ. ನಂತರ 'ಯೋಗ ಮತ್ತು ಮಹಿಳಾ ಸಬಲೀಕರಣ' ಕುರಿತು ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರು ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಡಾ.ಗಜಾನನ ಹೆಗಡೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಸಿ.ವಿಜೇಶ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ-ಸೈಕಲ್ ಸವಾರಿ ಮಾತುಗಳ ಲಹರಿ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ- ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು- ಮೈಸೂರು ರಂಗಸ್ವಾಮಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ-ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ- ಎಂ.ಎಲ್. ವಸಂತಕುಮಾರಿ, 4.00 ಮಹಿಳಾರಂಗ-ಸಖೀ ಸಾಹಿತ್ಯ, 4.30 ವೃತ್ತಿ ಮಾರ್ಗದರ್ಶನ: ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಂದರೆ ಜರ್ನಲಿಸಂ ಅಂಡ್ ಮಾಸ್ ಕಮ್ಯುನಿಕೇಶನ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ.ಸಪ್ನಾ. ಎಂ.ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 5.30 Pashudhan Se Behthar Jeevan, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ-ತೊಗರಿ ಬೇಸಾಯ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ಮಹದೇವು ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ರಸಮಂಜರಿ: ಸನಾತನ ಶಬ್ದಗಳ ವಿಶೇಷಾರ್ಥಗಳು-ಈ ಕುರಿತು ಮಾತ ನಾಡುವವರು ಡಾ. ಗುರುಪಾದ. ಕೆ.ಹೆಗಡೆ, ಸ್ವರಚಿತ ಮಂಗಳಾಷ್ಟಕ-ಮಂಜುನಾಥ ಭಟ್ ಗೊಡ್ಲಬೀಳು ಅವರಿಂದ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಟಿ.ಪಿ.ವೈದ್ಯನಾಥನ್-ಹಾಡುಗಾರಿಕೆ, 10.00 ತತ್ವ ಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ-ಡಾ.ಮೈಸೂರು ಉಮೇಶ್, 10.30 ಸವಿನೆನಪು

■ **ಸಂಧ್ಯಾ ಸುರಕ್ಷಾ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ :** ಯೋಗ ಸಾಧಕರಿಗೆ ಗೌರವ ಸಮರ್ಪಣೆ ಹಾಗೂ ಶಾಕಂಬರಿ ಯೋಗ ಶಾಲೆಯ ಶಿಕ್ಷಕರಿಗೆ ಸನ್ಮಾನ, ಉಪಸ್ಥಿತರು : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಸಿ.ವಿ. ಕೇಶವಮೂರ್ತಿ, ರಘುರಾಂ ವಾಜಪೇಯಿ, ಎಂ.ಎನ್. ನವೀನ್‌ಕುಮಾರ್, ಶ್ರೀಮತಿ ಪುಷ್ಪಾ ಅಯ್ಯಂಗಾರ್, ಶ್ರೀಮತಿ ವಿಜಯಲಕ್ಷ್ಮಿ, ಸ್ಥಳ: ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ, ಶ್ರೀರಾಂಪುರ 2ನೇ ಹಂತ, ಸಂಜೆ 5.30ಕ್ಕೆ.

■ **ಗಾನಭಾರತೀ :** ವಿದುಷಿ ಸುರಭಿ ಭಾರದ್ವಾಜ್, ಅದಿತಿ, ಕೃತ್ತಿಕ ಸಾರ್ಥವಳ್ಳಿ, ಸಾನ್ವಿ ವೀರಭದ್ರ ಅವರಿಂದ ಭರತನಾಟ್ಯ ಕಾರ್ಯಕ್ರಮ, ಹರ್ಷಿತ ವಿದ್ಯ-ಗಾಯನ, ವಿದ್ವಾನ್ ಡಿ.ವಿ. ಪ್ರಸನ್ನಕುಮಾರ್- ನಟುವಾಂಗ, ವಿದ್ವಾನ್ ವಿನಯ್ ನಾಗರಾಜನ್-ಮೃದಂಗ, ವಿದ್ವಾನ್ ಪ್ರಾದೇಶ್ ಆಚಾರ್-ಪಿಟೀಲು, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಗಿರಿಜಾ ರವಿಶಂಕರ್ ಅವರಿಂದ ಗಾಯನ, ಕು. ಕೆ.ಮಹತೀ-ಪಿಟೀಲು, ವಿದ್ವಾನ್ ಎಂ.ಎಸ್. ಜಯರಾಮ್-ಮೃದಂಗ, ವಿದ್ವಾನ್ ಎಂ.ಜೆ.ಕಿರಣ್‌ಕುಮಾರ್-ಘಟಂ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ:** ಬೆಳದಿಂಗಳ ಸಂಗೀತ-268, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಬಾಂಬೆ ವಿ.ಆನಂದ್, ವಿದ್ವಾನ್ ವೇದಜ್ಞ ನರಸಿಂಹ ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಆನೂರು ವಿನೋದ್ ಶ್ಯಾಮ್-ಮೃದಂಗ, ವಿದ್ವಾನ್ ಸುನಾದ್ ಆನೂರ್- ಖಂಜರಿ, ಸ್ಥಳ: ಸುತ್ತೂರು ಮಠ, ಸಂಜೆ 6ಕ್ಕೆ.

ಹಿರಿಯ ಜಾನಪದ ವಿದ್ವಾಂಸರಾಗಿದ್ದ ಡಾ.ಜಯಲಕ್ಷ್ಮೀ ಸೀತಾಪುರರಿಗೆ ನುಡಿನಮನ



ಮೈಸೂರು, ಜೂ.20(ಎಸ್‌ಬಿಡಿ)– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಕನ್ನಡ ಲೇಖಕಿಯರ ಟ್ರಸ್ಟ್ ಸಹಯೋಗದಲ್ಲಿ ಹಿರಿಯ ಜಾನಪದ ವಿದ್ವಾಂಸರಾಗಿದ್ದ ಡಾ.ಜಯಲಕ್ಷ್ಮೀ ಸೀತಾಪುರ ಅವರಿಗೆ ನುಡಿನಮನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಯಲಕ್ಷೀ ಸೀತಾಪುರ ಅವರ ಸಹೋದ್ಯೋಗಿಗಳಾಗಿದ್ದವರು, ಸಾಹಿತ್ಯ ವಲಯದ ಹಿರಿಯರು ಹಾಗೂ ಒಡನಾಡಿಗಳು ಹಲವು ವಿಚಾರಗಳನ್ನು ಹಂಚಿಕೊಂಡರು.

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರು ಡಾ.ಜಯಲಕ್ಷ್ಮೀ ಸೀತಾಪುರ ಅವರು ಸಾಹಿತ್ಯ ಕ್ಷೇತ್ರಕ್ಕೆ ಅದರಲ್ಲೂ ವಿಶೇಷವಾಗಿ ಜಾನಪದ ಸಾಹಿತ್ಯಕ್ಕೆ ನೀಡಿರುವ ಅವಿಸ್ಮರಣೀಯ ಕೊಡುಗೆಯನ್ನು ಬಣ್ಣಿಸಿದರು.

ಸುಯೋಗ ಆಸ್ಪತ್ರೆ ಮುಖ್ಯಸ್ಥರೂ ಆದ ವೈದ್ಯ ಸಾಹಿತಿ ಡಾ.ಸಿ.ಪಿ.ಯೋಗಣ್ಣ ಮಾತನಾಡಿ, ಜಯಲಕ್ಷೀ ಸೀತಾಪುರ ಅವರಿಗೆ ಅಪಘಾತ ಆಗಿದೆ ಎಂದು ಕರೆ ಬಂದ ಕೂಡಲೇ ಅವರನ್ನು ಆಸ್ಪತ್ರೆಗೆ ಕರೆತರುವಂತೆ ತಿಳಿಸಿದೆ. ಎಲ್ಲಾ ರೀತಿಯ ವೈದ್ಯಕೀಯ ಪರೀಕ್ಷೆ ನಡೆಸಲಾಯಿತು. ಸದ್ಯ ಮೆದುಳಿನಲ್ಲಿ ಯಾವುದೇ ಹಾನಿಯಾಗಿರಲಿಲ್ಲ. ಬೆನ್ನಿನ ಮೂಳೆ ಮುರಿದಿತ್ತಾದರೂ ಅದು ಮೆದುಳಿಗೆ ಸಂಪರ್ಕಿಸುವ ನರವ್ಯೂಹಕ್ಕೆ ತಾಕಿರಲಿಲ್ಲ. ಹಾಗಾಗಿ ಶೀಘ್ರ ಗುಣಮುಖರಾಗುತ್ತಾರೆಂದು ಭಾವಿಸಿದ್ದೆವು. ಹಾಗೆಯೇ ಮೂರು ದಿನದಲ್ಲೇ ನಡೆಯಲಾರಂಭಿಸಿದ್ದರು. ಕಾರ್ಯನಿಮಿತ್ತ ನಾನು ಶಿವಮೊಗ್ಗಕ್ಕೆ ಹೋಗಿದ್ದಾಗ ಆಸ್ಪತ್ರೆಯಿಂದ ಕರೆ ಮಾಡಿ, ಎಲ್ಲಾ ಪರೀಕ್ಷೆಯಲ್ಲೂ ನಾರ್ಮಲ್ ಇದೆ ಆದರೂ ಏದುಸಿರು ಜಾಸ್ತಿಯಾಗಿರುವುದರಿಂದ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ರಕ್ತ ಹೆಪ್ಪುಗಟ್ಟಿ ಶ್ವಾಸಕೋಶದ ರಕ್ತನಾಳಕ್ಕೆ ಅಡಚಣೆ ಆಗಿ ಮೃತಪಟ್ಟರು. ಲಕ್ಷದಲ್ಲಿ ಒಬ್ಬರಿಗೆ ಈ ರೀತಿಯಾಗುತ್ತದೆ. ಯಾವುದೇ ಪರೀಕ್ಷೆಯಲ್ಲೂ ಈ ಸಮಸ್ಯೆ ಪತ್ತೆಯಾಗಲಿಲ್ಲ. ನನ್ನ ಜೀವನದಲ್ಲಿ ಪ್ರಭಾವ ಬೀರಿದ ಜಯಲಕ್ಷೀ ಅವರ ಅಗಲಿಕೆ ತುಂಬಾ ನೋವು ತಂದಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಜಯಲಕ್ಷ್ಮೀ ಅವರು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ(ಎಫ್‌ಪಿಎಐ) ಸಂಸ್ಥೆಯಲ್ಲೂ ಅತ್ಯುತ್ತಮ ಸೇವೆ ಸಲ್ಲಿಸಿದರು. ಮನೆ ಮನೆಗೆ ಹೋಗಿ ಜನರ ಆರೋಗ್ಯ ಮಾಹಿತಿ ಕಲೆ ಹಾಕುತ್ತಿದ್ದರು. ಆರೋಗ್ಯ ಇಲಾಖೆಯವರು ನಮ್ಮ ಬಳಿ ಮಾಹಿತಿ ಪಡೆಯುತ್ತಿದ್ದರು. ಜನಸಂಖ್ಯೆ ನಿಯಂತ್ರಣದ ಬಗ್ಗೆ ಜನರಿಗೆ ಮನವರಿಕೆ ಮಾಡುತ್ತಿದ್ದರು ಎಂದು ತಿಳಿಸಿದರು.


ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಮಾತನಾಡಿ, ನನ್ನ ಸಹೋದ್ಯೋಗಿಯಾಗಿದ್ದ ಜಯಲಕ್ಷ್ಮೀ ಸೀತಾಪುರ ಅವರು ಜಾನಪದದ ಎಲ್ಲಾ ಪ್ರಕಾರಗಳು ಪುಂಖಾನುಪುಂಖವಾಗಿ ಹೇಳುತ್ತಿದ್ದರು. ಅವರ ಪಾಠ ಕೇಳಲು ಬೇರೆ ವಿದ್ಯಾರ್ಥಿಗಳೂ ತರಗತಿಯಲ್ಲಿ ಕೂರುತ್ತಿದ್ದರು. ಜಾನಪದ ಅಧ್ಯಯನಕ್ಕೆ ಐವತ್ತು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ನಡೆಸಲಾಗುವ ಸಮಾರಂಭದಲ್ಲಿ ಜಯಲಕ್ಷ್ಮೀ ಸೀತಾಪುರ ಹೆಸರಿನಲ್ಲೂ ಕಾರ್ಯಕ್ರಮ ನಡೆಸಲಾಗುವುದು ಎಂದರು.

ಪ್ರೊ.ಪ್ರೀತಿ ಶುಭಚಂದ್ರ, ಜಾನಪದದೊಂದಿಗೆ ಜಯಲಕ್ಷ್ಮೀ ಅವರಿಗೆ ಕರುಳ ಬಳ್ಳಿಯ ಸಂಬಂಧವಿತ್ತು. ಬದುಕಿನುದ್ದಕ್ಕೂ ಅವರು ಸಂಬಂಧಗಳನ್ನು ಪೋಷಿಸಿದರು. ಅಪಾರ ಆತ್ಮವಿಶ್ವಾಸ ಹಾಗೂ ಕನಸುಗಳನ್ನು ಹೊಂದಿದ್ದರು ಎಂದು ಸ್ಮರಿಸಿಕೊಂಡರು.

ಪ್ರೊ.ಡಿ.ಕೆ.ರಾಜೇಂದ್ರ ಮಾತನಾಡಿದರು. ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಶೇಖರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರೊ.ಎಂ. ನಂಜಯ್ಯ ಹೊಂಗನೂರು, ಮೀನಾ ಮೈಸೂರು, ಬಿ.ಸಿ.ಮಂಜುಳಾ, ಪ್ರೊ.ಕ್ಯಾತನಹಳ್ಳಿ ರಾಮಣ್ಣ, ಪ್ರೊ.ಮೈಲಹಳ್ಳಿ ರೇವಣ್ಣ ಮತ್ತಿತರರು ನುಡಿನಮನ ಸಲ್ಲಿಸಿದರು.







ನೊಂದಣಿ ಸಂಖ್ಯೆ :4/83–84 ಸ್ಥಾಪನೆ: 1983 ಫೋನ್: 0821–247832

ಸಿದ್ದಾರ್ಥ ಸ್ಪೋರ್ಟ್ಸ್ ಕ್ಲಬ್ (ರಿ.)
Siddartha Sports Club (R.)
Sanmarga 2nd Stage, Siddhartha Nagar, Mysore-570011
ಸನ್ಮಾರ್ಗ 2ನೇ ಹಂತ, ಸಿದ್ದಾರ್ಥ ನಗರ, ಮೈಸೂರು–570011.

ಟೆಂಡರ್ ಪ್ರಕಟಣೆ


ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಅರ್ಹ ಲೋಕೋಪಯೋಗಿ ಇಲಾಖೆ ನೋಂದಾಯಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಟೆಂಡರ್ ಅರ್ಜಿ ಶುಲ್ಕ ರೂ. 500.00 ಕಾಮಗಾರಿ ವಿವರ ಈ ಕೆಳಕಂಡಂತಿದೆ.

ಕ್ರಸಂ.	ಕೆಲಸದ ವಿವರ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಇ.ಎಂ.ಡಿ (ಸಾವಿರ ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಮಗಾರಿ ಪೂರ್ಣಗೊಳಿಸುವ ಅವಧಿ
1	ಆಧುನಿಕ ಶೌಚಾಲಯ ನಿರ್ಮಾಣ	27.5	68.75	ಮೂರನೇ ದರ್ಜೆ ಹಾಗೂ ಮೇಲ್ಪಟ್ಟು	ಆರು ತಿಂಗಳು (ಮಳೆಗಾಲ ಸೇರಿ)

ಟೆಂಡರ್ ಅರ್ಜಿ ಪಡೆಯಲು ಕೊನೆಯ ದಿನಾಂಕ : 28–06–2024
ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 03–07–2024
ಟೆಂಡರ್ ತೆರೆಯುವ ದಿನಾಂಕ: 04–07–2024 ಸಮಯ ಬೆಳಿಗ್ಗೆ 11 ಗಂಟೆಗೆ
ಯಾವುದೇ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯ ಸದರಿ ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸಬಹುದಾಗಿರುತ್ತದೆ.

ಗೌ॥ ಕಾರ್ಯದರ್ಶಿಗಳು
ಸಿದ್ದಾರ್ಥ ಸ್ಪೋರ್ಟ್ಸ್ ಕ್ಲಬ್ (ರಿ.)

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ದೂರವಾಣಿಯನ್ನು ಸಂಪರ್ಕಿಸಿ: ಮೊ.ಸಂಖ್ಯೆ: 9448247376





ನಕ್ಕರೆ ಅದೇ ಸ್ವರ್ಗ

ಅತ್ತೆ : ಏನಮ್ಮ? ಚಪಾತಿ ಹಿಟ್ಟಿನ ಮೇಲೆ ದೇವರ ಘಂಟೆ ಯಾಕೆ ಇಟ್ಟಿದ್ದೀಯಾ?

ಸೊಸೆ : ಅಡುಗೆ ಬುಕ್‌ನಲ್ಲಿ ಕೊಟ್ಟಿದ್ದಾರೆ ಹಿಟ್ಟು ಕಲಸಿ ಒಂದು ಘಂಟೆ ಇಡಿ ಅಂತ!

ಮೈಸೂರು ಮಿತ್ರ

ಶುಕ್ರವಾರ, 21 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅಳಿಸಲಾಗದ ಚಿತ್ರ ಪ್ರಕೃತಿ, ಕದಿಯಲಾಗದ ವಸ್ತು ವಿದ್ಯೆ, ಸೋಲಿಸಲಾಗದ ಶಕ್ತಿ ಸತ್ಯ, ಬಿಡಿಸಲಾಗದ ಬಂಧನ ಪ್ರೇಮ, ಮರೆಯಲಾಗದ ನೆನಪು ಸ್ನೇಹ– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನೂರಾರು ರೋಗಿಗಳನ್ನು ಕೊಂದು ಒಬ್ಬ ವೈದ್ಯ ಆದಂತೆ !

ನಿಮ್ಮ ಪತ್ರಗಳು

ಚುನಾವಣೆ ನಡೆಸಿ ಸಂವಿಧಾನದ ಮೇಲಿನ ಗೌರವ ಎತ್ತಿ ಹಿಡಿಯಿರಿ

ಮಾನ್ಯರೆ,

ಜನರಿಂದ ಜನರಿಗಾಗಿ ಇರುವುದು ಜನರ ಸರಕಾರ. ಇದುವೇ ಪ್ರಜಾಪ್ರಭುತ್ವದ ಮೂಲ. ಅಧಿಕಾರಿಶಾಹಿಯನ್ನು ನಿಯಂತ್ರಣದಲ್ಲಿರಿಸಿಕೊಂಡು ನಾಗರಿಕ ಸಮಾಜದ ಬೇಕು–ಬೇಡಗಳ ಬಗ್ಗೆ ಆಲೋಚನೆ ಮತ್ತು ಅನುಷ್ಠಾನಕ್ಕೆ ತುಡಿಯುವ ಮನಸ್ಸುಳ್ಳ ಸಮರ್ಥರನ್ನು ಆಯ್ಕೆ ಮಾಡುವ ಮೂಲಕ ನಮ್ಮನ್ನು ನಾವೇ ಆಳ್ವಿಕೆ ಮಾಡಿಕೊಳ್ಳಲು ಸಂವಿಧಾನದತ್ತವಾಗಿರುವ ಪ್ರಕ್ರಿಯೆಯೇ ಚುನಾವಣೆ.

ಪ್ರತಿ ಐದು ವರ್ಷಕ್ಕೊಮ್ಮೆ ಲೋಕಸಭೆ, ವಿಧಾನಸಭೆ ಚುನಾವಣೆ ನಡೆಯುವಂತೆ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳೂ ಸೇರಿದಂತೆ ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಿಗದಿತ ವೇಳೆಗೆ ನಡೆಯಬೇಕಲ್ಲವೆ? ಸ್ಥಳೀಯ ಸರಕಾರಗಳೂ ಬಲಿಷ್ಠವಾಗಿ ರೂಪುಗೊಳ್ಳಬೇಕೆಂಬುದು ಸಂವಿಧಾನದ ಆಶಯ. ಆದರೆ, ಇತ್ತೀಚೆಗೆ ಸರಕಾರಗಳು ಈ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ನಿರ್ಲಕ್ಷ್ಯ ತೋರುತ್ತಿರುವುದು ನಿಜಕ್ಕೂ ಪ್ರಜಾಪ್ರಭುತ್ವಕ್ಕೆ ಮಾಡುತ್ತಿರುವ ಅಪಮಾನವಾಗಿದೆ.

ಕ್ಷೇತ್ರ ಮರು ವಿಂಗಡಣೆ, ಮೀಸಲು ಬದಲಾವಣೆ, ಪ್ರವಾಹ ಅಥವಾ ಬರ ಇಂತಹ ಕಲ್ಪಿತ ನೆಪಗಳನ್ನು ಮುಂದಿಟ್ಟುಕೊಂಡು ಈ ಚುನಾವಣೆಗಳನ್ನು ಮುಂದೂಡುವಲ್ಲಿ ಸರಕಾರಗಳು ಹೊಣೆಗೇಡಿತನ ಪ್ರದರ್ಶನ ಮಾಡಿವೆ.

ಗ್ರಾಮೀಣ ಭಾರತವೇ ನೈಜ ಭಾರತ. ಇದು ನಮ್ಮ ದೇಶದ ಪ್ರಗತಿಯ ಮೂಲ ಮಂತ್ರ. ಗ್ರಾಮೋದ್ಧಾರಕ್ಕೆ ಇರುವ ಆಯಕಟ್ಟಿನ ಅಧಿಕಾರದ ವಲಯಗಳೇ ಈ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳು. ಸರ್ಕಾರದ ಬೇಜವಾಬ್ದಾರಿ ಮತ್ತು ವಿಳಂಬದಿಂದ ಮೂರು ವರ್ಷದಿಂದ ಇವುಗಳು ನಿರ್ಜೀವವಾಗಿವೆ. ಪ್ರಜಾಪ್ರಭುತ್ವದ ಮೆರುಗು ಹೆಚ್ಚಿಸುವ ಈ ಕೆಳ ಹಂತದ ಸೇವಾ ವಲಯಗಳಾದ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಕೂಡಲೇ ಚುನಾವಣೆ ನಡೆಸುವ ಮೂಲಕ ಸಂವಿಧಾನದ ಮೇಲಿನ ಗೌರವವನ್ನು ಎತ್ತಿಹಿಡಿಯಬೇಕಿದೆ.

–ವಿಕ್ರಮ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ, ಮೈಸೂರು.

ಸಿಗ್ನಲ್ ಲೈಟ್‌ಗಳನ್ನು ಸಮರ್ಪಕವಾಗಿ ಚಾಲನೆಗೊಳಿಸಿ

ಮಾನ್ಯರೆ,

ಮೈಸೂರು ನಗರದಲ್ಲಿ ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಹೊಸದಾಗಿ ಸಂಚಾರಿ ದೀಪಗಳನ್ನು ಪ್ರಮುಖ ಸ್ಥಳಗಳಲ್ಲಿ ಅಳವಡಿಸಲಾಗಿದೆ. ಉದಾಹರಣೆಗೆ ಜೆ.ಪಿ. ನಗರದ ಅಕ್ಕಮಹಾದೇವಿ ರಸ್ತೆಯ ವೃತ್ತದಲ್ಲಿ ಇತ್ತೀಚೆಗೆ ಹೊಸದಾಗಿ ಸಿಗ್ನಲ್ ಲೈಟ್ ಅಳವಡಿಸಲಾಗಿರುತ್ತದೆ. ಆದರೆ ಇದನ್ನು ಸಮರ್ಪಕವಾಗಿ ಚಾಲನೆಗೊಳಿಸುತ್ತಿಲ್ಲ.

ಯಾದವಗಿರಿಯ ತರಾಸು ವೃತ್ತ (ಮೈಸೂರು ಆಕಾಶವಾಣಿ ಸಮೀಪ)ದಲ್ಲಿಯೂ ಸಹ ಈ ಹಿಂದೆಯೇ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿತ್ತು. ಅಲ್ಲಿಯೂ ಸಹ ಸಮರ್ಪಕವಾಗಿ ಚಾಲನೆಗೊಳಿಸುತ್ತಿಲ್ಲ. ಈ ಎರಡು ಸ್ಥಳಗಳೂ ಯಾವಾಗಲೂ ಜನನಿಬಿಡವಾಗಿರುತ್ತದೆ.

ಆದಕಾರಣ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಈ ಎರಡೂ ಸ್ಥಳಗಳಲ್ಲಿ ಮತ್ತು ನಗರದ ಎಲ್ಲಾ ಸ್ಥಳಗಳಲ್ಲಿಯೂ ಸಮರ್ಪಕವಾಗಿ ಸಿಗ್ನಲ್ ಲೈಟ್‌ಗಳನ್ನು ಚಾಲನೆಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ.

– ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ಬಿಡಾಡಿ ಜಾನುವಾರುಗಳಿಗೆ ಕಡಿವಾಣ ಹಾಕಿ

ಮಾನ್ಯರೆ,



ಮೈಸೂರು ನಗರದ ಮತ್ತು ಸುತ್ತಮುತ್ತಲಿನ ಬಡಾವಣೆಗಳಲ್ಲಿ ಕೆಲವರು ತಾವು ಸಾಕಿರುವ ಜಾನುವಾರುಗಳನ್ನು ಮೇಯಲು ರಸ್ತೆಗೆ ಬಿಡುವುದರಿಂದ, ಮೈಸೂರು ನಗರದ ಮುಖ್ಯ ರಸ್ತೆಗಳು ಮತ್ತು ಹೆಚ್ಚಾಗಿ ರಿಂಗ್ ರೋಡ್‌ನ ಮಧ್ಯದಲ್ಲಿ (ರಾಮಕೃಷ್ಣನಗರ ಸರ್ಕಲ್‌ನಿಂದ, ನಂಜನಗೂಡು ರಿಂಗ್ ರೋಡ್ ತನಕವೂ) ಜಾನುವಾರುಗಳು, ರಾಜಾರೋಷವಾಗಿ ಓಡಾಡುವುದರಿಂದ ಇಲ್ಲಿ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಅನೇಕ ಕಡೆಗಳಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಕೆಲವೊಂದು ಸಲ ಸಾವು – ನೋವುಗಳು ಸಹ ಸಂಭವಿಸಿವೆ. ಮೈಸೂರಿನ ರಿಂಗ್ ರೋಡ್‌ಗಳಲ್ಲಿ ಅತಿ ಜಾಗರೂಕತೆಯಿಂದ ವಾಹನಗಳಲ್ಲಿ ಸಂಚರಿಸಬೇಕು. ಇಲ್ಲದಿದ್ದರೆ ಅಪಘಾತಗಳು ಗ್ಯಾರಂಟಿ.

ಈ ರೀತಿ ರಸ್ತೆಗೆ ದನಗಳನ್ನು ಮೇಯಲು ಬಿಡುವವರ ವಿರುದ್ಧ ನಗರ ಪಾಲಿಕೆ ಏನು ಕ್ರಮ ಕೈಗೊಂಡಿದೆ? ಒಂದು ವೇಳೆ ಇಂತಹ ಸಂದರ್ಭದಲ್ಲಿ ರಸ್ತೆ ಅಪಘಾತಗಳು ಸಂಭವಿಸಿದರೇ ಅದಕ್ಕೆ ನಗರಪಾಲಿಕೆಯೇ ಸಂಪೂರ್ಣ ಹೊಣೆಗಾರರಾಗಬೇಕು!

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು


ಕಾಲಾಯ ತಸ್ಮೈ ನಮಃ!


ಮಾನ್ಯರೇ,

ಬಣ್ಣ ಹಚ್ಚಿದ ನಟ ಸಿನಿಮಾ ರಂಗದಲ್ಲಿ
ಉದ್ದುದ್ದ ಡೈಲಾಗ್ ಹೊಡೆಯೋದು
ಹತ್ತಾರು ಜನರನ್ನು ಒಟ್ಟಿಗೆ ಬಡಿಯೋದು
ನಾಯಕಿಯ ಕೈ ಹಿಡಿದು ಕುಣಿಯೋದು
ಇದೆಲ್ಲ ಸಾಮಾನ್ಯ! ಆದರೆ..?
ಅದೇ ನಟ ನಿಜ ಜೀವನದಲ್ಲಿ....
ಗೆಳತಿಯೊಬ್ಬಳ ಹಿಂದೆ ಬಿದ್ದು
ವ್ಯಕ್ತಿಯೊಬ್ಬನನ್ನು ಸಾಯಿಸಿದ ಆಪಾದನೆಯಲ್ಲಿ,
ಪೊಲೀಸರ ಮುಂದೆ ಕೈಕಟ್ಟಿ ನಿಲ್ಲೋದು
ನ್ಯಾಯ ದೇವತೆಯ ಮುಂದೆ ತಲೆಬಾಗಿಸೋದು
ಕೂಡ ಸರ್ವೇಸಾಮಾನ್ಯ! ಏಕೆಂದರೆ...
ಎಲ್ಲರ ಕಾಲೆಳೆಯುತ್ತದೆ ಕಾಲ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮೈಸೂರಿಗೂ ಯೋಗಾ 'ಯೋಗ'...!





ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಇಂದು ಅಂತಾರಾಷ್ಟ್ರೀಯ ಯೋಗ ದಿನ. ತನ್ನಿಮಿತ್ತ ಈ ಲೇಖನ.

ಮನಸ್ಸು ದೇಹ ಮತ್ತು ಆತ್ಮಗಳ ಆರೋಗ್ಯಕ್ಕೆ ಇಂದು ಅನಿವಾರ್ಯವಾಗಿರುವ ಭಾರತದ ಯೋಗವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಚರಿಸಬೇಕು. ಜೂನ್ 21ನ್ನು 'ಅಂತಾರಾಷ್ಟ್ರೀಯ ಯೋಗ ದಿನ'ವನ್ನಾಗಿ ಘೋಷಿಸಬೇಕು...." ಇದು ನಮ್ಮ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ತಾವಷ್ಟೇ ಸ್ವಾಸ್ಥ್ಯದಿಂದಿದ್ದರೆ ಸಾಲದು. ಇಡೀ ವಿಶ್ವವೇ ಸ್ವಾಸ್ಥ್ಯದಿಂದ ಇರಬೇಕೆಂಬ ಸದಾಶಯದಿಂದ 2015 ರಂದು ನಡೆದ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ವಿಶ್ವಸಂಸ್ಥೆಯನ್ನು ಒತ್ತಾಯಿಸಿದ್ದರು. ಅವರ ಒತ್ತಾಯ ವ್ಯರ್ಥವಾಗಲಿಲ್ಲ. ವಿಶ್ವಸಂಸ್ಥೆ ಒಪ್ಪಿಕೊಂಡಿತು.

ಇಂಥಾ ಯೋಗ ವಿದ್ಯೆ ಒಂದು ಕಾಲದಲ್ಲಿ ಇಡೀ ಭರತ ಭೂಮಿಯಲ್ಲಿ ಯೋಗಾ ಯೋಗವೆಂದು ಮೆರೆದರೂ ನಂತರದ ಕಾಲಘಟ್ಟಗಳಲ್ಲಿ ಅಂದರೆ ಕಳೆದ ಹಲವು ಶತಮಾನಗಳಿಂದ ಮಸುಕಾಗಿ ಹೋಗಿತ್ತು. ಆದರೆ ಭಾರತದ ಪ್ರಾಚೀನ ಯೋಗ ವಿದ್ಯೆಯ ಮಹಾಬೆಳಕು ಒಮ್ಮೆಗೇ ಪ್ರಜ್ವಲಿಸಿಕೊಂಡು ಮತ್ತೆ ಬಂದದ್ದು 2015 ಜೂನ್21ರಂದು.ಅಂದು ಭಾರತವಷ್ಟೇ ಅಲ್ಲ, ಇಡೀ ವಿಶ್ವವೇ ಯೋಗಕ್ಕೆ ಜೈಕಾರ ಹಾಕಿದ್ದೇ ಹಾಕಿದ್ದು. ದೃಶ್ಯ ಮತ್ತು ಮುದ್ರಣ ಮಾಧ್ಯಮದಿಂದ ಹಿಡಿದು ಫೇಸ್ಬುಕ್, ಟ್ವಿಟರ್, ವಾಟ್ಸಪ್, ಇನ್ಸ್ಟ್ರಾಗ್ರಾಮ್‌ನಂತಹ ಸಾಮಾಜಿಕ ಜಾಲತಾಣಗಳು ಸೇರಿದಂತೆ ಎಲ್ಲೆಲ್ಲೂ ಯೋಗವೇ! ಪ್ರಪಂಚ ಪೂರ್ತಿ ಯೋಗ ಮಹಿಮೆಯ ಸಮೂಹ ಸನ್ನಿಗೆ ಒಳಗಾಗಿತ್ತು. ಇದಕ್ಕೆ ಕಾರಣ ಆ ದಿನವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸಲಹೆ ಮತ್ತು ಒತ್ತಾಯದ ಮೇರೆಗೆ ವಿಶ್ವಸಂಸ್ಥೆಯು 'ವಿಶ್ವ ಯೋಗ ದಿನ' ಎಂದು ಇಡೀ ಪ್ರಪಂಚವೇ ಆಚರಿಸಲು ಘೋಷಿಸಿತ್ತು. ಭಾರತೀಯರು ತಮ್ಮ ಸನಾತನ ಪ್ರಾಚೀನ ಪರಂಪರೆಗೆ ಆಧುನಿಕ ಯುಗದಲ್ಲೂ ಎಂಥಾ ಮನ್ನಣೆ, ಎಂಥಾ ಗೌರವ ದೊರೆತಿದೆ ಎಂದು ಜಗತ್ತಿಗೆ ಸಾರಿ ಸಾರಿ ಹೇಳಿ ಹಿರಿಹಿರಿ ಹಿಗ್ಗಿದ ದಿನವದು.

ಜೂನ್ 21ರ ದಿನವೇ ಏಕೆ: ವಿಶೇಷವೆಂದರೆ ಜೂನ್ 21 ದಕ್ಷಿಣಾಯನ ದಿನ. ಈ ದಿನ ಹಗಲು ಬಹಳ ದೀರ್ಘವಾಗಿರುತ್ತದೆ. ಈ ದಿನದ ನಂತರ ಸೂರ್ಯ ದಕ್ಷಿಣದತ್ತ ಸಾಗಿ ಹಗಲಿನ ಅವಧಿ ಕಡಿಮೆಯಾಗುತ್ತಾ ಹೋಗಿ ಡಿಸೆಂಬರ್ 1ರ ಹೊತ್ತಿಗೆ ಉತ್ತರಾಯಣ ಗತಿ ತಲುಪುತ್ತದೆ. ಇದು ಅತ್ಯಂತ ದೀರ್ಘವಾದ ರಾತ್ರಿಯ ದಿನ. ಹಾಗಾಗಿ ದೀರ್ಘ ಹಗಲು ಎನ್ನುವ ಕಾರಣದಿಂದ ಜೂನ್ 21ನ್ನೇ 'ಅಂತಾರಾಷ್ಟ್ರೀಯ ಯೋಗ ದಿನ' ಎಂದು ಘೋಷಿಸ ಬೇಕೆಂದು ಪ್ರಧಾನಿ ಮೋದಿ ಸಾರಥ್ಯದ ಭಾರತ ಸರ್ಕಾರ ವಿಶ್ವಸಂಸ್ಥೆಗೆ ಸಲಹೆಯೊಡನೆ ಮನವಿ ಮಾಡಿತ್ತು. ಇದರಲ್ಲಿ ಭಾರತ ಸಂಪೂರ್ಣ ಯಶಸ್ವಿಯೂ ಆದದ್ದು ಈಗ ಇತಿಹಾಸ.

ಮೈಸೂರು ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ, ಶೈಕ್ಷಣಿಕ ನಗರಿ, ಸಾಹಿತ್ಯಕ ನಗರಿ, ಸ್ವಚ್ಛತಾ ನಗರಿ, ಚಾರಿತ್ರಿಕ ನಗರಿ ಹೇಗೋ ಹಾಗೆಯೇ ಮೈಸೂರು 'ಯೋಗ ನಗರಿ'ಯೂ ಹೌದು! ಏಕೆಂದರೆ ಶತಮಾನಗಳ ಹಿಂದೆಯೇ ಆಚಾರ್ಯ ಪುರುಷರು, ಋಷಿ ಮುನಿಗಳು, ದಾರ್ಶನಿಕರು, ಯೋಗಾಚಾರ್ಯರು,ಯೋಗ ತಪಸ್ವಿಗಳು ಯೋಗದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಮೈಸೂರು ಇಂದು ಯೋಗ ರಾಜಧಾನಿಯಾಗಿ ವಿಶ್ವದ ಎಲ್ಲಾ ರಾಷ್ಟ್ರಗಳ ಯೋಗಾಸಕ್ತರನ್ನು ಕೈಬೀಸಿ ಕರೆಯುತ್ತಿರುವುದಕ್ಕೆ ಬಹು ಮುಖ್ಯ ಕಾರಣ ಯೋಗರ್ಷಿ ಪತಂಜಲಿಯ ಯೋಗ ವಿದ್ಯೆಯನ್ನು ಸ್ವತ: ತಾವು ತಿಳಿದುಕೊಂಡು ಎಲ್ಲರಿಗೂ ಅದನ್ನು ಕಲಿಸಿ ಯೋಗದ ಮಹಿಮೆಯನ್ನು ಮೈಸೂರು ಮತ್ತು ಮೈಸೂರಿನಿಂದಾಚೆಗಿನ ಜಗತ್ತಿಗೆ ಸಾರಿದ ಯೋಗರಾಜ **ತಿರುಮಲೆ ಕೃಷ್ಣಮಾಚಾರ್ಯರು**. ಇಂದು ಮೈಸೂರಿನಲ್ಲಿ ಮಾತ್ರವಲ್ಲದೆ ವಿಶ್ವದಾದ್ಯಂತ ನಾನಾ ದೇಶಗಳಲ್ಲಿ ಯೋಗವನ್ನು ಕಲಿಸುತ್ತಿರುವ ಗುರುಗಳು, ಕಲಿಯುತ್ತಿರುವ ಶಿಷ್ಯರೂ ಕೃಷ್ಣಮಾಚಾರ್ಯರ ಶಿಷ್ಯ ಪರಂಪರೆಗೆ ಸೇರಿದ ಶಿಷ್ಯಕೋಟಿಯೇ ಆಗಿದ್ದಾರೆ. ಇಲ್ಲಿ ಪಾಶ್ಚಾತ್ಯ ಶಿಷ್ಯರ ಪಟ್ಟಿಯೂ ಬಹು ದೊಡ್ಡದಿದೆ.

ಮೈಸೂರು ಸಂಸ್ಥಾನವನ್ನು ಆಳಿದ ಮಹಾರಾಜರುಗಳು ನಮ್ಮ ಪ್ರಾಚೀನ ಯೋಗ ವಿದ್ಯೆಗೆ ವಿಶೇಷವಾದ ಪ್ರೋತ್ಸಾಹ ನೀಡಿದ್ದರು. 1794 ರಿಂದ 1868 ರ ಅವಧಿಯಲ್ಲಿ ಮೈಸೂರಿನ ಮಹಾರಾಜರಾಗಿ ಆಳ್ವಿಕೆ ನಡೆಸಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕಲೆ, ಸಾಹಿತ್ಯ, ನಾಟಕ, ನೃತ್ಯ, ಸಂಗೀತದಂತೆ ಯೋಗಕ್ಕೂ ಅಪಾರ ಪ್ರೋತ್ಸಾಹ ನೀಡಿದ್ದರು. ಸ್ವತಃ ಇವರೇ ಯೋಗಾಸನ ಮಾಡುತ್ತಿದ್ದು ವಿಶೇಷವಾಗಿ ಅವರು ಹಠಯೋಗದಲ್ಲಿ ಆಸಕ್ತರಾಗಿದ್ದು ಯೋಗ ಸಾಧಕರಾಗಿದ್ದರು. ಸ್ವತಃ ಅವರೇ ರಚಿಸಿ ಅವರ ಕಾಲದಲ್ಲಿ ಪ್ರಕಟಗೊಂಡ 'ಶ್ರೀತತ್ವ ನಿಧಿ' ಎನ್ನುವ ಕೃತಿ ಇದನ್ನು ಸಾಕ್ಷೀಕರಿಸುತ್ತದೆ. ಅವತ್ತಿನ ಕಾಲದಲ್ಲಿಯೇ 120ಕ್ಕೂ ಹೆಚ್ಚು ಯೋಗದ ಭಿನ್ನ ಆಸನಗಳನ್ನು ಒಳಗೊಂಡ ವಿವರಣಾತ್ಮಕ ಸಚಿತ್ರ ಕೃತಿ ಇದಾಗಿದೆ. ಮುಮ್ಮಡಿಯ ನಂತರ ಮುಂದೆ 1894 ರಲ್ಲಿ ಪಟ್ಟಕ್ಕೆ ಬಂದು ಸುದೀರ್ಘಕಾಲ ರಾಜ್ಯಭಾರ ಮಾಡಿದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೈಸೂರು ಭಾಗದಲ್ಲಿ ಯೋಗ ಇನ್ನಷ್ಟು ಜನಪ್ರಿಯಗೊಂಡಿತು. ಯೋಗಾಸಕ್ತರ ಮತ್ತು ಯೋಗ ಪಟುಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿತು.

ಮೊದಲ ಯೋಗ ಶಾಲೆ ಆರಂಭ: ಯೋಗಗುರುಗಳಾದ ಶ್ರೀರಂಗಗುರುಗಳು ಹಾಗೂ ಶ್ರೀದೇಶಿಕಾಚಾರ್ ಕೂಡ ಯೋಗವನ್ನು ಜನಪ್ರಿಯ ಗೊಳಿಸಿದವರ ಸಾಲಿನಲ್ಲಿ ನಿಲ್ಲುತ್ತಾರೆ. ಯೋಗ ಗುರುಗಳಾಗಿದ್ದ ಟಿ. ಕೃಷ್ಣಮಾಚಾರ್ಯ ಅವರು 1930ರ ವೇಳೆಗೆ ಮಹಾರಾಜರ ಆಶ್ರಯದೊಂದಿಗೆ ಮೈಸೂರು ನಗರದ ಸುಪ್ರಸಿದ್ಧ ಸಯ್ಯಾಜಿರಾವ್ ರಸ್ತೆಯಲ್ಲಿ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಮೊದಲಿಗೆ ಯೋಗ ಶಾಲೆ ಆರಂಭಿಸಿದ್ದರು. ನಂತರ ವಿವಿಧೆಡೆ ಯೋಗ ಶಾಲೆಗಳ ಪ್ರಾರಂಭಕ್ಕೆ ನಾಂದಿಯಾಡಿ ಯೋಗವನ್ನು ಮೈಸೂರು ನಗರದಿಂದ ಭಾರತದಾಚೆಗೂ ಆನಂತರ ಪ್ರಪಂಚದಾದ್ಯಂತ ಪಸರಿಸಲು ಕಾರಣರಾಗಿದ್ದಾರೆ. ಇವರ ಶಿಷ್ಯರಾಗಿ ಬೆಳೆದು ಬಂದ **ಪಟ್ಟಾಭಿ ಜೋಯಿಸ್** ಹಾಗೂ **ಬಿಕೆಎಸ್ ಅಯ್ಯಂಗಾರ್** ಈ ಪರಂಪರೆ ಮುಂದುವರಿಸಿದರು. **ಅಷ್ಟಾಂಗ ಯೋಗದ ಮೂಲಕ ಪಟ್ಟಾಭಿಜೋಯಿಸ್ ಜನಪ್ರಿಯರಾದರೆ, ಬಿಕೆಎಸ್ ಅಯ್ಯಂಗಾರ್ ಕೆಲವು ಹಠ ಯೋಗಗಳ ಪಟ್ಟುಗಳನ್ನು ಪರಿಚಯಿಸಿದರು.** ಪ್ರಾಚೀನ ಯೋಗಕ್ಕೆ ತಮ್ಮದೇ ಆದ ವಿನೂತನ ಆಸನಗಳನ್ನು ಆವಿಷ್ಕರಿಸಿ ನಾವಿನ್ಯ ಸ್ಪರ್ಶ ನೀಡಿದರು.ಈಗ ಪಟ್ಟಾಭಿಜೋಯಿಸ್ ಪುತ್ರಿ ಸರಸ್ವತಿ, ಮೊಮ್ಮಗ ಶರತ್ ಪಟ್ಟಾಭಿ ಯೋಗ ಮುಂದುವರಿ ಸಿದ್ದರೆ, ಬಿಕೆಎಸ್ ಅಯ್ಯಂಗಾರ್ ಅವರ ಮಕ್ಕಳಾದ ಗೀತಾ,ಪ್ರಶಾಂತ್, ಮೊಮ್ಮಕ್ಕಳಾದ ಅಭಿಜಿತ್ ಶ್ರೀಧರ್ ಹಾಗೂ ಹರಿತಾ ಶ್ರೀಧರ್ ಮತ್ತು ಶಿಷ್ಯರಾದ ರಾಘವೇಂದ್ರ ಪೈ, ಭರತ್‌ಶೆಟ್ಟಿ ಮುಂತಾದವರು ಅವರ ಯೋಗ ಪರಂಪರೆಯನ್ನು ಕಾಯ್ದುಕೊಂಡಿದ್ದಾರೆ. ಮೈಸೂರು ಮೂಲದಿಂದ ಯೋಗ ವಿದ್ಯೆಯನ್ನು ಜಗದ್ವಿಖ್ಯಾತಿ ಮಾಡಿದವರಲ್ಲಿ ಸಿಂಹಪಾಲು ಪಡೆದಿರುವ ಬಿಕೆಎಸ್ ಅಯ್ಯಂಗಾರ್ ಅವರು ಯೋಗ ಕುರಿತಂತೆ ಉಪಯುಕ್ತವಾದ ಅನೇಕ ಮೌಲಿಕ ಗ್ರಂಥಗಳನ್ನು ಬರೆದಿದ್ದಾರೆ. ಅವು ವಿಶ್ವದ ಅನೇಕ ಭಾಷೆಗಳಿಗೆ ಅನುವಾದಗೊಂಡು ಯೋಗದ ಹಿರಿಮೆ ಗರಿಮೆಗಳನ್ನು ಹೆಚ್ಚಿಸಿವೆ.

ಯೋಗದ ಹೊಸ ಟ್ರೆಂಡ್: ಇದರೊಟ್ಟಿಗೆ ಕೆಲ ಯೋಗ ಸಂಸ್ಥೆಗಳು ತಮ್ಮದೇ ಆದ ತರಬೇತಿ ಕೇಂದ್ರಗಳನ್ನು ಹೊಂದಿದ್ದು, ಮೈಸೂರಿಗೆ ಯೋಗ ಅರಸಿ ಬರುವ ವಿದೇಶಿಯರಿಗೆ ಹಾಗೂ ದೇಶಿಯರಿಗೆ ಯೋಗ ಕಲಿಸುತ್ತಿವೆ ಇವರೇ ವಿದೇಶಕ್ಕೆ ತೆರಳಿ ಯೋಗ ಹೇಳಿಕೊಟ್ಟು ಬರುವುದು ಇತ್ತೀಚಿನ ದಶಕದ ಹೊಸ ಟ್ರೆಂಡ್ ಆಗಿ ಪರಿವರ್ತನೆಯಾಗಿದೆ. ಭಾರತದ ಯೋಗ ವಿದ್ಯೆಗೆ ಮಾರುಹೋಗಿ ಇಲ್ಲಿಗೆ ಬರಲಾಗದ ಅದೆಷ್ಟೋ ಯೋಗಾಸಕ್ತರಿಗೆ ಇದೊಂದು ವರದಾನವಾಗಿದೆ. ಮೈಸೂರಿನಲ್ಲಿ ಯೋಗವನ್ನು ವಿದೇಶಿಯರಿಗೆ ಹೇಳಿಕೊಡುವ ಪರಂಪರೆಯಷ್ಟೇ ವಿದೇಶಗಳಿಗೆ ಹೋಗಿ ಸೇವಾ ಮನೋಭಾವದಿಂದ ಅಲ್ಲಿಯೇ ಯೋಗವಿದ್ಯೆ ಕಲಿಸಿ ಈಗಲೂ ಯೋಗವನ್ನು ಬೆಳೆಸುತ್ತಿರುವ ದೊಡ್ಡ ಪಡೆಯೇ ಮೈಸೂರಿನಲ್ಲಿ ಇದೆ. ಪತಂಜಲಿ ಯೋಗ ಶಿಕ್ಷಣ ಸಮಿತಿಯಂತೂ ವಿವಿಧ ಬಡಾವಣೆಗಳಲ್ಲಿ ನೂರಾರು ಶಾಖೆಗಳನ್ನು ಆರಂಭಿಸಿ ಪ್ರತೀ ನಿತ್ಯ ಮೈಸೂರಿನಲ್ಲಿ ಯೋಗವನ್ನು ಉಚಿತವಾಗಿ ಹೇಳಿಕೊಡುತ್ತಿದೆ. ಈ ಸಮಿತಿಯ ಸಾವಿರಾರು ಮಂದಿ ನಿಸ್ವಾರ್ಥವಾಗಿಯೇ ಯೋಗ ಕೆಲಸ ಮಾಡುತ್ತಿದ್ದಾರೆಂದರೆ ಇವರಿಗಿರುವ ಅನನ್ಯವಾದ ಯೋಗ ಪ್ರೀತಿಯೇ ಇದಕ್ಕೆ ಕಾರಣವಾಗಿದೆ. ಇಂತಹ ಪ್ರೀತಿಯಿಂದಲೇ ಭಾರತ ಯೋಗದಲ್ಲಿ ವಿಶ್ವಗುರುವಾಗಿರುವುದು. ಇಲ್ಲಿ ಮೈಸೂರಿಗರ ಯೋಗ ಚಟುವಟಿಕೆಗಳದ್ದು ಬಹು ದೊಡ್ಡ ಪಾಲಿದೆ.

ಬಡಾವಣೆಗಳಲ್ಲಿ ಯೋಗ ಭಾಗ್ಯ: ಮೈಸೂರಿನ ಅನೇಕ ಬಡಾವಣೆಗಳು ಯೋಗ ಟೌನ್‌ಶಿಪ್‌ಗಳಂತಾಗಿವೆ. ಇದರಲ್ಲಿ ಗೋಕುಲಂ ಬಡಾವಣೆಯ ಹೆಸರು ಮೊದಲ ಸ್ಥಾನದಲ್ಲಿದೆ. ಒಂದು ಕಾಲಕ್ಕೆ ನಿವೃತ್ತರ ಸ್ವರ್ಗದಂತಿದ್ದ ಗೋಕುಲಂ ಬಡಾವಣೆ ಯೋಗದ ಚಟುವಟಿಕೆಗಳಿಂದಲೇ ಹೆಸರು ಮಾಡಿದೆ. ಇಲ್ಲಿ ಯೋಗ ಕಲಿಕೆಯ ವಿಭಿನ್ನ ಸ್ವರೂಪಗಳು ತಲೆ ಎತ್ತಿವೆ. ಹದಿನೈದಕ್ಕೂ ಹೆಚ್ಚು ಯೋಗ ಶಾಲೆಗಳು ಸ್ಥಾಪನೆಗೊಂಡಿವೆ. ಹಾಗೂ ಅವುಗಳನ್ನು ಹುಡುಕಿಕೊಂಡು ಬರುವ ವಿದೇಶಿಗರು, ಇವರಿಗೆ ಸೇವೆ ನೀಡುವ ಸಲುವಾಗಿ ಗೃಹೋದ್ಯಮ, ಹೊಟೇಲ್, ರೆಸ್ಟೋರೆಂಟ್, ಬಟ್ಟೆ ಅಂಗಡಿಗಳು, ಊಟದ ಮೆಸ್‌ಗಳು ಸೃಷ್ಟಿಗೊಂಡಿವೆ. ಇದೇ ರೀತಿ ಲಕ್ಷ್ಮೀಪುರಂ ಬಡಾವಣೆ ಕೂಡ ಯೋಗದ ಮತ್ತೊಂದು ಪ್ರದೇಶವಾಗಿ ರೂಪುಗೊಂಡಿದೆ. ವಿಜಯನಗರ,ಸಿದ್ಧಾರ್ಥನಗರ, ಚಾಮರಾಜಪುರಂ, ಸರಸ್ವತಿಪುರಂ, ಬೋಗಾದಿ, ಕುವೆಂಪು ನಗರದಲ್ಲೂ ಇದೇ ಮಾದರಿ ಜನಪ್ರಿಯವಾಗಿದ್ದು, ಆಯುರ್ವೇದ ಆರೋಗ್ಯಧಾಮಗಳೊಂದಿಗೆ ಯೋಗ ತರಗತಿ ನಡೆಸುವ ಹೊಸ ಟ್ರೆಂಡ್ ಕೂಡ ಇದರೊಂದಿಗೆ ಸೇರಿಕೊಂಡಿದೆ. ಅಲ್ಲದೆ, ಪತಂಜಲಿ ಯೋಗ ಸಮಿತಿ, ಬಾಬಾ ರಾಮದೇವ್ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಸಿದ್ಧ ಸಮಾಧಿ ಯೋಗ, ಆರ್ಟ್ ಆಫ್ ಲಿವಿಂಗ್, ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಜಿ.ಎಸ್.ಎಸ್ ಯೋಗ ಸಂಸ್ಥೆ, ಮೈಸೂರು ಯೋಗ ಒಕ್ಕೂಟ, ಯೋಗ ಭಾರತ್, ಉಪನಿಷತ್ ಯೋಗ, ಇಶಾ ಫೌಂಡೇಶನ್, ಮೈಸೂರು ಜಿಲ್ಲಾ ಯೋಗ ಫೌಂಡೇಷನ್ ಸೇರಿದಂತೆ ಹಲವಾರು ಸಂಸ್ಥೆಗಳು ಯೋಗ – ಧ್ಯಾನ ಕಲಿಸುವ ಕೆಲಸ ಮಾಡುತ್ತಿವೆ. ಇವತ್ತಿಗೂ ಮೈಸೂರಿನಲ್ಲಿ ಪ್ರತಿದಿನ 20ರಿಂದ 25 ಸಾವಿರ ಮಂದಿ ಯೋಗ ಕಲಿಯುತ್ತಿರುವುದು ಯೋಗ ನಗರಿ ಮೈಸೂರಿನ ಹಿರಿಮೆಯಾಗಿದೆ.

ಯೋಗದ ಸಿರಿ ಬೆಳಕಿನಲ್ಲಿ: ಯೋಗವೆಂಬುದು ಭಾರತೀಯ ಜೀವನ ಪದ್ಧತಿ, ಆರೋಗ್ಯದ ಭಾಗ ಮತ್ತು ಭಾಗ್ಯ ಎಂದೆಲ್ಲಾ ಹೇಳಿಕೊಳ್ಳುತ್ತಿರುವ ನಡುವೆಯೇ ಯೋಗ ಬ್ರ್ಯಾಂಡ್ ಮೂಲಕ ಆರ್ಥಿಕ ಲಾಭವನ್ನು ವೃದ್ಧಿಸಿಕೊಳ್ಳುವ ಪ್ರಯತ್ನ ಒಂದು ಕಾಲದಲ್ಲಿ ಸಣ್ಣ ಹಂತದಲ್ಲಿ ನಡೆದಿತ್ತು.ಆದರೆ ಇಂದು ಇದು ದೊಡ್ಡದಾಗಿದ್ದು ಇಂಥ ಪ್ರಯತ್ನಕ್ಕೆ ಕೊಡುಗೆ ನೀಡಿದ ನಗರಿ ಮೈಸೂರು. ಏಕೆಂದರೆ ಜಗತ್ತಿನ ಹತ್ತಾರು ದೇಶಗಳಿಗೆ ಯೋಗವನ್ನು ಪರಿಚಯಿಸಿದ್ದರ ಹಿಂದೆ ಮೈಸೂರಿನದ್ದೇ ಸಿಂಹಪಾಲು. ಯೋಗ ಕಲಿಕೆಗೆ ಮತ್ತು ಯೋಗಾಭ್ಯಾಸಕ್ಕೆ ಮೈಸೂರು ಸೂಕ್ತ ಸ್ಥಳ. "ನೀವು ಭೇಟಿ ನೀಡಲೇ ಬೇಕಾದ ಜಗತ್ತಿನ ಅತ್ಯುತ್ತಮ 31 ತಾಣಗಳ ಪೈಕಿ ಮೈಸೂರು ಕೂಡ ಒಂದು. ಶಾಸ್ತ್ರೀಯವಾಗಿ ಯೋಗ ಕಲಿಯಬೇಕೆಂದರೆ, ಮೈಸೂರಿಗೆ ಖಂಡಿತ ಭೇಟಿ ನೀಡಲೇ ಬೇಕು..." ಎಂದು ನ್ಯೂಯಾರ್ಕ್ ಟೈಮ್ಸ್ ಬಹಳ ಹಿಂದೆಯೇ ಸಮೀಕ್ಷೆಯೊಂದನ್ನು ಆಧರಿಸಿ ಈ ರೀತಿ ಹೇಳಿರುವುದೇ ಇದಕ್ಕೆ ಪುರಾವೆಯಾಗಿದೆ. ಯೋಗದ ಸಿರಿ ಬೆಳಕಿನ ಮೈಸೂರಿನಲ್ಲಿ ಯೋಗವನ್ನು ಕಲಿಯುವುದೇ ಒಂದು ಯೋಗಾಯೋಗ.

ಈಗಲೂ ಯೋಗ ಕಲಿಯಲೆಂದು ಹೊರದೇಶಗಳಿಂದ ಭಾರತಕ್ಕೆ ಬರುವ ವಿದೇಶಿಗರ ಪೈಕಿ ಬಹುತೇಕರಿಗೆ ಮೈಸೂರೇ ಪ್ರಥಮ ಆದ್ಯತೆ. ವಿದೇಶಿಯರಿಗೆ ಯೋಗ ಕಲಿಸಿ ಕೊಟ್ಟು ಲಕ್ಷಗಟ್ಟಲೆ ಹಣ ಗಳಿಸುವ ಕೆಲವು ಯೋಗ ಶಾಲೆಗಳ ಜತೆಯಲ್ಲೇ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಯೋಗವನ್ನು ಸರಳ ಶೈಲಿಯಲ್ಲಿ ಸೇವಾಮನೋಭಾವದಿಂದ ಉಚಿತವಾಗಿ ಹೇಳಿಕೊಡುವ ಹತ್ತಾರು ಸಂಸ್ಥೆಗಳಿಗೂ ಮೈಸೂರು ಆಶ್ರಯ ನೀಡಿದೆ.

ಕಲೆಗಳಲ್ಲೇ ಶ್ರೇಷ್ಠ ಸಂಗೀತ

ಸಾಹಿತ್ಯಕ್ಕೆ ರಾಗ ಬೆರೆತಾಗ ಶ್ರೋತೃವಿನ ಮನಸ್ಸಿನಲ್ಲಿ ರಾಗವರ್ಧನವಾಗುತ್ತದೆ. ಅದೇ ಭಗವಂತನನ್ನು ಕಾಣುವ ಸಾಧನ ಸಂಗೀತ. ಅಂತೆಯೇ ಜನರ ಮನೋರಂಜನೆಗೂ ಇದು ಸುಲಭ ಸಾಧನವಾಗಿದೆ. ಚತುರ್ಮುಖ ಬ್ರಹ್ಮದೇವರಿಂದ ಸೃಷ್ಟಿಯಾದ ವೇದಗಳಲ್ಲಿನ ಸಾಮವೇದವು ಸಂಗೀತಕ್ಕೆ ಮೂಲಸ್ಥಾನವಾಗಿದೆ. ಅಂತಹ ಸಾಮವೇದದ ಸಂಹಿತೆಗಳಲ್ಲಿ ಸಂಗೀತ ಶಾಸ್ತ್ರ ವಿವರಣೆಯು ವಿಶೇಷವಾಗಿದೆ. ಇದೊಂದು ಗಂಧರ್ವವಿದ್ಯೆ ಎನ್ನಲಾಗಿದೆ. ಸದ್ಗುರು ಸಮಾಶ್ರಯದಿಂದಲೂ, ಆಸಕ್ತಿಪೂರ್ವಕ ಸಾಧನೆಯಿಂದಲೇ ಸಂಪಾದಿಸಬೇಕು. ಆದುದರಿಂದಲೇ ಈ ವಿದ್ಯೆಯು ಇನ್ನೂ ಆರ್ಷೇಯ ಸಂಪ್ರದಾಯದ ಗುರುಶಿಷ್ಯರ ಸಂಬಂಧ, ಸಂಪರ್ಕಗಳಿಂದ ಉಳಿದು ಬೆಳೆಯುತ್ತಿದೆ. ಕಲೆಗಳಲ್ಲಿ ಶ್ರೇಷ್ಠಕಲೆಯಾದ ಸಂಗೀತಕ್ಕೆ ಮೊದಲ ಸ್ಥಾನ. ಮಾನವ ಕೋಟಿಗೆ ಪರಮಾತ್ಮನು ಕರುಣಿಸಿರುವ ವರಪ್ರಸಾದವೇ ಸಂಗೀತ. ಸಂಗೀತವು ದೇವಭಾಷೆ ಶ್ರೀ ಪರಶಿವನು ಢಮರುಗವನ್ನು ನುಡಿಸುತ್ತಾನೆ, ಶ್ರೀ ಕೃಷ್ಣನು ಕೊಳಲನ್ನೂದುತ್ತಾನೆ, ವಿದ್ಯಾಧಿದೇವತೆ ಸರಸ್ವತಿಯು ಕಚ್ಛಪೀ ಎಂಬ ವೀಣೆಯನ್ನು ನುಡಿಸುತ್ತಾಳೆ, ಶಿವಗಣನಾದ ಮಹಾನಂದಿಯು ಮೃದಂಗವನ್ನು ನುಡಿಸುವುದು, ಭಗವಾನ್ ನಾರದ ಮಹರ್ಷಿಗಳು ತಂಬೂರಿ ಮೀಟಿ ಹಾಡುತ್ತಾ ತ್ರಿಲೋಕ ಸಂಚಾರಿಗಳಾಗಿರುವುದು ಎಲ್ಲರಿಗೂ ವೇದ್ಯವೇ ಆಗಿದೆ. ನಾರದ ಮಹರ್ಷಿಯು ಸಂಗೀತದ ಪ್ರಥಮ ಪ್ರವರ್ತಕರೆಂದು ತಿಳಿದುಬರುತ್ತದೆ.

ಕಾಶ್ಮೀರದವನಾದ ಶಾಙ್ಗದೇವನು ಸಂಗೀತದ ಪ್ರಮಾಣ ಪುರುಷರಲ್ಲಿ ಅಗ್ರಪಂಕ್ತಿಗೆ ಸೇರಿದವನು. ಕಾಲಾನಂತರ ಹಿಂದೂಸ್ತಾನಿ ಸಂಗೀತ ಸಂಪ್ರದಾಯಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟವನು ಮಹಾಪುರುಷ ಅಮೀರ್‌ಖುಸ್ರು ಪ್ರಮುಖನಾದವನು. ಈತನು ಭರತದೇಶ ದಲ್ಲಿ ಅತ್ಯಂತ ಜನಪ್ರಿಯವಾಗಿರುವ 'ಸಿತಾರ್' ವಾದ್ಯವನ್ನು ಪ್ರಥಮತಃ ಬಳಕೆಗೆ ತಂದು, ತಬಲವಾದ್ಯವನ್ನೂ ಪರಿಷ್ಕರಿಸಿದ ಮಹಾಕಲಾರಾಧಕ. ಅತ್ಯಂತ ಪ್ರತಿಭಾನ್ವಿತನಾದ ಅಮೀರ್‌ಖುಸ್ರುವು ಸಂಗೀತದ ಎರಡು ಪದ್ಧತಿಗಳ ಸಮ್ಮಿಳನದಿಂದ ಗಾಯನ, ವಾದ್ಯ ಮತ್ತು ವಾದನ ವಿಧಾನಗಳಲ್ಲಿ ನೂತನ ಪ್ರಯೋಗಗಳನ್ನು ರೂಪಿಸಿದನು. ಹಿಂದೂಸ್ತಾನಿ ಸಂಗೀತ ಪದ್ಧತಿಯು ಪುಷ್ಟವಾಗಿ ಈತನ ಕಾಲದಲ್ಲಿ ಅಭಿವೃದ್ಧಿ ಹೊಂದಿತು. ಇರಾನಿಯನ್ ಮತ್ತು ಭಾರತೀಯ ಸಂಗೀತ ರಾಗಗಳ ವೈವಿದ್ಯವನ್ನು ಚೆನ್ನಾಗಿ ಅರಿತಿದ್ದ ಅಮೀರ್‌ಖುಸ್ರುವು ಎರಡೂ ಪದ್ಧತಿಗಳಲ್ಲಿನ ಪ್ರಯೋಗ ಮಿಳನದಿಂದ ಹಲವಾರು ರಾಗಗಳನ್ನು ರಚಿಸಿದ್ದಾಗಿ ತಿಳಿದುಬರುತ್ತದೆ. ನಂತರ 15ನೇ ಶತಮಾನದಲ್ಲಿ ಹಿಂದೂಸ್ತಾನಿ ಸಂಗೀತಕ್ಕೆ ಪ್ರೋತ್ಸಾಹ ನೀಡಿದ ಅಕ್ಬರ್ ಆಸ್ಥಾನದಲ್ಲಿ ಶ್ರೇಷ್ಠ ಸಂಗೀತಗಾರನಾಗಿದ್ದ ತಾನ್‌ಸೇನ್ ಪ್ರಖ್ಯಾತನಾಗಿದ್ದು ಸಂಗೀತದಲ್ಲಿನ ಅವನ ಶ್ರದ್ಧೆ, ಭಕ್ತಿಯನ್ನು ಕಂಡು ಬೃಂದಾವನದಲ್ಲಿ ವಾಸಿಸುತ್ತಿದ್ದ ಸ್ವಾಮಿ ಹರಿದಾಸರು ತಮ್ಮ ಪ್ರಥಮ ಶಿಷ್ಯನನ್ನಾಗಿ ಪರಿಗ್ರಹಿಸಿದರು, ಅದೇ ಕಾಲದಲ್ಲಿ ಭಕ್ತ ಶ್ರೇಷ್ಠರಾದ ಕವಿ ತುಳಸೀದಾಸ್, ಗಾಯಕರಾದ ಸೂರ್‌ದಾಸ್, ಮತ್ತು ಮೀರಾಬಾಯಿ ಮೊದಲಾದವರು ಹಿಂದೂಸ್ತಾನಿ ಸಂಗೀತದ ಸುಪ್ರಸಿದ್ಧರು. ಆನಂತರ 18ನೇ ಶತಮಾನದಲ್ಲಿ ಹಿಂದೂಸ್ತಾನಿ ಸಂಗೀತದ ಪರಂಪರೆಯ ಪುನರುತ್ಥಾನವನ್ನು ಮಾಡಿದ ಶ್ರೀ ವಿಷ್ಣು ನಾರಾಯಣ ಭಾತ್‌ಖಂಡೆರವರ ಅಮೂಲ್ಯ ಸೇವೆಯು ಹಿಂದೂಸ್ತಾನಿ ಸಂಗೀತದ ಇತಿಹಾಸದಲ್ಲಿ ಸುವರ್ಣಯುಗ ಎನ್ನಬಹುದು. ಇವರು ಸ್ವರಮಾಲೀಕ, ಶ್ರೀಮಲ್ಲಕ್ಷ್ಯ ಸಂಗೀತಮ್ ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದರು. ಹಿಂದೂಸ್ತಾನಿ ಸಂಗೀತ ಪದ್ಧತಿಗೆ ಗ್ರಂಥರೂಪವನ್ನು ನೀಡಿದರು.ಎಲ್ಲಾ ರಾಗಗಳ ಪೂರ್ಣ ಪರಿಚಯ ಮತ್ತು ಅವುಗಳಿಗಿರುವ ಶಾಸ್ತ್ರೀಯ ಹಿನ್ನೆಲೆಯನ್ನು ಪ್ರಕಟಿಸಿ ಭಾತ್‌ಖಂಡೆ ಆಧುನಿಕ ಹಿಂದೂಸ್ತಾನಿ ಸಂಗೀತಕ್ಕೆ ಆಚಾರ್ಯ ಪುರುಷರಾಗಿದ್ದಾರೆ.

ಶಾಸ್ತ್ರೀಯ ಸಂಗೀತವನ್ನು ಪ್ರಥಮವಾಗಿ ಭಗವಾನ್ ನಾರದ ಮಹರ್ಷಿಯ ಪ್ರಾಚೀನ ಕಾಲದಿಂದ ಮಾತುಂಗ ಮುನಿಯವರೆಗೆ, ನಂತರ ಮಧ್ಯಕಾಲ ಅಂದರೆ ಮಾತುಂಗ ಮುನಿಯಿದ್ದ ಕಾಲದಿಂದ ವೆಂಕಟಮುಖಿಯ ಕಾಲದವರೆಗೆ, ಆನಂತರದ ಪ್ರಸ್ತುತ ಕಾಲವನ್ನು ಶ್ರೀ ತ್ಯಾಗ ರಾಜರ ಮತ್ತು ನಂತರದ ಕಾಲವೆಂದು ವಿಂಗಡಿಸಲಾಗಿದೆ. ಸಾಮವೇದದಿಂದ ಭಾರತೀಯ ಸಂಗೀತ ಶಾಸ್ತ್ರ ಹುಟ್ಟಿತೆಂಬುದು ನಂಬಿಕೆ. ಅಲ್ಲದೇ ಭಗವಂತನನ್ನು ನಾದ ಬ್ರಹ್ಮನೆಂದು ಉಪಾಸಿಸುವುದು ಸರ್ವವಿಧಿತವಾಗಿದೆ. ಸಂಗೀತ ಸ್ವರವು ಹೇಗೆ ಹುಟ್ಟಿತೆಂಬುದನ್ನು ತಿಳಿಯುವುದಾದರೆ ಇದು ಪರಬ್ರಹ್ಮ ಸ್ವರೂಪವಾದ ಓಂಕಾರದಿಂದ ಜನಿಸಿತೆಂದು ತಿಳಿದುಬರುತ್ತದೆ. ಇದರಲ್ಲಿ ಓಂ ಎಂದರೆ "ಅ–ಉ–ಮ" ಮೂರು ಅಕ್ಷರಗಳಿವೆ.



ಕರ್ನಾಟಕ ಸಂಗೀತ ಸಿದ್ಧಾಂತದ ಪುರುಷನಾದ ಭರತ ಮಹರ್ಷಿಯಿಂದ ಸುಮಾರು 2300 ವರ್ಷಗಳ ಹಿಂದೆಯೇ ರಚಿತವಾದ ನಾಟ್ಯಶಾಸ್ತ್ರವು ಭಾರತದ ಸಂಗೀತ, ನಾಟ್ಯ ಶಿಕ್ಷಣಕ್ಕೆ ಆಧಾರ ಗ್ರಂಥವೆನಿಸಿದೆ. ಅದೇ ಋಷಿ ಪರಂಪರೆಯಲ್ಲಿ ಕಾಲಕ್ರಮವಾಗಿ 12ನೇ ಶತಮಾನದಲ್ಲಿ ಸಂಗೀತ ರತ್ನಾಕರ ಗ್ರಂಥದ ಕರ್ತೃವಾದ ಶಾಙ್ಗದೇವ, 13ನೇ ಶತಮಾನದಲ್ಲಿನ ಶೃಂಗೇರಿ ಶ್ರೀಶಾರದಾ ಪೀಠದ 12ನೇ ಜಗದ್ಗುರುಗಳಾದ ಶ್ರೀ ಶ್ರೀ ವಿದ್ಯಾರಣ್ಯರು ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದಂತೆ 'ಸಂಗೀತಸಾರ' ಗ್ರಂಥವನ್ನು ರಚಿಸಿದ್ದಾರೆ. ಅಂತೆಯೇ ಶಾಸ್ತ್ರೀಯ ಸಂಗೀತಕ್ಕೆ ಕರ್ನಾಟಕ ಸಂಗೀತ ಎಂದು ಹೆಸರಿಸಿದರು ಎನ್ನಲಾಗಿದೆ. 16ನೇ ಶತಮಾನದ ಗೋವಿಂದ ದೀಕ್ಷಿತರವರು ಸಂಗೀತಸುಧೆ ಗ್ರಂಥವನ್ನು ರಚಿಸಿದ್ದಾಗಿ ತಿಳಿದುಬರುತ್ತದೆ. ಇವರ ಮಗ ವೆಂಕಟಮುಖಿ, ಚತುರ್ದಂಡಿ ಪ್ರಕಾಶಿಕೆ ಗ್ರಂಥ ಬರೆದು ಅದರಲ್ಲಿ ರಾಗಗಳನ್ನು 72 ಮೇಳ ಕರ್ತರಾಗ ಪದ್ಧತಿಗೆ ಅಳವಡಿಸಿದರು. ಇದು ಕರ್ನಾಟಕ ಸಂಗೀತದ ಆಧಾರ ಸ್ತಂಭವಾಗಿದೆ.

ದಾಸಶ್ರೇಷ್ಠರಾದ ಪುರಂದರದಾಸರ ಕಾಲದಿಂದ (1484–1504) ಆಧುನಿಕ ಯುಗ ಪ್ರಾರಂಭವಾಯಿತು. ಕನ್ನಡದಲ್ಲಿ ಸಂಗೀತ ಶಾಸ್ತ್ರಕ್ಕೆ ಅತ್ಯಧಿಕ ಸೇವೆ ಸಲ್ಲಿಸಿದವರೆಂದರೆ ಶ್ರೀ ಪುರಂದರದಾಸರು. ಸ್ವರಾವಳಿ, ಅಲಂಕಾರ, ಗೀತ, ಸುಳಾದಿ ಪ್ರಬಂಧ ಇವುಗಳಲ್ಲಿ ನೂತನ ಕ್ಷೇತ್ರಗಳನ್ನು ಆವರಿಸಿ ಸಂಗೀತ ಕ್ಷೇತ್ರಕ್ಕೆ ಶಾಸ್ತ್ರದ ಅಂತಸ್ತನ್ನು ತಂದುಕೊಟ್ಟ ಕೀರ್ತಿ ಶ್ರೀ ಪುರಂದರದಾಸರಿಗೆ ಸಲ್ಲುತ್ತದೆ. ಮಾಯಾಮಾಳವಗೌಳವನ್ನು ಮೂಲವಾಗಿಟ್ಟುಕೊಂಡು ಸಂಗೀತ ಪಾಠಕ್ರಮಕ್ಕೆ ಮಾರ್ಗದರ್ಶಕರಾಗಿ, ಅಮೂಲ್ಯಸೇವೆಯಿಂದಾಗಿ ಅವರು 'ಸಂಗೀತ ಪಿತಾಮಹ' ರೆಂಬ ಗೌರವದಿಂದ ಅಮರರಾಗಿದ್ದಾರೆ.

ದಾಸಶ್ರೇಷ್ಠ ಪುರಂದರದಾಸರ ನಂತರ ಕರ್ನಾಟಕ ಸಂಗೀತದ ಇತಿಹಾಸದಲ್ಲಿ 18ನೇ ಶತಮಾನದಲ್ಲಿ ವಾಗ್ಗೇಯಕಾರರ ಪಂಕ್ತಿಯಲ್ಲಿ ಪರಮೋನ್ನತ ಸ್ಥಾನವನ್ನು ಗಳಿಸಿದವರು ತ್ರಿಮೂರ್ತಿಗಳಾದ ಶ್ರೀ ಶ್ಯಾಮಾಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರು, ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಉಳಿಸಿ, ಬೆಳೆಸಿದ್ದಾರೆ. ಹಿರಿಯರಾದ ಶ್ರೀ ಶ್ಯಾಮಾಶಾಸ್ತ್ರಿಗಳು ಸಂಸ್ಕೃತ ಮತ್ತು ತೆಲುಗು ಭಾಷೆಗಳ ಪಾಂಡಿತ್ಯವನ್ನು ಪಡೆದಿದ್ದರು. ಇವರ ಸಾಹಿತ್ಯ ರಚನೆ ಮತ್ತು ಗಾಯನವು ಆಗಿನ ವಿದ್ವನ್ಮಂಡಳಿಯಲ್ಲೇ ಉನ್ನತ ಸ್ಥಾನವನ್ನು ಪಡೆಯಿತು. ಇವರು ಕಷ್ಟವಾದ ತಾಳಗಳನ್ನು, ಅಪೂರ್ವ ರಾಗಗಳನ್ನು ಸಾಮಾನ್ಯ ರಾಗಗಳಂತೆ ಹಾಡುತ್ತಿದ್ದರು ಎಂಬುದಾಗಿ ಪ್ರಚಲಿತವಾಗಿದೆ. ಇವರ ಮೊದಲನೆಯ ಕೃತಿ 'ಜನನಿ ನತಜನಪರಿಪಾಲಿನಿ' ಸಾವೇರಿ ರಾಗದಲ್ಲಿದ್ದು ಸಂಸ್ಕೃತ ಭಾಷೆಯಲ್ಲಿದೆ. ಶ್ರೀ ಶ್ಯಾಮಾಶಾಸ್ತ್ರಿಗಳು ಸಂಗೀತವಲ್ಲದೇ, ಜೋತಿಷ್ಯ ಶಾಸ್ತ್ರದಲ್ಲೂ ಪಾಂಡಿತ್ಯವನ್ನು ಪಡೆದಿದ್ದರು. 'ಶಾಮಕೃಷ್ಣ' ಅಂಕಿತದಿಂದ ಸಾಹಿತ್ಯ ರಚನೆ ಮಾಡಿದರು.

ನಂತರದ ಶ್ರೀ ತ್ಯಾಗರಾಜರು (ಕ್ರಿ.ಶ.1767–1847) ಕರ್ನಾಟಕ ಸಂಗೀತ ಶೈಲಿಯನ್ನು ರೂಪಿಸಿದ ಪ್ರತಿಭಾವಂತ ವಾಗ್ಗೇಯಕಾರರು. ಗಾಯಕರು, ವೈಣಿಕರು, ಸಂಗೀತ ಶಿಕ್ಷಕರು ಹಾಗೂ ಸಾತ್ವಿಕ ಭಕ್ತಿಯ ಪ್ರತಿಪಾದಕರೆನಿಸಿದ ಮಹಾನುಭಾವಿಗಳು. ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಪರಿಣತಿಯನ್ನು ಹೊಂದಿ ಜ್ಯೋತಿಷ್ಯ ಮತ್ತು ಮಂತ್ರ ಶಾಸ್ತ್ರಗಳನ್ನು ವಿಶೇಷವಾಗಿ ಅಭ್ಯಸಿಸಿದ್ದರು. ಶ್ರೀರಾಮಚಂದ್ರ ಪ್ರಭುವಿನ ಅನನ್ಯ ಭಕ್ತರಾಗಿದ್ದು ಅನೇಕ ಬಾರಿ ಶ್ರೀರಾಮನನ್ನು ಪ್ರತ್ಯಕ್ಷ ದರ್ಶನ ಪಡೆದ ಯೋಗಿಗಳು ಎನ್ನಲಾಗಿದೆ. ಶ್ರೀ ತ್ಯಾಗರಾಜರಿಗೆ 'ಸ್ವರಾರ್ಣವ' ಎಂಬ ಸಂಗೀತ ಶಾಸ್ತ್ರದ ಗ್ರಂಥವನ್ನು ಭಗವಾನ್ ನಾರದ ಮಹರ್ಷಿಗಳೇ ಅನುಗ್ರಹಿಸಿದರೆಂಬ ಪ್ರತೀತಿಯಿದೆ. ಇವರು ಸಂಗೀತದ 72 ಮೇಳಗಳಲ್ಲಿ ಅನೇಕ ಮೇಳಗಳಿಗೆ ರಾಗ ಸ್ವರೂಪವನ್ನು ಕೊಟ್ಟು ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಪಂಚರತ್ನ ಕೃತಿಗಳು ಶ್ರೇಷ್ಠ ರಚನೆಯಾಗಿದೆ. ಇವರು 'ತ್ಯಾಗರಾಜ' ಅಂಕಿತದಲ್ಲಿ ಹಲವಾರು ಕೃತಿಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ.

ಮೂರನೇ ಕಿರಿಯ ವಾಗ್ಗೇಯಕಾರರಾದ ಶ್ರೀ ಮುತ್ತುಸ್ವಾಮಿ ದೀಕ್ಷಿತರು (ಕ್ರಿ.ಶ. 1778–1835) ತಂದೆ ರಾಮಸ್ವಾಮಿ ದೀಕ್ಷಿತರಿಂದಲೇ ಸಂಗೀತ ಶಿಕ್ಷಣವನ್ನು ಪಡೆದರು. ವೇದ, ವ್ಯಾಕರಣ, ಜ್ಯೋತಿಷ್ಯ, ಮಂತ್ರಶಾಸ್ತ್ರ, ಕಾವ್ಯ, ನಾಟಕ, ಅಲಂಕಾರಗಳಲ್ಲೂ ಸಂಸ್ಕೃತ ತೆಲುಗು ಮತ್ತು ತಮಿಳು ಭಾಷೆಗಳಲ್ಲಿಯೂ ಅದ್ವಿತೀಯರೆನಿಸಿದ್ದರು. ಶ್ರೇಷ್ಠ ಗಾಯಕರು, ವೈಣಿಕರು ಮತ್ತು ವಾಗ್ಗೇಯಕಾರರಾಗಿ ಪ್ರಸಿದ್ಧಿಯನ್ನು ಪಡೆದರು. ಇವರು ಕಾಂಚಿಪುರದಲ್ಲಿದ್ದಾಗ ಶ್ರೀ ಕಾಮಾಕ್ಷಿದೇವಿಯ ಸನ್ನಿಧಿಯಲ್ಲಿ ನಾಲ್ಕು ವರ್ಷಗಳ ಕಾಲ ಶ್ರೀವಿದ್ಯಾಮಹಾಮಂತ್ರೋಪಾಸನೆಯನ್ನು ಮಾಡಿದರು. ಅಲ್ಲಿ ಉಪನಿಷತ್ ಬ್ರಹ್ಮರೊಡನೆ ವೇದಾಂತ ವಿಷಯವನ್ನು ಚರ್ಚಿಸಿ ರಾಮಾಷ್ಟಪದಿಗೆ ರಾಗತಾಳಗಳನ್ನು ಸಂಯೋಜಿಸಿದರು. 'ಗುರುಗುಹ' ಎಂಬ ಅಂಕಿತವನ್ನು ತಮ್ಮ ರಚನೆಗಳಿಗೆ ಅಳವಡಿಸಿಕೊಂಡರು.

> 1982ರಲ್ಲಿ ಫ್ರಾನ್ಸ್ ದೇಶದಲ್ಲಿ, ಅಲ್ಲಿನ ಸಂಸ್ಕೃತಿ ಸಚಿವರಾಗಿದ್ದ ಜಾಕ್‌ಲಾಂಗ್ ಅವರ ಚಿಂತನೆಯಂತೆ ಜೂನ್ 21ರಂದು ವಿಶ್ವ ಸಂಗೀತ ದಿನ ಆಚರಿಸಲು ಆರಂಭಿಸಲಾಯಿತು. ಇದು ಸಂಗೀತಗಾರರು, ಸಂಗೀತ ಪ್ರಿಯರಿಗೆ ಹೆಮ್ಮೆಯ ವಿಷಯ.



ನಂ. ಶ್ರೀಕಂಠ ಕುಮಾರ್
ಮೊ: 9481067333

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಶುಕ್ರವಾರ 21 ಜೂನ್ 2024

ಮೈಸೂರಲ್ಲಿ 'ಕೋಟಿ'ಗೆ ಉತ್ತಮ ಪ್ರತಿಕ್ರಿಯೆ

ಮೈಸೂರು, ಜೂ.20(ಜಿಎ)–ನಟ ಡಾಲಿ ಧನಂಜಯ ಅಭಿನಯದ ವಿಭಿನ್ನ ಕಥೆಯುಳ್ಳ ಕೋಟಿ ಚಲನಚಿತ್ರಕ್ಕೆ ಮೈಸೂರಿನಲ್ಲಿ ಉತ್ತಮ ಪ್ರತಿಕ್ರಿಯೆ ದೊರೆತಿದೆ ಎಂದು ನಿರ್ದೇಶಕ ಪರಮ್ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ನಾಯಕಿಯಾಗಿ ಮೋಕ್ಷಾ ಕುಶಾಲ್ ಮತ್ತು ಖಳನಾಯಕರಾಗಿ ರಮೇಶ್ ಇಂದಿರಾ ನಟಿಸಿದ್ದಾರೆ. ರಂಗಾಯಣ ರಘು, ತಾರಾ, ಸರ್ದಾರ್ ಸತ್ಯ, ಪೃಥ್ವಿ ಶಾಮನೂರು ಅವರ ತಾರಾಗಣವೂ ಇದೆ. ಐದು ಹಾಡುಗಳಿದ್ದು, ವಾಸುಕಿ ವೈಭವ್ ರಾಗ ಸಂಯೋಜಿಸಿದ್ದಾರೆ. ಹಿನ್ನೆಲೆ ಸಂಗೀತದ ಜವಾಬ್ದಾರಿ 777 ಚಾರ್ಲಿ ಖ್ಯಾತಿಯ ನೊಬಿನ್ ಪೌಲ್ ಹೊತ್ತಿದ್ದಾರೆ. ಈ ರೀತಿ ಚಿತ್ರ ಉತ್ತಮವಾಗಿ ಮೂಡಿಬಂದಿದ್ದು, ಜನತೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ನಟರಾದ ರಮೇಶ್ ಇಂದಿರಾ, ಮೋಕ್ಷಾ ಕುಶಾಲ್, ನವಮಿ, ಪೃಥ್ವಿ, ತನುಜಾ ಇದ್ದರು.

ಒಂದನೇ ಪುಟದಿಂದ

ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆ ಸಂಗ್ರಹ

ಪ್ರಮಾಣದ ಆಸ್ತಿ ತೆರಿಗೆ ಬಾಕಿ ಇರುವುದರಿಂದ ಸಭೆ ಈ ತೀರ್ಮಾನ ಕೈಗೊಳ್ಳಬೇಕಾಯಿತು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 51 ಲಕ್ಷ ಮನೆಗಳಿವೆ. 2.2 ಕೋಟಿ ಜನಸಂಖ್ಯೆ ಇದೆ. 30 ಲಕ್ಷ ಮನೆಗಳಿಗೆ ನೀರು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಿ ದ್ದೇವೆ. ಎಲ್ಲಾ ಮೂಲಸೌಕರ್ಯ ಪಡೆದಿದ್ದರೂ ಗ್ರಾಹಕರು ಆಸ್ತಿ ತೆರಿಗೆಯನ್ನು ನಿಗದಿತ ಸಮಯದಲ್ಲಿ ಪಾವತಿಸುತ್ತಿಲ್ಲ. ವಸೂಲಿಗೆ ಸಿಬ್ಬಂದಿ ಕೊರತೆಯೂ ಕಾರಣವಾಗಿದ್ದು, ಪರ್ಯಾಯ ಮಾರ್ಗದ ಮೂಲಕ ವಸೂಲಿಗೆ ಮುಂದಾಗಿದ್ದೇವೆ.

ವಿಶ್ವಬ್ಯಾಂಕ್‌ನಿಂದ 5,190 ಕೋಟಿ ರೂ. ಸಾಲ ಪಡೆದು ಗ್ರಾಮೀಣ ಭಾಗದ 7,110 ರಸ್ತೆಗಳ ಅಭಿವೃದ್ಧಿ ಮಾಡಲಾಗುವುದು ಎಂದು ಪಾಟೀಲ್ ಇದೇ ಸಂದರ್ಭದಲ್ಲಿ ತಿಳಿಸಿದರು. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಈ ರಸ್ತೆಗಳ ಕಾಮಗಾರಿಯನ್ನು ಎರಡು ವರ್ಷದೊಳಗೆ ಪೂರ್ಣಗೊಳಿಸಲು ಸಮಯ ನಿಗದಿಪಡಿಸಲಾಗಿದೆ.

ದೌರ್ಜನ್ಯ ಪ್ರಕರಣಕ್ಕೆ ವಿಶೇಷ ಠಾಣೆ: ಪರಿಶಿಷ್ಟ ಸಮುದಾಯಗಳ ಮೇಲಿನ ದೌರ್ಜನ್ಯ (ಅಟ್ರಾಸಿಟಿ) ಪ್ರಕರಣಗಳ ಇತ್ಯರ್ಥ ವಿಳಂಬವಾಗುತ್ತಿರುವುದರಿಂದ 33 ಘಟಕಗಳನ್ನು ವಿಶೇಷ ಠಾಣೆಗಳಾಗಿ ಮೇಲ್ದರ್ಜೆಗೇರಿಸಲು ಸಭೆ ತೀರ್ಮಾನಿಸಿದೆ.

ಪ್ರತಿ ಜಿಲ್ಲಾ ಮಟ್ಟದಲ್ಲೂ ಒಂದು ವಿಶೇಷ ಠಾಣೆ ಇರಲಿದೆ. ಇಂತಹ ಠಾಣೆಗಳನ್ನು ಬಿ.ಸಿ.ಆರ್.ಇ.ಗಳೆಂದು ಹೆಸರಿಸಲಾಗುವುದು, ಈ ಠಾಣೆಗಳಲ್ಲಿ ದೂರುಗಳನ್ನೂ ದಾಖಲಿಸಬಹುದಾಗಿದೆ ಎಂದರು.

ವಿಧಾನಮಂಡಲದ ಅಧಿವೇಶನ ಕರೆಯುವ ತೀರ್ಮಾನವನ್ನು ಸಭೆ ಕೈಗೊಂಡಿದ್ದು, ಅಧಿವೇಶನ ಅವಧಿ ನಿರ್ಧಾರವನ್ನು ಮುಖ್ಯಮಂತ್ರಿಗಳ ವಿವೇಚನೆಗೆ ಬಿಡಲಾಗಿದೆ.

ಕಲಬುರಗಿಯ ಕುಸನೂರು ಗ್ರಾಮದಲ್ಲಿ ವಸತಿ ಬಡಾವಣೆ ನಿರ್ಮಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಸುಮಾರು 132 ಕೋಟಿ ರೂ. ವೆಚ್ಚದಲ್ಲಿ ಈ ವಸತಿ ಬಡಾವಣೆ ನಿರ್ಮಿಸಲಾಗುತ್ತದೆ ಎಂದರು.

ಉಚಿತ ವಿದ್ಯುತ್, ನೀರು ಪೂರೈಕೆ

ಅಂದಾಜು ವೆಚ್ಚದಲ್ಲಿ 46,829 ಸರ್ಕಾರಿ ಶಾಲೆ, 1434 ಪದವಿಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ ಹಾಗೂ ಉಚಿತ ನೀರಿನ ಸೌಲಭ್ಯ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಚಿವ ಸಂಪುಟದಲ್ಲಿ ಒಟ್ಟು 20 ವಿಷಯಗಳ ಮೇಲೆ ಚರ್ಚೆಯಾಗಿ ನಿರ್ಣಯ ಮಾಡಲಾಗಿದೆ. ವಾಣಿಜ್ಯ ಕೈಗಾರಿಕೆ ಇಲಾಖೆಗೆ ಸಂಬಂಧಿಸಿ ಗಣಿ ಗುತ್ತಿಗೆ ಅವಧಿ ಮುಗಿದ ಕೆಜಿಎಫ್ ಪ್ರದೇಶದಲ್ಲಿ ಕೇಂದ್ರದ ಗಣಿ ಚಟುವಟಿಕೆ ಕೈಗೊಳ್ಳಲು ಅನುಮತಿ ಕೊಡಲಾಗುವುದು. ನಿಷ್ಕ್ರಿಯವಾಗಿದ್ದ 1304 ಎಕರೆ ಪ್ರದೇಶದಲ್ಲಿ ಗಣಿ ಗುತ್ತಿಗೆ ಚಟುವಟಿಕೆ ಮುಂದುವರಿಸುವ ಪ್ರಸ್ತಾವನೆಗೆ ಅನುಮತಿ ನೀಡಲಾಗುವುದು. ಕೇಂದ್ರದ ಪ್ರಸ್ತಾವನೆಗೆ ರಾಜ್ಯ ಸರ್ಕಾರ ಸಹಮತಿ. ಗಣಿ ಚಟುವಟಿಕೆಗಳ ಪ್ರಾರಂಭಕ್ಕೆ ಅನುಮತಿ ನೀಡಲು ಸಂಪುಟ ಗ್ರೀನ್ ಸಿಗ್ನಲ್ ನೀಡಿದೆ. ಟೇನಿಂಗ್ ಡಂಪ್ಸ್ ಬಳಸಿಕೊಂಡು ಗಣಿ ಚಟುವಟಿಕೆ ಮುಂದುವರಿಸಲು ಅವಕಾಶ ನೀಡಲಾಗುವುದು. 2230 ಎಕರೆ ಭೂಮಿಯನ್ನು ಸರ್ಕಾರಕ್ಕೆ ಕೈಗಾರಿಕಾ ವಸಾಹತು ನಿರ್ಮಾಣಕ್ಕೆ ಕೆಐಎಡಿಬಿಯಿಂದ ಸರ್ಕಾರಕ್ಕೆ ನೀಡಬೇಕು. 75.24 ಕೋಟಿ ರೂ. ಸರ್ಕಾರಕ್ಕೆ ಪಾವತಿ ಮಾಡುವುದು ಬಾಕಿ ಇದೆ. ಅದನ್ನೂ ಭರಿಸುವಂತೆ ಭಾರತ್ ಮೈನಿಂಗ್‌ಗೆ ಸೂಚನೆ ನೀಡಲಾಗುವುದು ಎಂದರು.

ರಾಜ್ಯದಲ್ಲಿ ಸಂವಿಧಾನ ದಿನಾಚರಣೆ, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿ ಜಯಂತಿಯಂದು ಕೇವಲ ಗಾಂಧಿ ಭಾವಚಿತ್ರ ಮಾತ್ರ ಇರುತ್ತಿತ್ತು ಇನ್ನು ಮುಂದೆ ಈ ಎಲ್ಲಾ ಸಂದರ್ಭದಲ್ಲಿ ಅಂಬೇಡ್ಕರ್ ಭಾವಚಿತ್ರ ಇಡುವುದು ಕೂಡ ಕಡ್ಡಾಯ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ.

ವಿಶ್ವ ವಿದ್ಯಾಲಯಗಳ ಅಭಿವೃದ್ಧಿಗೆ 297.77 ಕೋಟಿ ಬಿಡುಗಡೆಗೆ ಕ್ಯಾಬಿನೆಟ್ ಅನುಮೋದನೆ ನೀಡಲಾಗುವುದು. ಜೊತೆಗೆ, ರಾಜ್ಯದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮಕ್ಕೆ ಅನುಮತಿ ಕೊಟ್ಟು, ರೋಟರಿ ಸಂಸ್ಥೆಗೆ ಇದರ ಜವಾಬ್ದಾರಿ ವಹಿಸಲಾಗುವುದು ಎಂದು ತಿಳಿಸಿದರು.

ಸಂಪುಟ ಸಹೋದ್ಯೋಗಿಗಳಿಗೆ ಸಿಎಂ ಎಚ್ಚರಿಕೆ

ಪರ–ವಿರೋಧ ಯಾವ ಚರ್ಚೆ ಕೂಡ ಬೇಡ. ಕಾನೂನು ತನ್ನ ಕೆಲಸ ಮಾಡಲಿದೆ ಎಂದು ಸಂಪುಟ ಸಭೆಯ ಆರಂಭದಲ್ಲೇ ಸಚಿವರಿಗೆ ಸಿಎಂ ಸಿದ್ಧರಾಮಯ್ಯ ತಿಳಿಸಿದ್ದಾರೆ. ಇದರ ಬೆನ್ನಲ್ಲಿಯೇ ಸರ್ಕಾರದ ಪ್ರಭಾವಿ ಸಚಿವರು ಸೈಲೆಂಟ್ ಆಗಿ ಕುಳಿತುಬಿಟ್ಟಿದ್ದರು. ದರ್ಶನ್‌ನನ್ನು ಬಂಧನ ಮಾಡುವ ಮುನ್ನ ಪೊಲೀಸ್ ಕಮಿಷನರ್ ದಯಾನಂದ್, ಸಿಎಂ ಸಿದ್ಧರಾಮಯ್ಯ ಅವರನ್ನು ಭೇಟಿಯಾಗಿ ಕೊಲೆಗೆ ಸಂಬಂಧಪಟ್ಟ ಪ್ರಮುಖ ಸಿಸಿಟಿವಿ ದೃಶ್ಯಾವಳಿಗಳನ್ನು ತೋರಿಸಿದ್ದಾರೆ ಎಂದು ವರದಿಯಾಗಿತ್ತು. ಇದನ್ನು ನೋಡಿದ ಸಿಎಂ, ಇವನು ಮನುಷ್ಯನಾ, ರಾಕ್ಷಸನಾ, ಯಾವುದೇ ಕಾರಣಕ್ಕೂ ದರ್ಶನ್‌ನ ಬಿಡಬೇಡಿ. ಆರೋಪಿಗಳು ಯಾರೆಲ್ಲಾ ಇದ್ದಾರೆ ಎಲ್ಲರನ್ನೂ ಒದ್ದು ಒಳಗೆ ಕಳಿಸಿ ಎಂದು ಸಿಎಂ ಪೊಲೀಸರಿಗೆ ಸೂಚನೆ ನೀಡಿದ್ದರು. ಸಿಎಂ ಸೂಚನೆ ಸಿಕ್ಕ ಮರುದಿನವೇ ಪೊಲೀಸರು ಕಾರ್ಯಪ್ರವೃತ್ತರಾಗಿ ನಟ ದರ್ಶನ್ ಬಂಧನ ಪ್ರಕ್ರಿಯೆಯನ್ನು ಇನ್ನಷ್ಟು ತೀವ್ರಗೊಳಿಸಿದ್ದರು. ಅದೇ ದಿನವೇ ದರ್ಶನ್ ಬಂಧನವೂ ಆಗಿತ್ತು. ಸಿಎಂ ಅವರ ಕಾವೇರಿ ನಿವಾಸದಲ್ಲಿ ಕ್ಲೋಸ್ಡ್ ಡೋರ್ ಮೀಟಿಂಗ್‌ನಲ್ಲಿ ಪೊಲೀಸ್ ಕಮಿಷನರ್ ಈ ದೃಶ್ಯಗಳನ್ನು ಸಿಎಂಗೆ ತೋರಿಸಿದ್ದರು. ದರ್ಶನ್‌ನನ್ನು ಬಂಧಿಸುವ ವೇಳೆ ಮುಂದಾಗಬಹುದಾದ ಅಡೆತಡೆಗಳ ಬಗ್ಗೆ ಅರಿವು ಪೊಲೀಸರಿಗೂ ಇತ್ತು. ಅದೇ ಕಾರಣಕ್ಕಾಗಿ ಮೊದಲು ಸಿಎಂಗೆ ಈ ಕುರಿತಾದ ವಿವರಗಳನ್ನು ತೋರಿಸಿ, ಅವರಿಂದಲೇ ಅನುಮತಿಯನ್ನು ಪೊಲೀಸರು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಈಗ ಇದೇ ವಿಚಾರವನ್ನು ಸಿಎಂ ಕ್ಯಾಬಿನೆಟ್ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದಾರೆ.

ಇಂದು ಜೈಲಿನಿಂದ ಬಿಡುಗಡೆ

ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿದೆ. ಪ್ರಸ್ತುತ ತಿಹಾರ್ ಜೈಲಿನಲ್ಲಿರುವ ಅರವಿಂದ್ ಕೇಜ್ರಿವಾಲ್, ನಾಳೆ ಮಧ್ಯಾಹ್ನದ ನಂತರ ಜೈಲಿನಿಂದ ಬಿಡುಗಡೆ ಆಗುವ ಸಾಧ್ಯತೆ ಇದೆ. ದೆಹಲಿ ಕೋರ್ಟ್ ಜಾಮೀನು ಮಂಜೂರು ಮಾಡಿರುವು ದರಿಂದ ಆಮ್ ಆದ್ಮಿ ಪಕ್ಷ ಹಾಗೂ ದೆಹಲಿ ಸಿಎಂಗೆ ದೊಡ್ಡ ರಿಲೀಫ್ ಸಿಕ್ಕಂತಾಗಿದೆ. ಈಗಾಗಲೇ ಎಎಪಿಯ ಪ್ರಮುಖ ನಾಯಕರಾದ ಮನೀಶ್ ಸಿಸೋದಿಯಾ ಹಾಗೂ ಸತ್ಯೇಂದರ್ ಜೈನ್ ಅವರು ಈಗಾಗಲೇ ಜೈಲಿನಲ್ಲಿರುವುದರಿಂದ ಎಎಪಿ ಕಾರ್ಯಕರ್ತರ ಸ್ಥಿತಿ ನಾವಿಕನಿಲ್ಲದ ಹಡಗಿನಂತಾಗಿತ್ತು. ಆದರೆ ಈಗ ಕೇಜ್ರಿವಾಲ್ ಬಿಡುಗಡೆಯಿಂದಾಗಿ ಎಎಪಿಗೆ ದೊಡ್ಡ ಬಲ ಬಂದಂತಾಗಿದೆ.

ಅರವಿಂದ್ ಕೇಜ್ರಿವಾಲ್ ಬಿಡುಗಡೆಗೆ ಸಂಬಂಧಿಸಿದಂತೆ ಎಎಪಿ ನಾಯಕರು ಪ್ರತಿಕ್ರಿಯಿಸಿದ್ದು, ಬಹುಶಃ ಸತ್ಯಕ್ಕೆ ತೊಂದರೆಯಾಗಬಹುದು ಆದರೆ ಸತ್ಯ ಯಾವತ್ತೂ ಸೋಲುವುದಿಲ್ಲ. ಬಿಜೆಪಿಯ ಜಾರಿ ನಿರ್ದೇಶನಾಲಯದ ಎಲ್ಲಾ ಆಕ್ಷೇಪಗಳನ್ನು ನಿರಾಕರಿಸಿ ಗೌರವಾನ್ವಿತ ನ್ಯಾಯಾಲಯವೂ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿದೆ ಎಂದು ಎಎಪಿ ಟ್ವಿಟ್ ಮಾಡಿದೆ.

ನೆಲೆಸಿದ್ದ ಬಳ್ಳೆಯಲ್ಲಿ ಸ್ಮಾರಕ

ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಅರಣ್ಯದೊಳಗೆ ಕಳ್ಳಬೇಟೆ ನಿಗ್ರಹ ಶಿಬಿರಗಳಲ್ಲಿ ಹಗಲಿರುಳು ದುಡಿಯುವ ಸಿಬ್ಬಂದಿಗೆ 2 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡಲು ತೀರ್ಮಾನಿಸಲಾಗಿದ್ದು, ಕಡತವನ್ನು ಹಣಕಾಸು ಇಲಾಖೆಯ ಅನುಮೋದನೆಗೆ ಸಲ್ಲಿಸಲಾಗಿದೆ ಶೀಘ್ರವೇ ಪ್ರೋತ್ಸಾಹ ಧನ ನೀಡಲಾಗುವುದು ಎಂದು ತಿಳಿಸಿದರು.

ನಾಗರಹೊಳೆಗೆ ನೂತನ ಸಫಾರಿ ಬಸ್: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಮೂರು ಸುಸಜ್ಜಿತ ಮಿನಿ ಬಸ್‌ಗಳನ್ನು ವಿಶೇಷ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. 16,55,585 ರೂ.ಗಳಿಗೆ ಮಿನಿ ಬಸ್ ಛಾಸಿ ಖರೀದಿಸಲಾಗಿದ್ದು, ರಮೇಶ್ ಗೋವಿಂದನ್ ನೀಡಿರುವ 14,81,590 ರೂ. ಮತ್ತು ಕೊಯಮತ್ತೂರಿನ ಹರೀ ಶಾಂತಾರಾಮ್ ಅವರು ನೀಡಿರುವ 20 ಲಕ್ಷ ರೂ. ಸಿಎಸ್‌ಆರ್ ನೆರವಿನಿಂದ ವಿಶೇಷ ರೀತಿ ಕವಚ ನಿರ್ಮಾಣ ಮಾಡಲಾಗಿದೆ. ಈ ಬಸ್‌ಗಳು ಪ್ರವಾಸಿಗರಿಗೆ ಹೊಸ ಅನುಭವ ನೀಡುತ್ತವೆ.

ವಿಧಾನಸೌಧದ ಮುಂದೆ ಈ ಬಸ್‌ಗಳಿಗೆ ಹಸಿರು ನಿಶಾನೆ ತೋರಿದ ಸಚಿವರು, ನಂತರ ಸಫಾರಿ ವಾಹನದಲ್ಲಿ ವಿಕಾಸಸೌಧಕ್ಕೆ ಅಧಿಕಾರಿಗಳೊಂದಿಗೆ ಪ್ರಯಾಣಿಸಿದರು. ಈ ಸಂದರ್ಭದಲ್ಲಿ ಶಾಸಕರುಗಳಾದ ಎ.ಎಸ್. ಪೊನ್ನಣ್ಣ, ಜಿ.ಡಿ.ಹರೀಶ್ ಗೌಡ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳಾದ ಬ್ರಿಜೇಶ್ ದೀಕ್ಷಿತ್, ಸುಭಾಷ್ ಮಾಲ್ಕಡೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ತಾಲೂಕು ಜನಸ್ಪಂದನ ಕಾರ್ಯಕ್ರಮದಲ್ಲಿ ನೂರೆಂಟು ದೂರು

● ರಸ್ತೆ ಮುಚ್ಚಿ ಕಾಂಪೌಂಡ್ ನಿರ್ಮಾಣ; ನಕಲಿ ವಂಶವೃಕ್ಷ ನೀಡಿದ ಅಧಿಕಾರಿಗಳು; ಶವ ಹೂಳಲು ಸ್ಥಳವಿಲ್ಲ; ಬಡಾವಣೆ ನಿವಾಸಿಗಳ ಪಾಡು ಕೇಳೋರಿಲ್ಲ... ಇತ್ಯಾದಿ... ಇತ್ಯಾದಿ ● ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ; ಕೆಲವೊಂದಕ್ಕೆ ವಾರದ ಗಡುವು



ಮೈಸೂರಿನ ಸಿದ್ಧಾರ್ಥನಗರದ ಹೊಸ ಡಿಸಿ ಕಚೇರಿಯಲ್ಲಿ ಮೈಸೂರು ತಾಲೂಕು ಜನಸ್ಪಂದನ ಕಾರ್ಯಕ್ರಮ ನಡೆಯಿತು.

ಮೈಸೂರು, ಜೂ.20(ಬಿಎಲ್‌ಯು)– ಜನರು ಸಲ್ಲಿಸಿದ ಕೆಲವು ದೂರುಗಳಿಗೆ ಸ್ಥಳದಲ್ಲೇ ಪರಿಹಾರ, ಕೆಲವು ಸಮಸ್ಯೆ ಪರಿಹಾರ ಮಾಡಲು ಅಧಿಕಾರಿಗಳಿಗೆ ಒಂದು ವಾರದ ಗಡುವು, ನಕಲಿ ವಂಶ ವೃಕ್ಷ ನೀಡುವ ಅಧಿಕಾರಿಗಳ ವಿರುದ್ಧ ಕ್ರಮ, ನಕಲಿ ದಾಖಲಾತಿಗಳಿಗೆ ಪ್ರಮಾಣ ಪತ್ರ ನೀಡುವ ನೋಟರಿಗಳ ವಿರುದ್ಧ ಎಫ್‌ಐಆರ್, ಅನಧಿಕೃತ ಬಡಾವಣೆ ನಿರ್ಮಿಸಿದ ಸೊಸೈಟಿ, ಇದಕ್ಕೆ ಮಂಜೂರಾತಿ ನೀಡಿದ ಅಧಿಕಾರಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು.

ಇದು ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇಂದು ನಡೆದ ಅರ್ಥಪೂರ್ಣ ಜನಸ್ಪಂದನ ಕಾರ್ಯಕ್ರಮ ದಲ್ಲಿ ಕೈಗೊಂಡ ಮಹತ್ವದ ತೀರ್ಮಾನಗಳು.

ಮೈಸೂರಿನ ಸಿದ್ಧಾರ್ಥನಗರದ ಹೊಸ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಮೈಸೂರು ತಾಲೂಕಿನ ಜನಸ್ಪಂದನ ಕಾರ್ಯಕ್ರಮ ನಡೆಯಿತು. ಸಾರ್ವಜನಿಕರ ಕುಂದುಕೊರತೆಗಳನ್ನು ಶೀಘ್ರವಾಗಿ ಪರಿಹರಿಸಲು ನಡೆಸಿದ ಸಭೆಯಲ್ಲಿ ಜನರ ದೂರುಗಳನ್ನು ಆಲಿಸಲಾಯಿತು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ವಿವೇಕಾನಂದ ಸೇರಿದಂತೆ ಹಲವು ಅಧಿಕಾರಿಗಳು ಹಾಜರಿದ್ದರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರೆ, ಕೆಲವು ಸಮಸ್ಯೆಗಳನ್ನು ಪರಿಹಾರ ಮಾಡಲು ಅಧಿಕಾರಿಗಳಿಗೆ ಒಂದು ವಾರದ ಗುಡುವು ನೀಡಲಾಯಿತು.

ರಸ್ತೆಗೆ ಕಾಂಪೌಂಡ್: ಮೈಸೂರಿನ ಲಿಂಗಾಂಬುದಿ ಕೆರೆ ಬಳಿಯ ಎಸ್‌ಬಿಐ ಅಂಡ್ ಅದರ್ಸ್ ಬ್ಯಾಂಕ್ ಹೌಸಿಂಗ್ ಸೊಸೈಟಿಯಲ್ಲಿ 500ಕ್ಕೂ ಹೆಚ್ಚು ನಿವೇಶನಗಳಿವೆ. ಆದರೆ ಬಡಾವಣೆಯಲ್ಲಿದ್ದ ರಸ್ತೆಯ ಜಾಗ ತಮ್ಮದೆಂದು ಖಾಸಗಿ ಬಡಾವಣೆಯವರು ಹಕ್ಕು ಮಂಡಿಸಿದ್ದಾರೆ. ರಸ್ತೆಗೆ ಅಡ್ಡಲಾಗಿ ಕಾಂಪೌಂಡ್ ಕೂಡ ನಿರ್ಮಾಣ ಮಾಡಿದ್ದಾರೆ. ಇದರಿಂದ ನಾವು ಓಡಾಡಲು ಸಾಧ್ಯವಾಗದೆ ಕಾಂಪೌಂಡ್ ಹಾರಿ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಅಲ್ಲಿನ ನಿವಾಸಿಗಳು ತಮ್ಮ ಬವಣೆ ತೋಡಿಕೊಂಡರು.

ಅಧಿಕಾರಿಗಳ ಮೇಲೆ ಎಫ್‌ಐಆರ್: ಮುಡಾ ಅಧಿಕಾರಿಗಳನ್ನು ಕರೆದು ವಿವರಣೆ ಪಡೆದ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ಸಿಡಿಪಿಯಲ್ಲಿ ರಸ್ತೆ ಇದೆ ಎಂಬುದು ಸ್ಪಷ್ಟವಾದರೆ ಕಾಂಪೌಂಡ್ ತೆರವು ಮಾಡಲಾಗುವುದು. ಸೊಸೈಟಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ರಸ್ತೆ ಬಿಡದೆ ಬಡಾವಣೆ ನಿರ್ಮಾಣ ಮಾಡಿದ್ದಾರೆ. ಬಡಾವಣೆಗೆ ಮುಡಾ ಅಧಿಕಾರಿಗಳು ಕೂಡ ಮಂಜೂರಾತಿ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಈಗ ಸೊಸೈಟಿ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಮಂಜೂರಾತಿ ನೀಡಿದ ಮುಡಾ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ನಿರ್ದೇಶನ ನೀಡಿದರು.

ಸ್ಥಳಕ್ಕೆ ಭೇಟಿ ನೀಡಿ ವಸ್ತುಸ್ಥಿತಿ ಏನಾಗಿದೆ, ಸಿಡಿಪಿಯಲ್ಲಿ ರಸ್ತೆ ನಮೂದಾಗಿದೆಯೇ ಎಂಬ ಬಗ್ಗೆ ಒಂದು ವಾರದಲ್ಲಿ ನನಗೆ ವರದಿ ನೀಡಬೇಕು. ಅಲ್ಲಿ ತನಕ ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು ಎಂದು ಡಾ.ರಾಜೇಂದ್ರ, ಮುಡಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದರು.

ನಕಲಿ ವಂಶವೃಕ್ಷ : ನಕಲಿ ವಂಶವೃಕ್ಷ ಮಾಡಿಸಿ ಪೌತಿ ಖಾತೆಯ ಮೂಲಕ ತಮ್ಮ ಆಸ್ತಿ ಲಪಟಾಯಿಸಲು ಸಂಬಂಧಿಗಳು ಕುತಂತ್ರ ಮಾಡಿದ್ದಾರೆ ಎಂದು ರವಿ ಎಂಬುವವರು ದೂರಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಡಾ.ರಾಜೇಂದ್ರ, ವಂಶವೃಕ್ಷಕ್ಕೆ ಸಂಬಂಧಿಸಿದಂತೆ ನೋಟರಿಯವರು ಪ್ರಮಾಣ ಪತ್ರ ನೀಡಬೇಕು. ತರುವಾಯ ವಂಶವೃಕ್ಷಕ್ಕೆ ಉಪ ತಹಶೀಲ್ದಾರ್ ದೃಢೀಕರಣ ನೀಡಬೇಕು. ಆದರೆ ವಂಶವೃಕ್ಷಕ್ಕೆ ಸಂಬಂಧಿಸಿದ ನಕಲಿ ದಾಖಲಾತಿಗಳಿಗೆ ನೋಟರಿಗಳು ಪ್ರಮಾಣ ಪತ್ರ ನೀಡಿ, ಉಪ ತಹಶೀಲ್ದಾರ್ ಇದನ್ನು ದೃಢೀಕರಣ ಮಾಡಿದರೆ ಇಬ್ಬರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಮೈಸೂರಿನ ಲಲಿತಾದ್ರಿಪುರ ಬಡಾವಣೆಯ ಒಳಚರಂಡಿಗಳಲ್ಲಿ ಹೂಳು ತುಂಬಿದೆ. ಇದರಿಂದ ಮಳೆ ಬಂದಾಗ ನೀರು ಬಡಾವಣೆ ಸೇರುತ್ತಿದೆ ಎಂದು ಅಲ್ಲಿನ ನಿವಾಸಿಗಳು ತಿಳಿಸಿದರು.

ಅನಧಿಕೃತ ಬಡಾವಣೆಗಳನ್ನು ಸರ್ಕಾರದಿಂದ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಆದರೂ ಅಲ್ಲಿನ ಜನರ ಹಿತದೃಷ್ಟಿಯಿಂದ ಒಳಚರಂಡಿಯಲ್ಲಿನ ಹೂಳು ತೆಗೆಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಜ್ಞರ ವರದಿ ಪಡೆದು ಕಟ್ಟಡ ನೆಲಸಮ: ಸರ್ಕಾರಿ ಕಚೇರಿಗಳು ಶಿಥಿಲಾವಸ್ಥೆಯಲ್ಲಿವೆ ಎಂಬ ಬಗ್ಗೆ ಸರ್ಕಾರದ ತಾಂತ್ರಿಕ ತಜ್ಞರ ವರದಿ ಪಡೆಯಬೇಕು. ಅದರ ಆಧಾರದ ಮೇಲೆ ಶಿಥಿಲಾವಸ್ಥೆಯ ಸರ್ಕಾರಿ ಕಟ್ಟಡ ನೆಲಸಮ ಮಾಡಬೇಕು. ಅದು ಬಿಟ್ಟು ಯಾವ ಅನುಮೋದನೆ ಇಲ್ಲದೆ ಸರ್ಕಾರಿ ಕಟ್ಟಡ ನೆಲಸಮಗೊಳಿಸಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾದ ಹಣವನ್ನು ಆ ಸಮುದಾಯದವರ ಅಭಿವೃದ್ಧಿಗೆ ವಿನಿಯೋಗಿಸಬೇಕು. ಅದು ಬಿಟ್ಟು ಬೇರೆ ಕಡೆ ವೆಚ್ಚ ಮಾಡಿದರೆ ಕ್ರಮ ಜರುಗಿಸಲಾಗುವುದು ಎಂದು ಡಾ.ರಾಜೇಂದ್ರ ಎಚ್ಚರಿಕೆ ನೀಡಿದರು.

ಗೂರೂರು ಬಳಿ ಸ್ಮಶಾನದಲ್ಲಿ ಶವ ಸಂಸ್ಕಾರ ಮಾಡಲು ಸಾಧ್ಯವಾಗುತ್ತಿಲ್ಲ. ಎರಡು ಅಡಿ ಮಣ್ಣು ತೆಗೆದರೆ ನೀರು ತುಂಬಿಕೊಳ್ಳುತ್ತಿದ್ದು, ಶವ ಸಂಸ್ಕಾರ ಮಾಡಲು ತುಂಬಾ ಸಮಸ್ಯೆಯಾಗಿದೆ ಎಂದು ಅಲ್ಲಿನ ವಾಸಿಗಳು ದೂರು ನೀಡಿದರು.

ಕೆಲವು ಸ್ಮಶಾನಗಳನ್ನು ಕೆರೆಗಳಾಗಿ ಮಾರ್ಪಾಡು ಮಾಡಲಾಗಿದ್ದು, ಅಂತಹ ಸ್ಮಶಾನಗಳಿಗೆ ಪರ್ಯಾಯವಾಗಿ ಬೇರೆ ಸ್ಥಳ ನಿಗದಿ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಧಾರಾಕಾರ ಮಳೆಯಿಂದ ಹಾನಿಗೊಳಗಾದವರಿಗೆ ಸಹಾಯಧನ ತಲುಪಿಸುವ ಕಾರ್ಯ ನಡೆಯುತ್ತಿದೆ. ಈ ಮೂಲಕ ಜನರ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ದೊರೆಯುತ್ತಿದೆ ಎಂದು ತಿಳಿಸಿದರು.

ಇಂದಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಒಟ್ಟು 108 ದೂರುಗಳು ದಾಖಲಾಗಿದ್ದು, ಇವುಗಳ ಶೀಘ್ರ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ನಗರಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಮುಡಾ ಕಾರ್ಯದರ್ಶಿ ಶೇಖರ್, ಡಿಸಿಪಿ ಜಾಹ್ನವಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಸರ್ಕಾರಿ ಆಸ್ತಿ ಕಬಳಿಸುತ್ತಿದ್ದರೂ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ

ಸರ್ಕಾರಿ ಆಸ್ತಿ ಕಬಳಿಸುತ್ತಿದ್ದರೂ ನೀವು ಏನೂ ಮಾಡುತ್ತಿಲ್ಲವೇಕೆ ಎಂದು ಶಾಸಕ ತನ್ವೀರ್ ಸೇಠ್ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಮೈಸೂರಿನ ಕೆಸರೆಯ ಎಸ್ ಟಿಪಿ ಪ್ಲಾಂಟ್ ಬಳಿಯ ಸರ್ಕಾರಿ ಆಸ್ತಿಯಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ನಿರ್ಮಾಣ ಮಾಡಲಾಗುತ್ತಿದೆ. ಕಟ್ಟಡ ನಿರ್ಮಾಣ ಕಾರ್ಯ ತಡೆದು ಕೂಡಲೇ ಸರ್ಕಾರಿ ಆಸ್ತಿ ವಶಕ್ಕೆ ಪಡೆಯುವಂತೆ ಬಹಳಷ್ಟು ಬಾರಿ ಹೇಳಿದರೂ ಅಧಿಕಾರಿಗಳು ಏನೂ ಮಾಡುತ್ತಿಲ್ಲ. ನನ್ನ ಮಾತಿಗೂ ಕ್ಯಾರೆ ಎನ್ನುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರಿ ಆಸ್ತಿ ಕಬಳಿಕೆಯಾಗುತ್ತಿದ್ದರೂ ಏನು ಮಾಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕರು ನಮ್ಮ ಆಸ್ತಿ ಸಂರಕ್ಷಣೆ ಮಾಡುವಂತೆ ಇಲ್ಲಿ ದೂರು ಸಲ್ಲಿಸಿದರೆ ಅವರ ಆಸ್ತಿ ಹೇಗೆ ಸಂರಕ್ಷಣೆ ಮಾಡುತ್ತೀರಾ ಎಂದು ಕೋಪೋದ್ರಿಕ್ತರಾಗಿ ಪ್ರಶ್ನಿಸಿದರು.

ಪೊಲೀಸರು ವಾಹನಗಳ ತಪಾಸಣೆ ಮಾಡಿ ದಂಡ ವಸೂಲಿ ಮಾಡುತ್ತಿದ್ದಾರೆ. ಅವಶ್ಯವಿಲ್ಲದ ಕಡೆ ಕ್ಯಾಮರಾ ಹಾಕಿದ್ದಾರೆ, ಅವಶ್ಯವಿರುವ ಕಡೆ ಕ್ಯಾಮರಾ ಇಲ್ಲ. ಮೈಸೂರು ಹೊರ ವಲಯದಲ್ಲಿ ತ್ಯಾಜ್ಯ ಸುರಿಯುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ತನ್ವೀರ್ ಸೇಠ್ ಕಿಡಿಕಾರಿದರು.

ಮೈಸೂರಿನಲ್ಲಿ ಅನಧಿಕೃತ ಬಡಾವಣೆ ನಿರ್ಮಾಣವಾಗುತ್ತಿದೆ. ಕಾನೂನು ನಿಯಮದ ಪ್ರಕಾರ 80 ಅಡಿ ರಸ್ತೆ ನಿರ್ಮಾಣವಾಗುವ ಕಡೆ 30 ಅಡಿ ರಸ್ತೆ ನಿರ್ಮಾಣವಾಗುತ್ತಿದೆ. ಇದರಿಂದ ಯಾವುದೇ ಲಂಗು ಲಗಾಮು ಇಲ್ಲದೆ ಮೈಸೂರು ನಗರ ಯದ್ವತದ್ವಾ ಬೆಳೆಯುತ್ತಿದೆ. ಈ ಸಮಸ್ಯೆಗಳನ್ನು ಪರಿಹಾರ ಮಾಡೋಣ ಅಂದರೆ ಮುಡಾ ಸಭೆ ನಡೆಯುತ್ತಿಲ್ಲ. ಅಧಿಕಾರಿಗಳ ಕಾರ್ಯ ವೈಖರಿ ಹೇಳೋಣ ಅಂದರೆ ಮುಕ್ತವಾದ ಸಭೆ ಕರೆಯುತ್ತಿಲ್ಲ ಎಂದು ತನ್ವೀರ್ ಸೇಠ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಭಾಷಣ ಬೇಡ...! ಜನ ಸಮಸ್ಯೆ ನೀಗೋಣ!

ಇಂದಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು, ಶಾಸಕ ತನ್ವೀರ್ ಸೇಠ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಪ್ರಸಂಗ ನಡೆಯಿತು.

ಕಾರ್ಯಕ್ರಮದಲ್ಲಿ ಜನರ ಮಾತಿರಲಿ, ಅಧಿಕಾರಿಗಳು ತಮ್ಮ ಮಾತನ್ನು ಆಲಿಸುತ್ತಿಲ್ಲ. ತಾವು ಹೇಳಿದ ಕೆಲಸವನ್ನೆ ಮಾಡುತ್ತಿಲ್ಲ ಎಂದು ತನ್ವೀರ್ ಸೇಠ್ ಅಸಹಾಯಕತೆ ವ್ಯಕ್ತಪಡಿಸಿದರು. ಈ ವೇಳೆ ಜಿ.ಟಿ.ದೇವೇಗೌಡರು ಬೇಸರಗೊಂಡು, ಇದು ಜನಸ್ಪಂದನ ಕಾರ್ಯಕ್ರಮವಾಗಿದ್ದು, ದೂರು ನೀಡಲು ನೂರಾರು ಜನರು ಸೇರಿದ್ದಾರೆ. ಇಲ್ಲಿ ನಾವೇ ಭಾಷಣ ಮಾಡುತ್ತಿದ್ದರೆ ಹೇಗೆ ಎಂದು ತನ್ವೀರ್ ಸೇಠ್ ಅವರಿಂದ ಮೈಕ್ ತೆಗೆದುಕೊಂಡರು. ಜನರು ನಮ್ಮ ಭಾಷಣ ಕೇಳಲು ಬಂದಿಲ್ಲ. ದೂರು ನೀಡಲು ಬಂದಿದ್ದು, ಇಲ್ಲಿ ನಾವೇ ಮಾತನಾಡುತ್ತಾ ಕುಳಿತರೆ ಸಮಸ್ಯೆ ಹೇಳಲು ಬಂದ ಜನರ ಪಾಡೇನು. ನಾನು ಕೂಡ ಭಾಷಣ ಮಾಡಲ್ಲ. ಜನರ ಸಮಸ್ಯೆ ಪರಿಹಾರ ಆಗಬೇಕಷ್ಟೆ ಎಂದು ಹೇಳಿದರು.

ಜುಲೈ 15ರೊಳಗೆ ಮುಖ್ಯಮಂತ್ರಿ ಕಚೇರಿಗೆ ವರದಿ ಸಲ್ಲಿಕೆ

ತಾಲೂಕು ಮಟ್ಟದಲ್ಲಿ ನಡೆಯುತ್ತಿರುವ ಜನ ಸ್ಪಂದನ ಕಾರ್ಯಕ್ರಮದ ವರದಿಯನ್ನು ಜುಲೈ 15ರೊಳಗೆ ಮುಖ್ಯಮಂತ್ರಿಗಳ ಕಚೇರಿಗೆ ತಲುಪಿಸಬೇಕಿದ್ದು, ಅಧಿಕಾರಿಗಳು ತ್ವರಿತವಾಗಿ ಕೆಲಸ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದ ಮೇರೆಗೆ ಜನಸ್ಪಂದನ ಕಾರ್ಯಕ್ರಮ ನಡೆಸಲಾಗುತ್ತಿದೆ. ಇಲ್ಲಿ ದಾಖಲಾದ ದೂರುಗಳು ಹಾಗೂ ಅದಕ್ಕೆ ದೊರೆತಿರುವ ಪರಿಹಾರದ ವರದಿಯನ್ನು ಜುಲೈ 15ರೊಳಗೆ ಸಲ್ಲಿಸಬೇಕಿದೆ ಎಂದರು. ಮುಖ್ಯಮಂತ್ರಿಗಳೇ ನಿರ್ದೇಶನ ನೀಡಿದ್ದು, ಇದನ್ನು ಅಧಿಕಾರಿಗಳು ಹಗುರವಾಗಿ ಪರಿಗಣಿಸಬಾರದು. ನಿರ್ಲಕ್ಷ್ಯ ತೋರದೆ ಕೆಲಸ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇಂದು ರಮೇಶ್ ಉತ್ತಪ್ಪರ ಯೋಗ ಕೃತಿ ಬಿಡುಗಡೆ

ಯೋಗ ಪ್ರದರ್ಶನ, ಪ್ರಶಸ್ತಿ ಪ್ರದಾನ



ಮೈಸೂರು, ಜೂ.20(ಪಿಎಂ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರ 'ಯೋಗ ಸಂಗೀತ, ಮೈಸೂರು ಪರಂಪರೆ' ಕೃತಿ ಬಿಡುಗಡೆ, ಯೋಗ ದರ್ಶಿನಿ ಪ್ರದರ್ಶನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಜೂ.21ರಂದು ಬೆಳಗ್ಗೆ 10.30ಕ್ಕೆ ಉತ್ತನಹಳ್ಳಿಯ ಭಾರತೀ ಯೋಗಧಾಮದಲ್ಲಿ ನಡೆಯಲಿದೆ.

ಮೈಸೂರಿನ ಓದುಗ ಪ್ರಕಾಶನ, ಮೈಸೂರು ಕಲ್ಚರಲ್ ಅಸೋಸಿಯೇಷನ್, ಭಾರತೀ ಯೋಗಧಾಮದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಈ ಕಾರ್ಯಕ್ರಮವನ್ನು ಭಾರತೀ ಯೋಗಧಾಮದ ಸಂಸ್ಥಾಪಕ ಡಾ.ಕೆ.ಎಲ್. ಶಂಕರನಾರಾಯಣ ಜೋಯ್ಸ್ ಉದ್ಘಾಟಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೃತಿ ಬಿಡುಗಡೆ ಮಾಡಲಿದ್ದಾರೆ.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಲೇಖಕ ಐತಿಚಂಡ ರಮೇಶ್ ಉತ್ತಪ್ಪ, ಓದುಗ ಪ್ರಕಾಶನದ ಪ್ರಕಾಶ್ ಚಿಕ್ಕಪಾಳ್ಯ ಉಪಸ್ಥಿತರಿರುವರು. ಇದೇ ವೇಳೆ ಹಿರಿಯ ಯೋಗಪಟುಗಳಾದ ಡಾ.ಪಿ. ಎನ್.ಗಣೇಶ್ ಕುಮಾರ್, ಡಾ.ಎ.ಎಸ್. ಚಂದ್ರಶೇಖರ್ ಅವರಿಗೆ 'ದಿ ಸ್ಟಾರ್ ಆಫ್ ಯೋಗ' ಪ್ರಶಸ್ತಿ, ಅಂತಾರಾಷ್ಟ್ರೀಯ ಮಟ್ಟದ ಯುವ ಯೋಗ ಪ್ರತಿಭೆಗಳಾದ ಹೆಚ್.ಖುಷಿ, ಅಮೂಲ್ಯ ನಾರಾಯಣ್, ಆರ್.ಅಂಕಿತ ಅವರಿಗೆ 'ದಿ ರೈಸಿಂಗ್ ಸ್ಟಾರ್ ಆಫ್ ಯೋಗ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಎಂ.ವಿ.ಯೋಗಾಸ್ ಸಂಸ್ಥೆಯ ಅಂತಾರಾಷ್ಟ್ರೀಯ ಖ್ಯಾತಿಯ ಯೋಗಪಟುಗಳಿಂದ 'ಯೋಗ ನೃತ್ಯ' ಹಾಗೂ ಭಾರತೀ ಯೋಗಧಾಮದ ಯೋಗಪಟುಗಳಿಂದ 'ಯೋಗ ದರ್ಶಿನಿ' ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಾಸನ: ಜಮೀನು–ಹಣಕಾಸು ವಿಚಾರವಾಗಿ ಓರ್ವನ ಗುಂಡಿಕ್ಕಿ ಕೊಂದು ಮತ್ತೋರ್ವ ಆತ್ಮಹತ್ಯೆ



ಹಾಸನ, ಜೂ.20– ಹಾಸನದ ಹೊಯ್ಸಳ ನಗರ ಬಡಾವಣೆಯಲ್ಲಿ ಗುರುವಾರ ಮಧ್ಯಾಹ್ನ ಹಾಡಹಗಲೇ ಫೈರಿಂಗ್ ನಡೆದಿದ್ದು, ಸುತ್ತಮುತ್ತಲ ಜನರನ್ನು ಬೆಚ್ಚಿಬೀಳಿಸಿದೆ.

ಮೃತರನ್ನು ಹಾಸನ ನಗರದ ಶರಫತ್ ಅಲಿ (45) ಮತ್ತು ಆಸಿಫ್ (43) ಎಂದು ಗುರುತಿಸಲಾಗಿದೆ. ಇಬ್ಬರೂ ಖಾಲಿ ನಿವೇಶನ ಖರೀದಿಸಲು ಹೋದಾಗ ಈ ಘಟನೆ ನಡೆದಿದೆ.

ಹಾಸನದ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಎಂಎಸ್ ಅವರ ಪ್ರಕಾರ, ಶುಂಠಿ ವ್ಯಾಪಾರಿ ಶರಫತ್ ಅಲಿ ಮತ್ತು ರಿಯಲ್ ಎಸ್ಟೇಟ್ ಮಾಲೀಕ ಆಸಿಫ್ ಅಲಿ ಕಾರಿನಲ್ಲಿ ಬಂದು ನಿವೇಶನದ ಮುಂದೆ ಜಮೀನು ಮತ್ತು ಹಣಕಾಸಿನ ವಿಚಾರವಾಗಿ ಚರ್ಚಿಸಿದ್ದಾರೆ.

ಚರ್ಚೆ ವೇಳೆ ಮಾತಿನ ಚಕಮಕಿ ನಡೆದಿದೆ. ಈ ಸಂದರ್ಭದಲ್ಲಿ ಆಸಿಫ್, ಶರಫತ್ ಅಲಿ ಮೇಲೆ ಗುಂಡು ಹಾರಿಸಿ ಅದೇ ಆಯುಧದಿಂದ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಶರಫತ್ ಅಲಿ ಮತ್ತು ಆಸಿಫ್ ಸ್ನೇಹಿತರಾಗಿದ್ದು, ಹಲವು ವ್ಯವಹಾರಗಳಲ್ಲಿ ಪಾಲುದಾರಿಕೆ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶರಫತ್ ಅಲಿ ದೇಹ ಕಾರಿನ ಮುಂದೆ ಬಿದ್ದಿದ್ದರೆ, ಕಾರಿನ ಒಳಗೆ ಸೀಟ್ ಮೇಲೆ ಆಸಿಫ್ ಮೃತದೇಹ ಪತ್ತೆಯಾಗಿದೆ.

ಘಟನಾ ಸ್ಥಳಕ್ಕೆ ಬೆರಳಚ್ಚು ತಜ್ಞರು ಹಾಗೂ ಸಿಬ್ಬಂದಿ ವಿಧಿ ವಿಜ್ಞಾನ ಪ್ರಯೋಗಾಲಯ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಾಹನದಲ್ಲಿದ್ದ ಪಿಸ್ತೂಲ್ ಅನ್ನು ಪೊಲೀಸರು ವಶಪಡಿಸಿ ಕೊಂಡಿದ್ದಾರೆ. ಇಬ್ಬರೂ ದಶಕದಿಂದ ಶುಂಠಿ ವ್ಯಾಪಾರ ಮಾಡುತ್ತಿದ್ದು, ಆರು ತಿಂಗಳ ಹಿಂದೆ ಪರಸ್ಪರ ಜಗಳವಾಡಿಕೊಂಡು, ನಂತರ ರಾಜೀ ಮಾಡಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ. ಪೊಲೀಸರು ಮೃತದೇಹಗಳನ್ನು ಹಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ.

7ನೇ ವೇತನ ಆಯೋಗ ಜಾರಿ: ಸಿಎಂ ಸಿದ್ದರಾಮಯ್ಯಗೆ ಅಧಿಕಾರ ನೀಡಿದ ಸಂಪುಟ



ಬೆಂಗಳೂರು, ಜೂ.20– ರಾಜ್ಯ ಸರ್ಕಾರಿ ನೌಕರರ ಬಹು ನಿರೀಕ್ಷಿತ 7ನೇ ವೇತನ ಆಯೋಗದ ಶಿಫಾರಸು ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಈ ಸಂಬಂಧ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ.

ಇಂದು ವಿಧಾನಸೌಧದಲ್ಲಿ ಸಿಎಂ ನೇತೃತ್ವ ದಲ್ಲಿ ನಡೆದ ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ 7ನೇ ವೇತನ ಆಯೋಗದ ಶಿಫಾರಸು ಜಾರಿಗೊಳಿಸುವ ಅಧಿಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಲಾಗಿದೆ. ಈ ಮೂಲಕ ಏಳನೇ ವೇತನ ಆಯೋಗ ಜಾರಿ ಮಾಡ ಬೇಕೆಂಬ ಸರ್ಕಾರಿ ನೌಕರರ ಬಹುದಿನ ಗಳ ಬೇಡಿಕೆ ಈಡೇರುವ ಕಾಲ ಸನ್ನಿಹಿತವಾಗಿದೆ. 7ನೇ ವೇತನ ಆಯೋಗದ ಶಿಫಾರಸಿನಂತೆ ರಾಜ್ಯ ಸರ್ಕಾರಿ ನೌಕರರ ವೇತನವನ್ನು ಶೇ.25ರಷ್ಟು ಹೆಚ್ಚಳ ಮಾಡುವಂತೆ ಇಂದಿನ ಸಚಿವ ಸಂಪುಟ ಸಭೆಯಲ್ಲಿ ಕೆಲ ಸಚಿವರು ಸಲಹೆ ನೀಡಿದ್ದಾರೆ. ಅಂತಿಮವಾಗಿ ಸಂಪುಟ ಸಭೆ ಆಯೋಗದ ಶಿಫಾರಸು ಜಾರಿ ಅಧಿಕಾರವನ್ನ ಸಿಎಂಗೆ ನೀಡಿದ್ದು, ವೇತನ ಶೇ.27ರಷ್ಟು ಹೆಚ್ಚಳಕ್ಕೆ ಸಿಎಂ ಸಿದ್ದರಾಮಯ್ಯ ಸಹ ಒಲವು ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತು ರಾಜ್ಯ ಸರ್ಕಾರ ಶೀಘ್ರದಲ್ಲೇ ಅಧಿಕೃತ ನಿರ್ಧಾರ ಪ್ರಕಟಿಸುವ ಸಾಧ್ಯತೆಗಳಿವೆ.

ಜೆಕೆ ಟೈರ್ಸ್ ಉದ್ಯೋಗಿಗಳಿಂದ ದಾಖಲೆ ಪ್ರಮಾಣದಲ್ಲಿ ರಕ್ತದಾನ



ಮೈಸೂರಿನ ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಗುರುವಾರ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಮೈಸೂರು, ಜೂ.20(ಎಸ್‌ಬಿಡಿ)– ಮೈಸೂರಿನ ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್‌ನ ಸಾವಿರಕ್ಕೂ ಹೆಚ್ಚು ಉದ್ಯೋಗಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಮಾದರಿಯಾದರು.

ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಸಂಸ್ಥೆ ಹಾಗೂ ಕೆ.ಆರ್.ಆಸ್ಪತ್ರೆಯ ರಕ್ತ ನಿಧಿ ಕೇಂದ್ರದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ಜೆಕೆ ಟೈರ್ಸ್ ಉಪಾಧ್ಯಕ್ಷರು ಹಾಗೂ ಸಿಐಐ ಮೈಸೂರು ಚಾಪ್ಟರ್ ಅಧ್ಯಕ್ಷ ಈಶ್ವರ್ ರಾವ್ ಮಾರ್ಗದರ್ಶನದಲ್ಲಿ ಸುಮಾರು 1,300 ಮಂದಿ ರಕ್ತದಾನ ಮಾಡಿದರು.

ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್ ಸಂಸ್ಥೆ ವತಿಯಿಂದ ಜೆಕೆ ಸಮೂಹ ಸಂಸ್ಥೆ ಅಧ್ಯಕ್ಷರಾಗಿದ್ದ ದಿವಂಗತ ಹರಿಶಂಕರ್ ಸಿಂಘಾನಿಯಾ ಅವರ ಜನ್ಮದಿನಾಚರಣೆ ಅಂಗವಾಗಿ ಕಳೆದ 10 ವರ್ಷಗಳಿಂದಲೂ ರಕ್ತದಾನ ಶಿಬಿರವನ್ನು ಆಯೋಜಿಸಲಾಗುತ್ತಿದ್ದು, ಗುರುವಾರ ಏಕ ಕಾಲದಲ್ಲಿ ಮೇಟಗಳ್ಳಿಯಲ್ಲಿರುವ ಸಂಸ್ಥೆಯ ಎರಡು ಘಟಕ, ಹೆಬ್ಬಾಳ್ ಕೈಗಾರಿಕೆ ಪ್ರದೇಶ, ಜೆಕೆ ಅತಿಥಿ ಗೃಹ ಸೇರಿದಂತೆ ಒಟ್ಟು ನಾಲ್ಕು ಕಡೆಗಳಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರವನ್ನು ಸಿಐಐ ಮೈಸೂರು ಚಾಪ್ಟರ್‌ನ ಉಪಾಧ್ಯಕ್ಷ ಹಾಗೂ ಹಿರಿಯ ನಿರ್ದೇಶಕ ಸಂತೋಷ್ ಗುಂಡಪಿ ಉದ್ಘಾಟಿಸಿದರು.

ಅವರು ಈ ವೇಳೆ ಮಾತನಾಡಿ, ಜೆಕೆ ಟೈರ್ಸ್ ಸಂಸ್ಥೆ ಸಂಸ್ಥಾಪಕರಾದ ದಿವಂಗತ ಹರಿಶಂಕರ್ ಸಿಂಘಾನಿಯಾ ಅವರಿಗೆ ಕೃತಜ್ಞತೆ ಸಲ್ಲಿಸುವ ಉದ್ದೇಶದಿಂದ ಪ್ರತೀ ವರ್ಷ ಸಂಸ್ಥೆಯ ಸಾವಿರಾರು ಉದ್ಯೋಗಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಸಂಪ್ರದಾಯ ನಡೆದು ಬಂದಿರುವುದು ಶ್ಲಾಘನೀಯ ಎಂದರು.

ಜೆಕೆ ಟೈರ್ಸ್ ಅಂಡ್ ಇಂಡಸ್ಟ್ರೀಸ್‌ನ ಐಆರ್ ಮತ್ತು ಇಎಚ್‌ಎಸ್ ವಿಭಾಗದ ಹಿರಿಯರಾದ ಆರ್.ಜಗದೀಶ್ ಮಾತನಾಡಿ, ಕೈಗಾರಿಕೆಗಳಲ್ಲಿ ಈ ರೀತಿ ರಕ್ತದಾನ ಶಿಬಿರ ಆಯೋಜಿಸುವುದರಿಂದ ಸಿಬ್ಬಂದಿ ಹಾಗೂ ಸಂಸ್ಥೆ ನಡುವಿನ ಸಂಬಂಧ ಗಟ್ಟಿಯಾಗುತ್ತದೆ. ಅಲ್ಲದೆ ತುರ್ತು ಸಂದರ್ಭದಲ್ಲಿ ಸಿಬ್ಬಂದಿಗಳಿಗೆ ರಕ್ತ ಬೇಕಾದಲ್ಲಿ ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಸಹಕಾರ ಬಹಳ ಮುಖ್ಯ: ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಎಸ್.ಇ.ಗಿರೀಶ್ ಮಾತನಾಡಿ, ಇಂದೋರ್ ನಗರದ ಮಾದರಿಯಲ್ಲಿ ಮೈಸೂರಿನಲ್ಲೂ ಅಗತ್ಯವುಳ್ಳವರಿಗೆ ಶೇಕಡ ನೂರರಷ್ಟು ರಕ್ತ ಲಭ್ಯವಾಗುವಂತೆ ಮಾಡುವುದು ನಮ್ಮೆಲ್ಲರ ಗುರಿಯಾಗಬೇಕು. ಇತ್ತೀಚಿನ ವರ್ಷಗಳಲ್ಲಿ ರಕ್ತದಾನದ ಬಗ್ಗೆ ಜಾಗೃತಿ ಹೆಚ್ಚಾಗಿದೆ. 5 ವರ್ಷಕ್ಕೂ ಹಿಂದೆ ಜಿಲ್ಲೆಯಲ್ಲಿ ರಕ್ತದ ಬೇಡಿಕೆಯ ಶೇ.60 ರಷ್ಟು ಪೂರೈಕೆಯಾಗುತ್ತಿತ್ತು. ಈಗ ಶೇ.90ರಷ್ಟು ಲಭ್ಯವಾಗುತ್ತಿದೆ. ರಕ್ತದಾನ ಪ್ರೋತ್ಸಾಹಿಸುತ್ತಿದ್ದ ಪುನೀತ್ ರಾಜ್‌ಕುಮಾರ್ ನಿಧನರಾದ ನಂತರ ಸಾಕಷ್ಟು ಯುವಕರು ರಕ್ತದಾನಕ್ಕೆ ಮುಂದಾಗುತ್ತಿದ್ದಾರೆ. ಸಂಸ್ಥೆಗಳಲ್ಲಿ ಶಿಬಿರ ಆಯೋಜನೆ ಮಾಡಿದರೆ ಖಂಡಿತವಾಗಿ ಹೆಚ್ಚು ಮಂದಿ ರಕ್ತ ನೀಡುತ್ತಾರೆ. ಈ ನಿಟ್ಟಿನಲ್ಲಿ ಎಲ್ಲಾ ಸಂಘ ಸಂಸ್ಥೆಗಳ ಆಡಳಿತ ಮಂಡಳಿಯವರು ಸಾಮಾಜಿಕ ಕಳಕಳಿಯಿಂದ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಈ ವೇಳೆ ಜೀವಧಾರ ರಕ್ತನಿಧಿ ಕೇಂದ್ರದ ಮುತ್ತಣ್ಣ, ಕೆ.ಆರ್.ಆಸ್ಪತ್ರೆ ರಕ್ತನಿಧಿ ಕೇಂದ್ರದ ಅಧಿಕಾರಿ ಕುಸುಮ, ಕ್ರೆಡಿಟ್ ಐ ಸಂಸ್ಥೆಯ ಮುಖ್ಯಸ್ಥ ಎಂ.ಪಿ.ವರ್ಷ, ರಾಜೀವ್ ಕುಮಾರ್, ಎಂ.ಆನಂದ್, ಬಿ.ಎಸ್.ರವೀಂದ್ರ, ನಾಗರಾಜ್, ಶ್ರೀನಾಥ್, ಅಶ್ವತ್ ರಾಜ್, ಡೊನಾಲ್ಡ್, ಪೂರ್ಣಿಮಾ, ಕಾರ್ಮಿಕ ವಿಭಾಗದ ಪದಾಧಿಕಾರಿಗಳಾದ ಚಂದನ್, ಚನ್ನಕೇಶವ, ಅಶೋಕ್, ದಾದಾಪೀರ್, ಶಿವಕುಮಾರ್, ಕಾಂತರಾಜು, ಮತ್ತು ರವಿಕುಮಾರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 21 ಜೂನ್ 2024

ಬಾಕಿ ವೇತನ ಪಾವತಿಗೆ ಆಗ್ರಹಿಸಿ ಪ್ರತಿಭಟನೆ



ಮಂಡ್ಯ,ಜೂ.20– ಕಳೆದ ಹಲವಾರು ತಿಂಗಳುಗಳಿಂದ ಬಾಕಿ ಉಳಿಸಿಕೊಂಡಿರುವ ವೇತನ ಪಾವತಿಸುವಂತೆ ಒತ್ತಾಯಿಸಿ ನಾಡಕಚೇರಿಯ ಅಟಲ್‌ಜೀ ಜನಸ್ನೇಹಿ ಕೇಂದ್ರದ ಆಪರೇಟರ್‌ಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಕಳೆದ ಮೇ ತಿಂಗಳವರೆಗೆ ಬಾಕಿ ಇರುವ ವೇತನ ಪಾವತಿಸುವಂತೆ ಒತ್ತಾಯಿಸಿದರು.

ಕಳೆದ ಹಲವಾರು ತಿಂಗಳಿಂದ ವೇತನ ನೀಡದ ಹಿನ್ನೆಲೆಯಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಜಿಲ್ಲಾಡಳಿತದ ಗಮನಕ್ಕೆ ತಂದಾಗ ಅನುದಾನ ಬಿಡುಗಡೆಯಾಗದೆ ಇರುವ ವಿಚಾರ ತಿಳಿದು ಕಳೆದ ತಿಂಗಳು ಅಟಲ್ ಜೀ ಜನಸ್ನೇಹಿ ನಿರ್ದೇಶನಾಲಯಕ್ಕೆ ತೆರಳಿ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಮಾಡಿದ ಹಿನ್ನೆಲೆಯಲ್ಲಿ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಅನುದಾನವನ್ನು ಬಿಡುಗಡೆ ಮಾಡಿದ್ದರು, ಈ ಬಗ್ಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಚಾರಿಸಿದಾಗ ವಿಷಯ ನಿರ್ವಾಹಕಿ ಸುಮ ಅಟಲ್ ಜೀ ಜನಸ್ನೇಹಿ ಕೇಂದ್ರದಿಂದ ಪತ್ರ ಮಾತ್ರ ಬಂದಿದ್ದು, ಹಣ ಜಮಾ ಆಗಿಲ್ಲವೆಂದು ಸುಳ್ಳು ಹೇಳಿದ್ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಬಗ್ಗೆ ಪರಿಶೀಲಿಸಿದಾಗ ಹಣ ಜಮಾವಾಗಿರುವುದು ಕಂಡುಬಂದಿದ್ದು, ಜಿಲ್ಲಾಧಿಕಾರಿ ಅನುಮೋದನೆ ಬಾಕಿ ಇದೆ. ಅನುಮೋದನೆ ನಂತರ ಎರಡು ಮೂರು ದಿನದಲ್ಲಿ ಏಜೆನ್ಸಿಯವರಿಗೆ ಹಣ ಪಾವತಿ ಮಾಡಿ ಆಪರೇಟರ್‌ಗಳಿಗೆ ವೇತನ ಜಮಾ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ ಇದುವರೆಗೆ ಸ್ವಿಸ್ ಕಂಪನಿಯವರಿಗೆ ಹಣ ಸಂದಾಯವಾಗಿರುವುದಿಲ್ಲ, ಸ್ವಿಸ್ ಕಂಪನಿಯವರನ್ನು ವಿಚಾರಿಸಲಾಗಿ ಜಿಲ್ಲಾಡಳಿತದಿಂದ ಹಣ ಸಂದಾಯವಾಗಿಲ್ಲ ಎಂದು ತಿಳಿಸಿದ್ದಾರೆ, ಈ ಕೂಡಲೇ ಸಂಬಳದ ಅನುದಾನವನ್ನು ಅನುಮೋದನೆಗೊಳಿಸಿ ಬಾಕಿ ವೇತನ ಪಾವತಿಸಲು ಜಿಲ್ಲಾಡಳಿತ ಮುಂದಾಗಬೇಕು ಎಂದು ಒತ್ತಾಯಿಸಿದರು.

ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಪಾಂಡವಪುರದಲ್ಲಿ

ಬಿಜೆಪಿ ವಿನೂತನ ಪ್ರತಿಭಟನೆ

ಎಮ್ಮೆಯ ಬೆನ್ನಿಗೆ ಸಿಎಂ, ಡಿಸಿಎಂ ಪೋಸ್ಟರ್ ಹಾಕಿ ಸೈಕಲ್ ತುಳಿದು ಆಕ್ರೋಶ

ಪಾಂಡವಪುರ: ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್ ಅವರ ನೇತೃತ್ವದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಎಮ್ಮೆಯ ಬೆನ್ನಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭಾವಚಿತ್ರದ ಪೋಸ್ಟರ್ ನೇತುಹಾಕಿ, ಜಾಗಟೆ ಬಾರಿಸಿ ಸೈಕಲ್ ತುಳಿದು ವಿನೂತನವಾಗಿ ಪ್ರತಿಭಟನೆ ನಡೆಸಿ ರಾಜ್ಯ ಸರಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಮಾತನಾಡಿ, ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳ ಹೆಸರಲ್ಲಿ ಹಗಲು ದರೋಡೆಗೆ ಇಳಿದಿದ್ದು, ಅಗತ್ಯ ವಸ್ತುಗಳು ಮತ್ತು ತೈಲ ಬೆಲೆ ಏರಿಕೆ ಮೂಲಕ ಜನರನ್ನು ಸುಲಿಗೆ ಮಾಡುತ್ತಿದೆ ಎಂದು ಹರಿಹಾಯ್ದರು.



ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ರಸ್ತೆ ತಡೆ ನಡೆಸಿದರು.

ರಾಜ್ಯ ಸರಕಾರ ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಏರಿಕೆ ಆದೇಶವನ್ನು ತಕ್ಷಣ ಹಿಂಪಡೆಯಬೇಕು ಎಂಬುದು ಬಿಜೆಪಿ ಒತ್ತಾಯವಾಗಿದೆ. ಆದರೆ ಸರಕಾರ ಭಂಡತನ ಪ್ರದರ್ಶಿಸುತ್ತಿದ್ದು, ರಾಜ್ಯದ ಜನತೆಯ ಮೇಲೆ ಬೆಲೆ ಏರಿಕೆಯ ಹೊರೆ ಹೊರಿಸಿ ಆ ಮೂಲಕ ಗ್ಯಾರಂಟಿಗಳ ಯೋಜನೆಗಳಿಗೆ ಹಣ ಹೊಂದಿಕೆ ಮಾಡಲು ಹೊರಟಿದೆ. ಕಳ್ಳರು ಕೂಡ ರಾತ್ರಿ ವೇಳೆ ದರೋಡೆಗೆ ಇಳಿಯುತ್ತಾರೆ. ಆದರೆ ಕಾಂಗ್ರೆಸ್ ಸರಕಾರ ಹಗಲಿನಲ್ಲೇ ಜನರ ಹಣವನ್ನು ದೋಚಲು ಮುಂದಾಗಿದೆ. ಸ್ಟಾಂಪ್ ಪೇಪರ್, ನೋಂದಣಿ ಶುಲ್ಕ, ಮದ್ಯದ ದರ, ವಿದ್ಯುತ್ ದರದ ಜತೆಗೆ ರೈತರಿಗೆ ಒದಗಿಸುವ ಬಿತ್ತನೆ ಬೀಜಗಳ ದರವನ್ನು ಶೇ.50ರಷ್ಟು ಏರಿಕೆ ಮಾಡಲಾಗಿದೆ ಎಂದು ಆರೋಪಿಸಿದರು.

ಸರಕಾರ ತೈಲ ಬೆಲೆ ಏರಿಕೆ ಆದೇಶ ಹಿಂಪಡೆಯದಿದ್ದರೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷ ನಾಯಕ ಆರ್.ಅಶೋಕ್ ಒಳಗೊಂಡಂತೆ ಬಿಜಪಿಯ ಎಲ್ಲಾ ನಾಯಕರು ಕರ್ನಾಟಕ ಬಂದ್‌ಗೆ ಕರೆ ಕೊಡುವ ತೀರ್ಮಾನ ಕೈಗೊಳ್ಳುತ್ತಾರೆ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಕೆ.ಎಲ್.ಆನಂದ್, ಕ್ಷೇತ್ರಾಧ್ಯಕ್ಷ ನೀಲನಹಳ್ಳಿ ಧನಂಜಯ, ಜಕ್ಕನಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಎಸ್.ಎನ್.ಟಿ.ಸೋಮಶೇಖರ್, ಮೈಶುಗರ್ ಮಾಜಿ ಅಧ್ಯಕ್ಷ ಜೆಶಿವಲಿಂಗೇಗೌಡ, ಮುಖಂಡರಾದ ವಡೇಸಮುದ್ರ ಸೋಮಶೇಖರ್, ಬಳಘಟ್ಟ ಅಶೋಕ್. ರಾಜ್‌ಕುಮಾರ್, ಈರೇಗೌಡ, ಕೆನ್ನಾಳು ಚಿಕ್ಕಣ್ಣ, ಚಿಕ್ಕಮರಳಿ ನವೀನ್, ಶ್ರೀನಿವಾಸನಾಯ್ಕ, ನವೀನ್, ಡೇರಿರಾಮು ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು..

ಮಂಡ್ಯದಲ್ಲೂ ಬಿಜೆಪಿ ಪ್ರತಿಭಟನೆ



ಮಂಡ್ಯ,ಜೂ.20–ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ತೆರಿಗೆ ಹೆಚ್ಚಳ ಹಿಂಪಡೆಯಬೇಕು ಎಂದು ಒತ್ತಾಯಿಸಿ ನಗರದ ಜೆ.ಸಿ. ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಜೆ.ಸಿ. ವೃತ್ತದಲ್ಲಿ ಜಮಾವಣೆಗೊಂಡ ನೂರಾರು ಮಂದಿ ಬಿಜೆಪಿ ಕಾರ್ಯಕರ್ತರು, ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಜಿಲ್ಲಾ ಕೇಂದ್ರ ಮಂಡ್ಯ ನಗರ ತಾಲೂಕು ಕೇಂದ್ರಗಳಲ್ಲಿ ಪಕ್ಷದ ಕಾರ್ಯಕರ್ತರು ವಾಹನ ಸಂಚಾರಕ್ಕೆ ಅಡ್ಡಿಪಡಿಸಿ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪೆಟ್ರೋಲ್–ಡಿಸೇಲ್ ದರ ಏರಿಕೆ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಅವೈಜ್ಞಾನಿಕವಾದದ್ದು. ಲೋಕಸಭೆ ಚುನಾವಣೆ ಮುಗಿಯುತ್ತಿದ್ದಂತೆ, ಗ್ಯಾರಂಟಿ ಯೋಜನೆಗಳಿಗಾಗಿ ಹಣ ಹೊಂದಿಸಲು ರಾಜ್ಯ ಸರ್ಕಾರ ಜನರ ಜೇಬಿಗೆ ಕೈ ಹಾಕಿದೆ. ಬೆಲೆ ಏರಿಕೆಯಿಂದಾಗಿ ಮುಂಬರುವ ದಿನಗಳಲ್ಲಿ ಸಾರಿಗೆ ಹಾಗೂ ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಳವಾಗಲಿದೆ. ಮಧ್ಯಮ ವರ್ಗ ಹಾಗೂ ಬಡವರ ಜೀವನ ದುಸ್ತರವಾಗಲಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳದಿಂದ ಸಹಜವಾಗಿ ಸಾಗಾಣಿಕೆ ವೆಚ್ಚ ಹೆಚ್ಚಾಗಲಿದೆ. ಇದರಿಂದಾಗಿ ಅಕ್ಕಿ, ಬೇಳೆ, ಅಡುಗೆ ಎಣ್ಣೆ, ತರಕಾರಿ ಸೇರಿದಂತೆ ದಿನಬಳಕೆ ವಸ್ತುಗಳ ಬೆಲೆ ಇನ್ನೂ ದುಬಾರಿಯಾಗಲಿದೆ. ಹಾಗಾಗಿ ಈ ಕೂಡಲೇ ತೈಲ ಬೆಲೆ ಏರಿಕೆ ಮಾಡಿರುವುದನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು.

ಮುಖಂಡರಾದ ಅಶೋಕ್ ಜಯರಾಂ, ವಸಂತ್‌ಕುಮಾರ್, ಸಿ.ಟಿ.ಮಂಜುನಾಥ್, ಶಿವಕುಮಾರ ಆರಾಧ್ಯ, ವಿವೇಕ್, ಹೊಸಹಳ್ಳಿ ಶಿವು, ಚಾಮರಾಜು, ಸಿದ್ದರಾಜುಗೌಡ, ಭೀಮೇಶ್, ಶಂಕರ್, ಚಂದ್ರು ಭಾಗವಹಿಸಿದ್ದರು.

ಶ್ರೀರಂಗಪಟ್ಟಣದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಪೀಹಳ್ಳಿ ರಮೇಶ್ ಮತ್ತು ಪ್ರಧಾನ ಕಾರ್ಯದರ್ಶಿ ಬಿ.ಸಿ.ಸಂತೋಷ್ ಕುಮಾರ್ ನೇತೃತ್ವದಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಿ ಪ್ರತಿಭಟಿಸಿ ಪ್ರತಿಭಟನೆ ನಡೆಸಿದರೆ ಕೆ.ಆರ್.ಪೇಟೆಯಲ್ಲಿ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ನೇತೃತ್ವದಲ್ಲಿ ಹಾಗೂ ಜಿಲ್ಲೆಯ ವಿವಿಧೆಡೆ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು.

ಇಂದು 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಮಂಡ್ಯ, ಜೂ.20– 10 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮಂಡ್ಯ ಪಿಇಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಜೂನ್ 21 ರಂದು ಬೆಳಿಗ್ಗೆ 6 ಗಂಟೆಯಿಂದ 8 ಗಂಟೆವರೆಗೆ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರು ಹಾಗೂ ಸಂಸದರು ಮಂಡ್ಯ ಲೋಕಸಭಾ ಕ್ಷೇತ್ರ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತರಿರುವರು. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮದ ಉದ್ಘಾಟಿಸಲಿದ್ದಾರೆ. ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಶಾಸಕ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಕೆ. ವಿವೇಕಾನಂದ, ಪಿ.ಎಂ. ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ ಭಾಗವಹಿಸಲಿದ್ದಾರೆ.

ಬೆಳೆ ವಿಮೆಯ ಬಗ್ಗೆ ಹೆಚ್ಚಿನ ಜಾಗೃತಿ ಕಾರ್ಯಕ್ರಮ ಆಯೋಜಿಸಿ

ಮಂಡ್ಯ, ಜೂ.20– ಆರೋಗ್ಯ ಹಾಗೂ ವಾಹನಗಳಿಗೆ ವಿಮೆ ಮಾಡಿಸುವ ರೀತಿ ಬೆಳೆ ವಿಮೆ ಮಾಡಿಸುವುದನ್ನು ಸಹ ಪ್ರತಿ ವರ್ಷ ನಿರಂತರವಾಗಿ ಮಾಡಿಸುವುದನ್ನು ರೈತರು ರೂಡಿಸಿಕೊಳ್ಳಬೇಕು. ಬೆಳೆ ವಿಮೆಯಲ್ಲಿ ಶೇ 98 ರಷ್ಟು ಹಣ ಸರ್ಕಾರ ಹಾಗೂ ಶೇ 2 ಮಾತ್ರ ರೈತರು ಪಾವತಿಸುತ್ತಾರೆ. ಇದರ ಉಪಯುಕ್ತತೆಯ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಿ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಮುಂಗಾರು ಹಂಗಾಮು ಪೂರ್ವಸಿದ್ಧತಾ ಸಭೆ ನಡೆಸಿ ಮಾತನಾಡಿದ ಅವರು, ಸಾರ್ವಜನಿಕರು ಸರ್ಕಾರಿ ಕಚೇರಿಗಳಿಗೆ ಸಮಸ್ಯೆಗಳೊಂದಿಗೆ ಆಗಮಿಸಿದಾಗ ಅವರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಹೆಸರು, ದೂರವಾಣಿ ಸಂಖ್ಯೆಯನ್ನು ಪಟ್ಟಿ ಮಾಡಿಕೊಳ್ಳಿ. ಕೆಲಸವಾದ ನಂತರ ಅವರಿಗೆ ಕರೆ ಮಾಡಿ ತಿಳಿಸಿ, ಕಾನೂನು ತೊಡಕಿದ್ದರೆ ಮನವರಿಕೆ ಮಾಡಿಕೊಡಿ. ಇದರ ಜೊತೆಗೆ ಕೈಗೊಂಡಿರುವ ಕ್ರಮದ ವರದಿಯನ್ನು ಪ್ರತಿ ಮಾಹೆ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಿ. ಇದರಿಂದ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೊತ್ತು ಶಾಸಕರು, ಸಚಿವರ ಕಚೇರಿ ಅಲೆದಾಡುವುದು ತಪ್ಪುತ್ತದೆ ಎಂದರು.

ಜಿಲ್ಲೆಯಲ್ಲಿ 97 ಖಾಸಗಿ ಬೋರ್‌ವೆಲ್‌ಗಳಿಂದ ಒಪ್ಪಂದ ಮಾಡಿಕೊಂಡು ಬರದ ಹಿನ್ನೆಲೆ ಕುಡಿಯುವ ನೀರು ಪಡೆಯಲಾಗುತ್ತಿದೆ. ಜೂನ್ ಮಾಹೆಯಲ್ಲಿ ಉತ್ತಮ ಮಳೆಯಾಗಿದ್ದು, ಬೋರ್‌ವೆಲ್‌ಗಳಲ್ಲಿ ನೀರು ಮರುಪೂರಣವಾಗಿರುತ್ತದೆ. ಪರಿಶೀಲನೆ ನಡೆಸಿ ಖಾಸಗಿ ಬೋರ್‌ವೆಲ್‌ಗಳಿಂದ ನೀರು ಪಡೆಯುತ್ತಿರುವುದನ್ನು ಕೈಬಿಡಿ. ಅವಶ್ಯಕತೆ ಇದ್ದ ಕಡೆ ಹೊಸ ಬೋರ್‌ವೆಲ್ ಕೊರೆಯಿಸಿ ಎಂದರು.

ಈ ಹಿಂದೆ ಖಾಸಗಿ ಬೋರ್‌ವೆಲ್ ಹಾಗೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗಿದ್ದು, ಬಿಲ್ ಪಾವತಿಯಾಗಿಲ್ಲ ಎಂದು ದೂರುಗಳು ಬರುತ್ತಿವೆ. ಇದಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್‌ಗಳು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳ ಮಹಜರ್ ಮಾಡಿ ಬಿಲ್ ಪಾವತಿಸಿ. ಡಿಸೆಂಬರ್ ಅಂತ್ಯದೊಳಗೆ ಇಲಾಖೆಗಳು ಶೇ100 ರಷ್ಟು ಗುರಿ ಸಾಧಿಸಿ. ಏಪ್ರಿಲ್, ಮೇ ಮಾಹೆಯಲ್ಲಿ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಇಲಾಖಾ ಕಾರ್ಯಕ್ರಮಗಳು ಪ್ರಾರಂಭವಾಗಿಲ್ಲ. ಡಿಸೆಂಬರ್ ಅಂತ್ಯದೊಳಗೆ ಶೇ100 ರಷ್ಟು ಗುರಿ ಸಾಧನೆಯಾಗುವಂತೆ ಯೋಜನೆ ರೂಪಿಸಿ. ಜುಲೈ 10ರೊಳಗಾಗಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ಟೆಂಡರ್ ಪ್ರಕ್ರಿಯೆಗಳನ್ನು ಪ್ರಾರಂಭಿಸಿ ಎಂದು ತಿಳಿಸಿದರು.




ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅಧಿಕಾರಿಗಳ ಸಭೆ ನಡೆಸಿದರು.

ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆಯ ಕೇಂದ್ರ ಕಚೇರಿಯೊಂದಿಗೆ ಸಂಪರ್ಕದಲ್ಲಿದ್ದು, ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆಯಾಗದಂತೆ ನೋಡಿಕೊಳ್ಳಬೇಕು. ರೈತ ಸಂಪರ್ಕ ಕೇಂದ್ರಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ನಿಗಾ ವಹಿಸಬೇಕು ಎಂದರು.

ಮಣ್ಣು ಪರೀಕ್ಷೆ ಆಂದೋಲನ ರೈತರು ಬೆಳೆಯುವ ಬೆಳೆ ಹಾಗೂ ಮಣ್ಣಿಗೆ ನೀಡಬೇಕಿರುವ ಪೋಷಕಾಂಶಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲು ಮಣ್ಣು ಪರೀಕ್ಷೆ ಆಂದೋಲನ ನಡೆಸುವಂತೆ ಶಾಸಕ ರಾಮೇಶ್ ಬಾಬು ಬಂಡಿಸಿದ್ದೇಗೌಡ ಅವರು ತಿಳಿಸಿದರು.

ಒಂದು ತಾಲೂಕನ್ನು ನೋಡಲ್ ತಾಲೂಕಾಗಿ ಆಯ್ಕೆ ಮಾಡಿ ಮಣ್ಣನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಸಂಗ್ರಹಿಸಿ ಪರೀಕ್ಷೆಯ ನಂತರ ವರದಿ ಹಾಗೂ ಸಲಹೆಗಳನ್ನು ರೈತರ ಮೊಬೈಲ್ ಸಂಖ್ಯೆಗೆ ಒದಗಿಸುವ ರೀತಿ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು. ಜಿಲ್ಲಾಧಿಕಾರಿ ಡಾ. ಕುಮಾರ ಅವರು ಸಭೆಗೆ ಪ್ರಸಕ್ತ ಸಾಲಿನ ಮಳೆ ವಿವರ ನೀಡಿದರು. ಸಭೆಯಲ್ಲಿ ಶಾಸಕರಾದ ಗಣಿಗ ರವಿಕುಮಾರ್, ಉದಯ್, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ. ಮಂಜು, ದಿನೇಶ್ ಗೂಳಿಗೌಡ, ವಿವೇಕಾನಂದ, ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಇನ್ನಿತರರು ಉಪಸ್ಥಿತರಿದ್ದರು.

ನೂತನ ಸಂಸದ ಯದುವೀರ್‌ಗೆ ಅಭಿನಂದನೆ



ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ ಹಾಗೂ ಉದ್ಯಮಿ ಪ್ರವೀಣ್ ಹರನ್ನ ಶುಭ ಕೋರಿದರು.

ಡಾ.ನ.ರತ್ನರ ಅಗಲಿಕೆಗೆ ಸುತ್ತೂರು ಶ್ರೀಗಳ ಸಂತಾಪ



ಮೈಸೂರು, ಜೂ.20– ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮಾಜಿ ನಿರ್ದೇಶಕರು ಹಾಗೂ ಹಿರಿಯ ರಂಗಕರ್ಮಿಗಳೂ ಆದ ಡಾ.ನ.ರತ್ನ ಅವರ ನಿಧನಕ್ಕೆ ಸುತ್ತೂರು ಶ್ರೀ ದೇಶಿಕೇಂದ್ರ ಸ್ವಾಮೀಜಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಅವರು ಮೈಸೂರು ವಿಶ್ವವಿದ್ಯಾನಿಲಯದ ಬಿ.ಇಡಿ. ಪದವೀಧರರಾದ ನಂತರ ನ್ಯೂಯಾರ್ಕಿನ ಹಂಟರ್ ವಿಶ್ವವಿದ್ಯಾನಿಲಯದಿಂದ ಅಂಧರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಂ.ಎಸ್., ವಾಷಿಂಗ್‌ಟನ್ ಡಿ.ಸಿ.ಯ ಗಡಾಲೆಟ್ ವಿಶ್ವವಿದ್ಯಾನಿಲಯದಿಂದ ಸ್ಪೀಚ್ ಅಂಡ್ ಹಿಯರಿಂಗ್‌ನಲ್ಲಿ ಎಂಎಟಿ ಹಾಗೂ ಅಮೆರಿಕದ ಬ್ಲೂಮಿಂಗ್‌ಟನ್ನಿನ ಇಂಡಿಯಾನಾ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಶಾಸ್ತ್ರದಲ್ಲಿ ಡಾಕ್ಟರೇಟ್ ಗಳಿಸಿದ್ದರು.

ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾಗಿ ಸಂಸ್ಥೆಯನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಹೆಗ್ಗಳಿಕೆ ಅವರದ್ದಾಗಿತ್ತು. ಅವರ ವಿದ್ಯಾರ್ಥಿಗಳಾಗಿದ್ದವರು ಇಂದು ದೇಶದೆಲ್ಲೆಡೆ ಸೇವೆ ಸಲ್ಲಿಸುತ್ತಿದ್ದಾರೆ. ಹೈದರಾಬಾದಿನ ಅಲಿ ಯಾವರ್‌ಜಂಗ್ ಇನ್‌ಸ್ಟಿಟ್ಯೂಟ್ ಆಫ್ ಹಿಯರಿಂಗ್ ಸಂಸ್ಥೆಯಲ್ಲಿಯೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ದೆಹಲಿ, ಬಿಹಾರ ಮುಂತಾದ ರಾಜ್ಯಗಳಲ್ಲೂ ಕೆಲಸ ನಿರ್ವಹಿಸಿದ್ದರು. ಕೇಂದ್ರ ಸರ್ಕಾರದ ಆರೋಗ್ಯ–ಸಮಾಜ ಕಲ್ಯಾಣ ಇಲಾಖೆ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸಿದ್ದರು. ಅವರು ರಚಿಸಿದ್ದ 'ಶಾಂತಿ ಕುಟೀರ' ನಾಟಕ ಇತ್ತೀಚೆಗೆ ಮೈಸೂರಿನಲ್ಲಿ ಪ್ರದರ್ಶನಗೊಂಡಿತ್ತು. ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಸೂಕ್ತ ಸಲಹೆ, ಮಾರ್ಗದರ್ಶನ ನೀಡುತ್ತಿದ್ದರು.

ಮೈಸೂರಿನ ಸಮತೆಂತೋ ರಂಗತಂಡವನ್ನು ಕಟ್ಟಿ ನಿರಂತರವಾಗಿ 50 ವರ್ಷಗಳವರೆಗೆ ನಡೆಸಿಕೊಂಡು ಬಂದಿದ್ದರು. ರಂಗಭೂಮಿಯ ವಿವಿಧ ವಿಭಾಗಗಳಲ್ಲಿ ಅವರದ್ದೆ ಆದ ವಿಶಿಷ್ಟ ರೀತಿಯಲ್ಲಿ ಸೇವೆ ಸಲ್ಲಿಸಿದ್ದರು. ಚಲನಚಿತ್ರಗಳಲ್ಲೂ ನಟಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ ಎಂ.ಎನ್. ರಾಯ್ ಪ್ರಶಸ್ತಿ, ಹೆಲೆನ್ ಕೆಲ್ಲರ್ ಪ್ರಶಸ್ತಿ ಮೊದಲಾದ ಹಲವಾರು ಪ್ರತಿಷ್ಠಿತ ಪುರಸ್ಕಾರಗಳು ಲಭಿಸಿದ್ದವು. ದಿವಂಗತರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬವರ್ಗದವರು, ಬಂಧು–ಬಾಂಧವರು, ಹಿತೈಷಿಗಳು, ಅಭಿಮಾನಿಗಳಿಗೆ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಹಾರೈಸುತ್ತೇವೆ.

ಬಿಡಾಡಿ ದನ, ಹಂದಿಗಳ ಮಾಲೀಕರಿಗೆ ಪಾಲಿಕೆ ಎಚ್ಚರಿಕೆ

ಮೈಸೂರು,ಜೂ.20–ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿ ಹಾಗೂ ನಗರದ ಹೊರವಲಯದಲ್ಲಿ ಬಿಡಾಡಿ ದನಗಳು ಮತ್ತು ಹಂದಿಗಳ ಬಿಡುವುದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಕಸದ ತೊಟ್ಟಿಗಳಲ್ಲಿ ಆಹಾರ ಸೇವಿಸುವುದಕ್ಕಾಗಿ ಕಸವನ್ನೆಲ್ಲ ಚೆಲ್ಲಾಡುವುದರಿಂದ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.

ಈಗಾಗಲೇ ಮೌಖಿಕವಾಗಿ ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿ ಮತ್ತು ದನಗಳನ್ನು ಬಿಡಲಾಗುತ್ತದೆ. ಈ ಸಂಬಂಧ ಸಾರ್ವಜನಿಕರಿಂದ ಅನೇಕ ದೂರುಗಳು ಬರುತ್ತಿದ್ದು, ನಗರದ ಜನತೆಯ ಆರೋಗ್ಯದ ಹಿತದೃಷ್ಟಿ ಹಾಗೂ ಸ್ವಚ್ಛತೆ ನಿರ್ವಹಣೆಗಾಗಿ ಇನ್ನು ಮುಂದೆ ಹಂದಿ ಮತ್ತು ದನ ಸಾಕಾಣೆದಾರರು ಅವುಗಳನ್ನು ಮುಕ್ತವಾಗಿ ಬಿಡದಂತೆ ಪಾಲಿಕೆ ಎಚ್ಚರಿಸಿದೆ.

ಪಾಲಿಕೆ ವ್ಯಾಪ್ತಿಯ, ಸಾರ್ವಜನಿಕ ಸ್ಥಳಗಳಲ್ಲಿ ಬಿಡಾಡಿ ಹಂದಿಗಳು ಅಡ್ಡಾಡುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೆ ಅವುಗಳ ನಿರ್ಮೂಲನೆಗೆ ಕ್ರಮ ಕೈಗೊಳ್ಳಲಾಗುವುದು. ದನಗಳು ಸೆರೆ ಸಿಕ್ಕರೆ, ಅವುಗಳನ್ನು ನೇರವಾಗಿ ಪಿಂಜ್ರಾಪೋಲ್ ಅಥವಾ ಗೋಶಾಲೆಗಳಿಗೆ ಬಿಡಲಾಗುವುದು ಎಂದು ಪಾಲಿಕೆ ಆಯುಕ್ತರು ಎಚ್ಚರಿಸಿದ್ದಾರೆ.

ಅಧಿಕಾರಿಗಳು ಬೆಳಗ್ಗೆ ಹಳ್ಳಿಗಳಿಗೆ ಹೋಗಿ; ಮಧ್ಯಾಹ್ನ ಕಚೇರಿಯಲ್ಲಿ ಕಡತ ಪರಿಶೀಲಿಸಿದರೆ ಜನರ ಬಹುತೇಕ ಸಮಸ್ಯೆ ಪರಿಹಾರವಾಗುತ್ತೆ...

● ತಾಲೂಕು ಮಟ್ಟದ ಜನಸ್ಪಂದನಾ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರ ವಿಶ್ವಾಸ ● ಅಧಿಕಾರಿಗಳ ಕಾರ್ಯವೈಖರಿಗೆ ಬೇಸರ

ಮೈಸೂರು, ಜೂ.20– ತಾಲೂಕು ಮಟ್ಟದ ಅಧಿಕಾರಿಗಳು ಗ್ರಾಮಗಳಿಗೆ ತೆರಳಿದರೆ ಶೇ.90ರಷ್ಟು ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ನಡೆದ ಮೈಸೂರು ತಾಲೂಕಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿ, ಅಧಿಕಾರಿಗಳು ಪ್ರತಿ ದಿನ ಬೆಳಗ್ಗೆ ಹಳ್ಳಿಗಳಿಗೆ ಹೋಗಿ, ಮಧ್ಯಾಹ್ನ ಕಚೇರಿಯಲ್ಲಿ ಕುಳಿತು ಕಡತ ಪರಿಶೀಲಿಸಿದರೆ ಬಹುತೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಆ ಮೂಲಕ ಶಾಸಕರು, ಸರ್ಕಾರದ ಹಂತಕ್ಕೆ ದೂರುಗಳು ಹೋಗುವುದಿಲ್ಲ ಎಂದರು.

ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಜಿಲ್ಲೆಯ 235 ಗ್ರಾಪಂಗಳ 2035 ಹಳ್ಳಿಗಳಿಗೆ 100 ದಿನಗಳಲ್ಲಿ ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಪರಿಹರಿಸಿದ್ದೆ. ಹಾಗೆಯೇ ನಗರದ ನಡಿಗೆ ಮನೆ ಮನೆಗೆ ಕಾರ್ಯಕ್ರಮ ಆಯೋಜಿಸಿ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಕೆಲಸ ಮಾಡಿದ್ದೆ. ಡಿಸಿ ಹಾಗೂ ಸಿಇಒ ಪ್ರತಿಯೊಂದು ಹಳ್ಳಿಗೂ ಹೋಗಲು ಸಾಧ್ಯವಿಲ್ಲ. ತಾಲೂಕು ಮಟ್ಟದ ಅಧಿಕಾರಿಗಳು ಸರಿಯಾಗಿ ಜವಾಬ್ದಾರಿ ನಿರ್ವಹಿಸಬೇಕು. ಗ್ರಾಮ ಲೆಕ್ಕಾಧಿಕಾರಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ವಾರದಲ್ಲಿ ಒಂದು ದಿನ ಗ್ರಾಪಂನಲ್ಲಿ ಉಳಿದು ಸಮಸ್ಯೆ ಆಲಿಸಬೇಕು.

ಅಧಿಕಾರಿಗಳು ಹಳ್ಳಿಗಳಿಗೆ ಹೋಗದ ಕಾರಣ ಸಾರ್ವಜನಿಕರು ಡಿಸಿ ಕಚೇರಿ, ಸಿಎಂ ಕಚೇರಿಗೆ ಅಲೆಯುತ್ತಾರೆ. ಕಾರಣವಿಲ್ಲದೆ ಕೆಲಸ ವಿಳಂಬ ಮಾಡಬಾರದು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಗುರುವಾರ ನಡೆದ ಮೈಸೂರು ತಾಲೂಕಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು.

ಯಾವುದೇ ಕಠಿಣ ಸಮಸ್ಯೆಯಾದರೂ ಪರಿಹರಿಸಲು ಮಾರ್ಗವಿದೆ. ಹಾಗಾಗಿ, ಕಂದಾಯ, ತೋಟಗಾರಿಕೆ, ಕೃಷಿ, ಸಮಾಜ ಕಲ್ಯಾಣ, ಶಿಕ್ಷಣ ಇಲಾಖೆ ಅಧಿಕಾರಿಗಳು ಗ್ರಾಮಗಳಿಗೆ ಹೋಗಬೇಕು. ಅಧಿಕಾರಿಗಳು ವೇಳಾಪಟ್ಟಿ ಹಾಕಿಕೊಂಡು ಕೆಲಸ ಮಾಡಬೇಕು. ಪೌರ ಕಾರ್ಮಿಕರು ಮುಂಜಾನೆ 5.30ಕ್ಕೆ ಹಾಜರಾತಿ ಹಾಕಿ, ಕೆಲಸ ಆರಂಭಿಸುತ್ತಾರೆ. ಅದೇ ರೀತಿ ಅಧಿಕಾರಿಗಳು ಸಾರ್ವಜನಿಕರ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಪಾಲಿಕೆಗೆ ಪಾಲು ಸೂಕ್ತ: ಹೊಸ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಮುನ್ನ ಮೂಲ ಸೌಕರ್ಯಗಳನ್ನು ಪರಿಶೀಲಿಸಬೇಕು. ಪಟ್ಟಣ ಪಂಚಾಯ್ತಿಗಳು ಸಂಗ್ರಹಿಸಿದ ತೆರಿಗೆ ಹಣದಲ್ಲಿ ಇಂತಿಷ್ಟು ಪ್ರಮಾಣವನ್ನು ನಗರ ಪಾಲಿಕೆಗೆ ನೀಡಿದರೆ ಅನುಕೂಲವಾಗಲಿದೆ. ಆದರೆ ಈಗ ಅಲ್ಲಿಯೂ ಹಣವಿಲ್ಲ. ಕಡಕೋಳದಲ್ಲಿ ಅಟೆಂಡರ್, ಶಿರಸ್ತೇದಾರ್ ಮಾಡುವ ಕೆಲಸ ಮಾಡುತ್ತಿದ್ದಾನೆ. ಪಟ್ಟಣ ಪಂಚಾಯ್ತಿಗಳಿಗೆ 15ನೇ ಹಣಕಾಸು ಆಯೋಗದಿಂದ 2 ಕೋಟಿ ರೂ. ಅನುದಾನ ಕೊಡಿಸಿದ್ದೇನೆ. ಕುಡಿಯುವ ನೀರು, ವಿದ್ಯುತ್ ದೀಪ, ಸ್ವಚ್ಛತೆಗೆ ಒತ್ತು ನೀಡಿದರೆ ಜನ ತೆರಿಗೆ ಕಟ್ಟುತ್ತಾರೆ. ಮೈಸೂರು ನಗರದಲ್ಲಿ ಸಣ್ಣ ಯುಜಿಡಿ ಸಮಸ್ಯೆಯಾದರೂ ಅಧಿಕಾರಿಗಳು ಕ್ರಮ ವಹಿಸುವುದಿಲ್ಲ. ಎರಡು ಇಂಚು ಪೈಪ್ ಹಾಳಾದರೂ ರಿಪೇರಿ ಮಾಡಿಸುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮುಡಾ ಅಧಿಕಾರಿಗಳು ವಿಫಲ...

ರಿಯಲ್ ಎಸ್ಟೇಟ್‌ನಿಂದಾಗಿ ನಗರದ ಹೊರ ವಲಯದಲ್ಲಿ ಸಾಕಷ್ಟು ಬಡಾವಣೆಗಳು ಬೆಳೆದಿವೆ. ಆದರೆ, ಬಡಾವಣೆ ರಚನೆ ಮಾಡುವಾಗ ಪ್ಲಾನ್ ನೋಡಲಿಲ್ಲ. ನಿವೇಶನ ಮಂಜೂರು ಮಾಡುವಾಗ ಅಲ್ಲಿ ಮೂಲ ಸೌಕರ್ಯ ಕಲ್ಪಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಿಲ್ಲ. ಇದರಿಂದಾಗಿ ಬಡಾವಣೆಗಳು ಯೋಜನಾಬದ್ಧವಾಗಿಲ್ಲ. ಇದು ಈಗಿನದ್ದಲ್ಲ 25 ವರ್ಷಗಳಿಂದ ಉಳಿದು ಬಂದಿರುವ ಸಮಸ್ಯೆ. ಮುಡಾ ಅಧಿಕಾರಿಗಳ ಕಾರ್ಯ ವೈಫಲ್ಯದಿಂದ ಈ ಸಮಸ್ಯೆ ಕಗ್ಗಂಟಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಸಮಾಧಾನ ವ್ಯಕ್ತಪಡಿಸಿದರು.

ಎಂಎಲ್‌ಎ ಕೆಲಸವೇ ಬೇಡ ಅನ್ನಿಸಿದೆ

ಇತ್ತೀಚಿನ ದಿನಗಳಲ್ಲಿ ಎಂಎಲ್‌ಎ ಕೆಲಸವೇ ಬೇಡವೇ ಬೇಡ ಅನ್ನಿಸಿದೆ. ಸಮಸ್ಯೆಗಳ ಆಗರ ಜಾಸ್ತಿಯಾಗಿದೆ. ಜನ ಕಣ್ಣೀರು ಹಾಕುತ್ತಾರೆ. ನಾವು ಎಷ್ಟು ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ ನಿತ್ಯ ನೂರಾರು ಜನ ಬರುತ್ತಾರೆ. ಸಣ್ಣ ಸಣ್ಣ ವಿಚಾರಗಳನ್ನು ನೋಡಬೇಕು. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ.

ಸಾರಿಗೆ ಸೌಲಭ್ಯ ಕಲ್ಪಿಸಿ: ಕೊರೊನಾ ನಂತರ ಕೆಲವು ಮಾರ್ಗಗಳಿಗೆ ಸಾರಿಗೆ ಬಸ್ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಎರಡು ವಿಭಾಗ ರದ್ದು ಮಾಡಿದ್ದೂ ಈ ಸಮಸ್ಯೆಗೆ ಕಾರಣವಾಗಿತ್ತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಗಮನಕ್ಕೆ ತಂದ ಮೇಲೆ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗವಾಗಿ ಬೇರ್ಪಡಿಸಲಾಗಿದೆ. ಆದರೆ, ಹಳೆಯ ಮಾರ್ಗಗಳಲ್ಲಿ ಓಡಾಡುತ್ತಿದ್ದ ಬಸ್‌ಗಳನ್ನು ಇನ್ನೂ ಪುನಾರಂಭಿಸಿಲ್ಲ. ಈ ಬಗ್ಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಕ್ರಮ ವಹಿಸಬೇಕು. ಹೆಚ್ಚು ಮಂದಿ ಪ್ರಯಾಣಿಸುವ ಇಲವಾಲ, ಜಯಪುರ ಮಾರ್ಗದ ಬಸ್ ಸಂಖ್ಯೆ ಹೆಚ್ಚಿಸಬೇಕು. ಬಡವರ ಕಷ್ಟಕ್ಕೆ ಸ್ಪಂದಿಸದಿದ್ದರೆ ಅವರ ಕಣ್ಣೀರ ಶಾಪ ತಟ್ಟುತ್ತದೆ ಎಂದರು.

ರಾಷ್ಟ್ರ, ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಯಲ್ಲಿ ಕೊಡವ ಯುವಕನ ಅತ್ಯುತ್ತಮ ಸಾಧನೆ



ಗೌತಮ್

ಮೈಸೂರು, ಜೂ. 20 –ಬೆಂಗಳೂರಿನ ಶ್ರೀ ಚೈತನ್ಯ ಟೆಕ್ನೋ ಸ್ಕೂಲ್‌ನ ಕೊಡವ ವಿದ್ಯಾರ್ಥಿ ತಾತಂಡ ಗೌತಮ್ ಅತೀ ಹೆಚ್ಚು ಅಂಕ ಗಳಿಸುವ ಮೂಲಕ ರಾಷ್ಟ್ರ ಮತ್ತು ರಾಜ್ಯಮಟ್ಟದ ಪ್ರವೇಶ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಗೌತಮ್, ಜೆಇಇ ಅಡ್ವಾನ್ಸ್ಡ್ 2024ರಲ್ಲಿ ಅಖಿಲ ಭಾರತ ಶ್ರೇಣಿಯಲ್ಲಿ 210ನೇ ಸ್ಥಾನದಲ್ಲಿ ತೇರ್ಗಡೆ ಹೊಂದಿದ್ದಾರೆ. ಅಲ್ಲದೆ ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಪ್ರವೇಶ ಪರೀಕ್ಷೆ 2024ರಲ್ಲಿ ಅಖಿಲ ಭಾರತ 1ನೇ ರ್‍ಯಾಂಕ್‌ನೊಂದಿಗೆ ಉನ್ನತ ಸ್ಥಾನವನ್ನು ಪಡೆದಿದ್ದಾರೆ ಮತ್ತು ಎಂಜಿನಿಯರಿಂಗ್‌ಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) 32ನೇ ರ್‍ಯಾಂಕ್ ಪಡೆದಿದ್ದಾರೆ.

ಇದರ ಜೊತೆಗೆ ಬಿ.ಎಸ್ಸಿ ಅಗ್ರಿಕಲ್ಚರ್ ಸಿಇಟಿಯಲ್ಲಿ 30ನೇ ರ್‍ಯಾಂಕ್, ಕರ್ನಾಟಕ ರಾಜ್ಯ ಬಿ ಫಾರ್ಮಾ ಸಿಇಟಿಯಲ್ಲಿ 72ನೇ ರ್‍ಯಾಂಕ್ ಪಡೆದಿದ್ದಾರೆ. ಜೆಇಇ ಅಡ್ವಾನ್ಸ್ಡ್ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ (ಐಐಟಿ) ಪ್ರವೇಶಕ್ಕಾಗಿ ಇದು ಅತ್ಯುನ್ನತ ಸ್ಪರ್ಧಾತ್ಮಕ ಪರೀಕ್ಷೆಯಾಗಿದೆ. ಗೌತಮ್ ಅವರು ಶೈಕ್ಷಣಿಕ ಪ್ರಯಾಣವು ಶ್ರೀ ಚೈತನ್ಯ ಟೆಕ್ನೋ ಸ್ಕೂಲ್‌ನಲ್ಲಿ ಪರಿಣತ ಶಿಕ್ಷಕರ ಕಠಿಣ ತಯಾರಿ ಮತ್ತು ಮಾರ್ಗದರ್ಶನದ ಮೂಲಕ ಆರಂಭವಾಯಿತು. ಗೌತಮ್ ಕಟ್ಟುನಿಟ್ಟಾದ ದೈನಂದಿನ ದಿನಚರಿಯನ್ನು ಅನುಸರಿಸಿದರು. ಎಲ್ಲಾ ವಿಷಯಗಳಿಗೆ ಸಮಯವನ್ನು ನಿಗದಿಪಡಿಸಿಕೊಂಡು ಸಮಸ್ಯೆಗಳನ್ನು ಸ್ಥಿರವಾಗಿ ಅಭ್ಯಾಸ ಮಾಡಿದ್ದಾರೆ. ಗೌತಮ್ ಅವರು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc.) ನಲ್ಲಿ ಬ್ಯಾಚುಲರ್ ಆಫ್ ಸೈನ್ಸ್ (ಸಂಶೋಧನೆ) ಕಾರ್ಯಕ್ರಮಕ್ಕೆ ಸೇರಲು ಯೋಚಿಸಿದ್ದು, ಅಲ್ಲಿ ಅವರು ಸಂಶೋಧನೆ ಮತ್ತು ಶುದ್ಧ ವಿಜ್ಞಾನದಲ್ಲಿ ವೃತ್ತಿಜೀವನವನ್ನು ಮುಂದುವರಿಸುವ ಗುರಿಯನ್ನು ಹೊಂದಿದ್ದಾರೆ. ಐಐಎಸ್‌ಸಿ ದೇಶದ ಅತ್ಯಂತ ಗೌರವಾನ್ವಿತ ಸಂಶೋಧನಾ ಸಂಸ್ಥೆಗಳಲ್ಲಿ ಒಂದಾಗಿದೆ.

ಕೊಡಗಿನ ವಿರಾಜಪೇಟೆ ಸಮೀಪದ ಕುಕ್ಲೂರು ಗ್ರಾಮದವರಾದ ಗೌತಮ್, ಪ್ರಸ್ತುತ ಬೆಂಗಳೂರಿನಲ್ಲಿ ತಮ್ಮ ತಂದೆ ತಾತಂಡ ವಿಕ್ರಮ್ ಭೀಮಯ್ಯ ಮತ್ತು ದೇಚಮ್ಮ (ಮೊನ್ನಂಡ) ಅವರೊಂದಿಗೆ ನೆಲೆಸಿದ್ದಾರೆ. ಇವರು ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿ ನೆಲೆಸಿರುವ ತಾತಂಡ ಭೀಮಯ್ಯ ಮತ್ತು ದಿವಂಗತ ಶಾರದ ಭೀಮಯ್ಯ ಅವರ ಮೊಮ್ಮಗ.

ಇಂದು ವಿಶೇಷಚೇತನರಿಂದ ಯೋಗ ಪ್ರದರ್ಶನ


ಮೈಸೂರು,ಜೂ.20(ಪಿಎಂ)– ಇಕ್ವಿಬೀಯಿಂಗ್ ಫೌಂಡೇಷನ್ ಮತ್ತು ಮೈಸೂರಿನ ತಿಲಕನಗರದ ಬಾಲಕರ ಸರ್ಕಾರಿ ಅಂಧ ಶಾಲೆ ಜಂಟಿ ಆಶ್ರಯದಲ್ಲಿ ಜೂ.21ರಂದು ಬೆಳಗ್ಗೆ 9.30ಕ್ಕೆ ಇಕ್ವಿಯೋಗ ಶೀರ್ಷಿಕೆಯಡಿ ಯೋಗ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೈಸೂರಿನ ತಿಲಕ್‌ನಗರದ ಬಾಲಕರ ಸರ್ಕಾರಿ ಅಂಧರ ಶಾಲೆ ಆವರಣದಲ್ಲಿ ಯೋಗ ಪ್ರದರ್ಶನ ನಡೆಯಲಿದ್ದು, ಇನ್ಫೋಸಿಸ್ ಪ್ರಾಯೋಜಕತ್ವದಲ್ಲಿ ಅಂಧತ್ವ ಹೊಂದಿರುವ ಮಕ್ಕಳು ಹಾಗೂ ಯುವ ಜನರಿಗೆ ಯೋಗ ಮತ್ತು ಧ್ಯಾನದಲ್ಲಿ ತರಬೇತಿ ನೀಡಲು ವಿನ್ಯಾಸಗೊಳಿಸಿದ ಕಾರ್ಯಕ್ರಮ ಇದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ರಾಮಾಯಣ ಅವಹೇಳನ ನಾಟಕ ವಿದ್ಯಾರ್ಥಿಗಳಿಗೆ ತಲಾ 1.2 ಲಕ್ಷ ರೂ. ದಂಡ

ಮುಂಬೈ: ಹಿಂದೂಗಳ ಪವಿತ್ರ ಗ್ರಂಥ ರಾಮಾಯಣವನ್ನು ಅವಹೇಳನ ಮಾಡುವ ರೀತಿಯಲ್ಲಿ ಸ್ಕ್ರಿಪ್ಟ್ ಮಾಡಿದ್ದ ವಿದ್ಯಾರ್ಥಿಗಳಿಗೆ ಐಐಟಿ ಬಾಂಬೇ 1.2 ಲಕ್ಷ ರೂ ದಂಡ ವಿಧಿಸಿದೆ.



ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಬಾಂಬೆ ಮಾರ್ಚ್ 31ರಂದು ಪರ್ಫಾರ್ಮಿಂಗ್ ಆರ್ಟ್ಸ್ ಫೆಸ್ಟಿವಲ್ ಆಯೋಜಿಸಿತ್ತು. ಈ ಸಂದರ್ಭದಲ್ಲಿ ರಾಮಾಯಣದ ವಿಡಂಬನೆ ಎಂದು ಹೇಳಲಾದ 'ರಾಹೋವನ' ಶೀರ್ಷಿಕೆಯ ವಿವಾದಾತ್ಮಕ ನಾಟಕವನ್ನು ಪ್ರದರ್ಶಿಸಿದ ಎಂಟು ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ದಂಡ ವಿಧಿಸಿದೆ.

ಈ ನಾಟಕದಲ್ಲಿ ಸ್ತ್ರೀವಾದವನ್ನು ಉತ್ತೇಜಿಸುವ ಸೋಗಿನಲ್ಲಿ ರಾಮ, ಲಕ್ಷ್ಮಣ ಸೇರಿದಂತೆ ಪ್ರಮುಖ ಪಾತ್ರಗಳನ್ನು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಅಪಹಾಸ್ಯ ಮಾಡಲಾಗಿದೆ ಎಂದು ಕೆಲವು ವಿದ್ಯಾರ್ಥಿಗಳು ಆರೋಪಿಸಿದ್ದರು. ಇದೇ ದೂರಿನ ಆಧಾರದ ಮೇಲೆ ಮೇ 8 ರಂದು ಐಐಟಿ ಬಾಂಬೆ ಶಿಸ್ತು ಸಮಿತಿ ಸಭೆ ಕರೆದಿತ್ತು. ಇದರ ಪರಿಣಾಮವಾಗಿ ಜೂನ್ 4ರಂದು ಸಂಸ್ಥೆಯು ನಾಲ್ವರು ವಿದ್ಯಾರ್ಥಿಗಳಿಗೆ ತಲಾ 1.2 ಲಕ್ಷ ದಂಡವನ್ನು ವಿಧಿಸಿದ್ದು, ಮೊತ್ತವು ಸೆಮಿಸ್ಟರ್‌ನ ಬೋಧನಾ ಶುಲ್ಕದಂತೆಯೇ ಇರುತ್ತದೆ. ಉಳಿದ ನಾಲ್ವರು ವಿದ್ಯಾರ್ಥಿಗಳಿಗೆ ತಲಾ 40,000 ದಂಡ ವಿಧಿಸಲಾಗಿದೆ ಎಂದು ತಿಳಿದುಬಂದಿದೆ.

ಸಿಂಗಾಪುರ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ: ಭಾರತ ಮೂಲದ ವ್ಯಕ್ತಿಗೆ 5 ವಾರ ಜೈಲು

ಸಿಂಗಾಪುರ: ಮದ್ಯದ ಅಮಲಿನಲ್ಲಿ ಭಾರತೀಯ ಮೂಲದ ವ್ಯಕ್ತಿಯೊಬ್ಬ ಸಿಂಗಾಪುರದ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ಮಾಡಿ ಜೈಲು ಶಿಕ್ಷೆಗೆ ಗುರಿಯಾಗಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಇಲ್ಲಿನ ನ್ಯಾಯಾಲಯ ಭಾರತೀಯ ಮೂಲದ ವ್ಯಕ್ತಿಗೆ ಐದು ವಾರಗಳ ಕಾಲ ಜೈಲು ಶಿಕ್ಷೆ ವಿಧಿಸಿ ಆದೇಶ ಮಾಡಿದೆ ಎಂದು ವರದಿಯಾಗಿದೆ. 24 ವರ್ಷದ ದೇವೇಶ್ ರಾಜ್ ರಾಜಶೇಖರನ್ ಐದು ವಾರಗಳ ಕಾಲ ಜೈಲು ಶಿಕ್ಷೆಗೆ ಗುರಿಯಾಗಿದ್ದವನು.

ಸಿಂಗಾಪುರದಲ್ಲಿ ನೆಲೆಸಿರುವ ರಾಜಶೇಖರನ್ 2022ರಲ್ಲಿ ತನ್ನ ಸ್ನೇಹಿತನಾದ ರವಿ ಎಂಬಾತನ ಜೊತೆ ಸೇರಿ ಇತರರೊಂದಿಗೆ ಜಗಳವಾಡುತ್ತಿದ್ದ. ಇದನ್ನು ಗಮನಿಸಿದ ಪೊಲೀಸ್ ಅಧಿಕಾರಿಯೊಬ್ಬರು ವಿಚಾರಿಸಲು ತೆರಳಿದ್ದಾರೆ. ಈ ವೇಳೆ, ಪಾನಮತ್ತನಾಗಿದ್ದ ರಾಜಶೇಖರನ್ ಅಧಿಕಾರಿಯೊಂದಿಗೆ ಜಗಳಕ್ಕಿಳಿದು ಮುಖಕ್ಕೆ ಬಲವಾಗಿ ಹೊಡೆದಿದ್ದ. ಪರಿಣಾಮ ಪೊಲೀಸ್ ಅಧಿಕಾರಿ ಸ್ಥಳದಲ್ಲೇ ಪ್ರಜ್ಞೆತಪ್ಪಿ ಕುಸಿದು ಬಿದ್ದಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೂ ಸಾಗಿಸಲಾಗಿತ್ತು. ಹಲವು ದಿನಗಳ ಬಳಿಕ ಚೇತರಿಸಿಕೊಂಡಿದ್ದರು. ಈ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ಆರೋಪಿಯನ್ನು ವಿಚಾರಿಸಿದ್ದರು. ಈ ವರ್ಷದ ಮಾರ್ಚ್ ತಿಂಗಳಲ್ಲಿ ಆರೋಪಿ ರಾಜಶೇಖರನ್ ತಾನು ಪೊಲೀಸ್ ಅಧಿಕಾರಿಗೆ ಹೊಡೆದಿರುವು ದಾಗಿ ನ್ಯಾಯಾಲಯದ ಮುಂದೆ ತಪ್ಪೊಪ್ಪಿಕೊಂಡಿದ್ದಾನೆ. ಪ್ರಕರಣವನ್ನು ಆಲಿಸಿದ ನ್ಯಾಯಾಲಯ ಆರೋಪಿಗೆ 5 ವಾರಗಳ ಕಾಲ ಜೈಲುಶಿಕ್ಷೆ ವಿಧಿಸಿ ಆದೇಶ ಮಾಡಿದೆ. ಇದೇ ಪ್ರಕರಣದಲ್ಲಿ 3 ವರ್ಷ ಜೈಲು ಶಿಕ್ಷೆ ಮತ್ತು 5000 ಸಿಂಗಾಪುರ ಡಾಲರ್ ಶಿಕ್ಷೆ ವಿಧಿಸುವ ಸಾಧ್ಯತೆ ಇತ್ತು. ಆದರೆ ಆರೋಪಿ ಪಾನಮತ್ತನಾಗಿದ್ದು ಮತ್ತು ಮಾಡಿರುವ ತಪ್ಪನ್ನು ಒಪ್ಪಿಕೊಂಡಿದ್ದಕ್ಕೆ ಶಿಕ್ಷೆಯ ಪ್ರಮಾಣ ಕಡಿತಗೊಳಿಸಲಾಗಿದೆ.

ಮೆಕ್ಕಾ ದುರಂತ ಸಾವಿನ ಸಂಖ್ಯೆ 1000ಕ್ಕೇರಿಕೆ: 68 ಭಾರತೀಯರ ಪೈಕಿ ಕರ್ನಾಟಕದ ಮೂವರು ಸಾವು

ಮೆಕ್ಕಾ: ಮುಸ್ಲಿಂ ಸಮುದಾಯದ ಪವಿತ್ರ ಕ್ಷೇತ್ರವಾದ ಮೆಕ್ಕಾದಲ್ಲಿ ಇತ್ತೀಚೆಗೆ ಸಂಭವಿಸಿದ ಅತೀ ಉಷ್ಣಾಂಶದಿಂದ ಉಂಟಾದ ಸಾವಿನ ಸಂಖ್ಯೆ 900 ದಾಟಿದೆ.



ಈಗಾಗಲೇ ಮೃತಪಟ್ಟಿರುವ 900 ಮಂದಿಯಲ್ಲಿ ಭಾರತದವರು 68 ಮಂದಿಯಿದ್ದು, ಅವರಲ್ಲಿ ಕರ್ನಾಟಕದ ರಾಯಚೂರು, ಬೆಂಗಳೂರು ಹಾಗೂ ಚಿತ್ರದುರ್ಗದ ತಲಾ ಒಬ್ಬರು ಸೇರಿದ್ದಾರೆಂದು ಮೂಲಗಳು ತಿಳಿಸಿವೆ.

ಮೆಕ್ಕಾಕ್ಕೆ ಪ್ರವಾಸ ಹೋಗಿದ್ದ ಹಲವಾರು ಮಂದಿಯ ಸಂಬಂಧಿಕರು, ಇಂಟರ್ನೆಟ್ ಹಾಗೂ ಮೆಕ್ಕಾ ಪವಿತ್ರ ಕ್ಷೇತ್ರದ ಅಧಿಕೃತ ವೆಬ್‌ಸೈಟ್‌ಗಳನ್ನು ಎಡತಾಕುತ್ತಿದ್ದು ಅವುಗಳ ಮೂಲಕ ತಮ್ಮ ಸಂಬಂಧಿಕರ ಸುರಕ್ಷತೆ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಅನೇಕರು ಮೆಕ್ಕಾದಲ್ಲಿರುವ ಆಸ್ಪತ್ರೆಗಳಿಗೆ ಭೇಟಿ ನೀಡಿ, ಅಲ್ಲಿ ತಮ್ಮ ಸಂಬಂಧಿಕರಿಗಾಗಿ ಹುಡುಕಾಟ ನಡೆಸಿದ್ದಾರೆ. ಈಗ ಸೌದಿ ಅರೇಬಿಯಾದಲ್ಲಿ ಬೇಸಿಗೆ ಕಾಲವಿದ್ದು, ಇದೇ ಸಂದರ್ಭದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಮೆಕ್ಕಾದಲ್ಲಿ ವಾರ್ಷಿಕ ಧಾರ್ಮಿಕ ಆಚರಣೆಗಳು ನಡೆಯುತ್ತಿದ್ದವು. ಈ ಬಾರಿ ಅಲ್ಲಿಗೆ 1.8 ಮಿಲಿಯನ್ ಭಕ್ತರು ಆಗಮಿಸಿದ್ದಾರೆಂದು ಹೇಳಲಾಗಿದೆ.

ಫಿಲಿಪ್ಪೀನ್ಸ್ ನೌಕಾ ಸಿಬ್ಬಂದಿ ಜತೆ ಚೀನಾ ಸೇನೆ ಕಾಳಗ: ದೋಣಿ ಡಿಕ್ಕಿ ಹೊಡೆಸಿ; ಚಾಕು, ಕೊಡಲಿ ಪ್ರಹಾರ

ಮನೀಲಾ: ಸಮುದ್ರದ ನಡುವೆ ಫಿಲಿಪ್ಪೀನ್ಸ್‌ನ ನೌಕಾಪಡೆ ಹಡಗಿನ ಸಿಬ್ಬಂದಿ ಜತೆ ಚೀನಾ ಗುದ್ದಾಡಿದೆ. ಚಾಕುಗಳು, ಕೊಡಲಿ ಹಾಗೂ ಇತರೆ ಆಯುಧಗಳನ್ನು ಝಳಪಿಸುವ ಮೂಲಕ ಚೀನಾ ಕರಾವಳಿ ಕಾವಲು ಪಡೆ ಸಿಬ್ಬಂದಿ, ಫಿಲಿಪ್ಪೀನ್ಸ್ ನೌಕಾಪಡೆ ಹಡಗಿನ ಜತೆ ಘರ್ಷಣೆ ನಡೆಸಿದೆ.



ವಿವಾದಿತ ಸೆಕೆಂಡ್ ಥಾಮಸ್ ಶಾವೊಲ್‌ನಲ್ಲಿ ನಿಲ್ಲಿಸಲಾಗಿರುವ ಯುದ್ಧ ನೌಕೆ ಸಿಯೆರ್ರಾ ಮಾಡ್ರೆಯಲ್ಲಿ ಬೋಟ್‌ಗಳನ್ನು ಸೇರಿಸಲು ಫಿಲಿಪ್ಪೀನ್ಸ್ ಪಡೆಗಳು ಪ್ರಯತ್ನ ನಡೆಸಿದ್ದವು. ಆಗ ಚೀನಾ ಕರಾವಳಿ ಕಾವಲು ಪಡೆಯ ಸುಮಾರು 8 ಬೋಟ್‌ಗಳು ಫಿಲಿಪ್ಪೀನ್ಸ್‌ನ 2 ದೋಣಿಗಳಿಗೆ ಪದೇ ಪದೆ ಡಿಕ್ಕಿ ಹೊಡೆದಿವೆ. ಚೀನಾ ಸಿಬ್ಬಂದಿ ಮಚ್ಚು, ಚಾಕು ಹಾಗೂ ಸುತ್ತಿಗೆಗಳಿಂದ ಅವರ ಹಡಗುಗಳಿಗೆ ಹಾನಿ ಮಾಡಿದ್ದಾರೆ. ಸೆಕೆಂಡ್ ಥಾಮಸ್ ಶಾವೊಲ್ ತನ್ನ ಜಾಗ ಎಂದು ಚೀನಾ ಪ್ರತಿಪಾದಿಸುತ್ತಿದೆ. ಅಲ್ಲಿ ನಿಲ್ಲಿಸಲಾಗಿರುವ ಫಿಲಿಪ್ಪೀನ್ಸ್ ಹಡಗಿಗೆ ಶಸ್ತ್ರಾಸ್ತ್ರಗಳು ಹಾಗೂ ಆಹಾರಗಳು ಸೇರಿದಂತೆ ಇತರೆ ಯಾವುದೇ ಸಾಮಗ್ರಿಗಳನ್ನು ಪೂರೈಕೆ ಮಾಡದಂತೆ ಫಿಲಿಪ್ಪೀನ್ಸ್ ನೌಕಾಪಡೆಯನ್ನು ತಡೆಯಲು ಚೀನಾ ಸಿಬ್ಬಂದಿ ದಾಳಿ ನಡೆಸಿದ್ದಾರೆ. ವಾಗ್ವಾದ ಹಾಗೂ ಸತತ ಡಿಕ್ಕಿಗಳ ಬಳಿಕ, ಚೀನೀ ಕರಾವಳಿ ಪಡೆ ಸಿಬ್ಬಂದಿ ಫಿಲಿಪ್ಪೀನ್ಸ್ ನೌಕಾಪಡೆಯ ಹಡಗಿನ ಒಳಗೆ ಜಿಗಿದು, ಪ್ಯಾಕ್ ಮಾಡಿ ಇರಿಸಲಾಗಿದ್ದ ಎಂಟು ಎಂ4 ರೈಫಲ್‌ಗಳು, ನೇವಿಗೇಷನ್ ಸಾಧನಗಳು ಮತ್ತು ಇತರೆ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ.

ದೆಹಲಿ ಬಿಸಿಲಿಗೆ 48 ಗಂಟೆಗಳಲ್ಲಿ 50 ಮೃತದೇಹ ಪತ್ತೆ; 9 ದಿನಗಳಲ್ಲಿ 192 ನಿರಾಶ್ರಿತರು ಸಾವು!

ನವದೆಹಲಿ: ದೆಹಲಿಯ ಬಿಸಿ ಈಗ ಬಡವರಿಗೆ ಯಮನಾಗಿ ಮಾರ್ಪಟ್ಟಿದೆ. ಬಿಸಿಲಿನ ತಾಪ ಇದೀಗ ಮಾರಕವಾಗಿ ಪರಿಣಮಿಸಿದೆ. ಇದು ಪ್ರತಿದಿನ ಜನರ ಪ್ರಾಣ ತೆಗೆಯುತ್ತಿದೆ. ದೆಹಲಿಯಲ್ಲಿ ತೀವ್ರ ಬಿಸಿಲಿನ ತಾಪ ಮತ್ತು ಶಾಖದ ಅಲೆಯಿಂದ ಸಾವಿನ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿದೆ. ಕಳೆದ 48 ಗಂಟೆಗಳಲ್ಲಿ 50 ಮೃತದೇಹಗಳು ಪತ್ತೆಯಾಗಿರುವುದರಿಂದ ದೆಹಲಿಯಲ್ಲಿ ಸಂಚಲನ ಉಂಟಾಗಿದೆ.

ಕಳೆದ 9 ದಿನಗಳಲ್ಲಿ 192 ನಿರಾಶ್ರಿತರು ಬಿಸಿಲಿಗೆ ಪ್ರಾಣ ಕಳೆದುಕೊಂಡಿದ್ದಾರೆ. ಅಧಿಕಾರಿಗಳ ಪ್ರಕಾರ, 48 ಗಂಟೆಗಳ ಅವಧಿಯಲ್ಲಿ ದೆಹಲಿಯ ವಿವಿಧ ಭಾಗಗಳಿಂದ ವಂಚಿತ ಸಾಮಾಜಿಕ–ಆರ್ಥಿಕ ಹಿನ್ನೆಲೆಗೆ ಸೇರಿದ 50 ಜನರ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವರೆಲ್ಲರೂ ತಾಪಮಾನಕ್ಕೆ ಸಂಬಂಧಿತ ಕಾರಣಗಳಿಂದ ಸಾವನ್ನಪ್ಪಿದ್ದಾರೆಯೇ ಎಂದು ಪೊಲೀಸರು ಮತ್ತು ಆರೋಗ್ಯ ಅಧಿಕಾರಿಗಳು ಖಚಿತಪಡಿಸಿಲ್ಲ. ಇಂಡಿಯಾ ಗೇಟ್ ಬಳಿಯ ಮಕ್ಕಳ ಉದ್ಯಾನವನದಲ್ಲಿ 55 ವರ್ಷದ ವ್ಯಕ್ತಿಯ ಶವ ಪತ್ತೆಯಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಸತಿ ರಹಿತರಿಗಾಗಿ ಕೆಲಸ ಮಾಡುವ ಎನ್‌ಜಿಒ 'ಸೆಂಟರ್ ಫಾರ್ ಹೋಲಿಸ್ಟಿಕ್ ಡೆವಲಪ್‌ಮೆಂಟ್' ಜೂನ್ 11 ಮತ್ತು 19ರ ನಡುವೆ ದೆಹಲಿಯಲ್ಲಿ ತೀವ್ರ ಶಾಖದಿಂದಾಗಿ 192 ನಿರಾಶ್ರಿತರು ಸಾವನ್ನಪ್ಪಿದ್ದಾರೆ ಎಂದು ಹೇಳಿದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಘಟನೆಗೆ ಶಾಸಕ ಹರೀಶ್‌ಗೌಡರು ಕರೆ

- ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಬಿಜೆಪಿಗೆ ಅತ್ಯಧಿಕ ಲೀಡ್ ಬಂದ ಬಗ್ಗೆ ಆತ್ಮಾವಲೋಕನ
- ಮತದಾರರ ಮನ ಗೆಲ್ಲುವಲ್ಲಿ ಎಲ್ಲೋ ಎಡವಿರುವ ಬಗ್ಗೆ ಕಾರ್ಯಕರ್ತರೊಂದಿಗೆ ಚಿಂತನೆ

ಮೈಸೂರು, ಜೂ.20(ಎಂಕೆ)– ಸೋಲಿಗೆ ಕುಗ್ಗದೆ ತಾಳ್ಮೆಯೊಂದಿಗೆ ಚಾಮರಾಜ ವಿಧಾನ ಸಭಾ ಕ್ಷೇತ್ರದ ಎಲ್ಲಾ ಮತದಾರರನ್ನು ಪ್ರೀತಿ–ವಿಶ್ವಾಸದಿಂದ ಸಂಘಟಿಸುವ ಮೂಲಕ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಪ್ರಾಮಾಣಿಕವಾಗಿ ಶ್ರಮಿಸುವಂತೆ ಕ್ಷೇತ್ರದ ಮುಖಂಡರು, ಕಾರ್ಯಕರ್ತರಿಗೆ ಶಾಸಕ ಕೆ.ಹರೀಶ್‌ಗೌಡ ಕರೆ ನೀಡಿದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಮುಖಂಡರು, ಕಾರ್ಯಕರ್ತರಿಗೆ ಅಭಿನಂದನೆ ಹಾಗೂ ಕೃತಜ್ಞತಾ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾತನಾಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ಕೆಲಸ ಮಾಡಿದ ಕ್ಷೇತ್ರದ ಮುಖಂಡರು, ಕಾರ್ಯಕರ್ತರಿಗೆ ಅಭಿನಂದನೆ ಹಾಗೂ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಇದು ಕೃತಜ್ಞತಾ ಸಭೆಗಿಂತ ಶೋಕ ಸಭೆ ಎಂದರೆ ತಪ್ಪಾಗಲಾರದು. ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಗಿಂತ ಹೆಚ್ಚಿನ ಮತಗಳನ್ನು ನಮ್ಮ(ಕಾಂಗ್ರೆಸ್) ಅಭ್ಯರ್ಥಿಗೆ ಕೊಡಿಸಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 31 ಸಾವಿರ ಮಂದಿ ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿದ್ದಾರೆ. ಬಹುತೇಕ ಮನೆಗಳು ಉಚಿತ ವಿದ್ಯುತ್ ಪಡೆದುಕೊಳ್ಳುತ್ತಿದ್ದಾರೆ. ಫಲಾನುಭವಿಗಳಲ್ಲಿ ಮನೆಗೊಬ್ಬರು ಮತ ನೀಡಿದ್ದರೂ 50 ಸಾವಿರಕ್ಕಿಂತ ಹೆಚ್ಚಿನ ಮತಗಳು ಬರುತ್ತಿದ್ದವು. ಆದರೆ ಫಲಾನುಭವಿಗಳ ಮತ ಸೆಳೆಯುವಲ್ಲಿ ವಿಫಲರಾಗಿದ್ದೇವೆ. ಕಳೆದ ಲೋಕಸಭಾ ಚುನಾವಣೆಗಿಂತಲೂ ಹೆಚ್ಚಿನ ಮತಗಳು ಬಂದಿದ್ದರೂ ಲೀಡ್ ಕೊಡಿಸುವಲ್ಲಿ ಸಾಧ್ಯವಾಗಿಲ್ಲ. 36 ಸಾವಿರದಿಂದ 50 ಸಾವಿರಕ್ಕೆ ಸಮೀಪಿಸಿದ್ದೇವೆ. ಆದರೆ, ಬಿಜೆಪಿಗೆ ಕಳೆದ ಬಾರಿ 39 ಸಾವಿರ ಇದ್ದ ಲೀಡ್ ಈ ಬಾರಿ 59 ಸಾವಿರಕ್ಕೇರಿದೆ. ಏಕಾಂಗಿಯಾಗಿ ಈ ಬಾರಿ ಕಾಂಗ್ರೆಸ್ ಪಕ್ಷ ಸ್ಪರ್ಧೆ ಮಾಡಿತ್ತು ಜನರು ನಮ್ಮ ಕೈ ಹಿಡಿಯದಿರುವುದು ಬೇಸರದ ಸಂಗತಿ ಎಂದರು.

ಮುಸ್ಲಿಂ ಸಮುದಾಯದ ಮತಗಟ್ಟೆಗಳಿರುವ ದೇವರಾಜ ಬ್ಲಾಕ್‌ನಲ್ಲಿ ಲೀಡ್ ಬಂದಿದ್ದು, ಉಳಿದ 190 ಬೂತ್‌ಗಳಲ್ಲಿಯೂ ಹಿನ್ನಡೆಯಾಗಿದೆ. ಶಾಸಕನಾಗಿ ನಾನೇನಾದರೂ ಸರಿ ಇಲ್ಲವಾ.. ನನಗೇನು ದುರಹಂಕಾರವೇ.. ಅಸಡ್ಡೆಯೇ.. ಇಂತಹದ್ದೇನನ್ನೂ ನಾನು ಮಾಡಿಲ್ಲ. ಪ್ರತಿನಿತ್ಯ ಕ್ಷೇತ್ರದಲ್ಲಿ ಸಂಚರಿಸಿ, ಜನರ ಕಷ್ಟಗಳನ್ನು ಕೇಳುತ್ತಿದ್ದೇನೆ. ನನ್ನ ಚುನಾವಣೆಯಲ್ಲಿ ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ಮತ ನೀಡಿದ್ದರು. ಒಕ್ಕಲಿಗ ಬಾಂಧವರೇ ಹೆಚ್ಚಿರುವ ಇಂದಿರಾ ಗಾಂಧಿ ಬ್ಲಾಕ್‌ನಲ್ಲಿ ಅತೀ ಕಡಿಮೆ ಮತ ಬಂದಿದೆ. ಸುಮಾರು 20 ಸಾವಿರ ಲೀಡ್ ಬರಬಹುದು ಎಂದು ಹೇಳಿದ್ದೆ, 59 ಸಾವಿರ ಲೀಡ್ ಊಹಿಸಿರಲಿಲ್ಲ. ನಮಗೂ ಮನಸ್ಸು ಮನುಷ್ಯತ್ವವಿದ್ದು, ನೋವಾಗಲಿದೆ ಎಂದು ಹೇಳಿದರು.

ಅಲ್ಲದೆ ಒಳ್ಳೆಯ ಅಭ್ಯರ್ಥಿಯಾಗಿದ್ದು, ವಕ್ತಾರರಾಗಿ ಬಿಜೆಪಿ–ಜೆಡಿಎಸ್‌ನ ದುರಾಡಳಿತವನ್ನು ತಿಳಿಸುವ ಮೂಲಕ ಜನರನ್ನು ಲಕ್ಷ್ಮಣ್ ಎಚ್ಚರಿಸುತ್ತಿದ್ದರು. ಅವರಿಗೆ ಯಾರು ವಿರೋಧಿಗಳು ಇಲ್ಲ. ಎಲ್ಲಿಯೂ ಭ್ರಷ್ಟಾಚಾರ ಮಾಡಿದವರಲ್ಲ. ಕೆಟ್ಟ ಅಭಿಪ್ರಾಯಗಳೂ ಇಲ್ಲ. ಐದು ಗ್ಯಾರಂಟಿ ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದ್ದರೂ ಯಾಕೆ ಮತ ಕೊಡಲಿಲ್ಲ ಎಂಬುದೇ ಯಕ್ಷಪ್ರಶ್ನೆಯಾಗಿದೆ. ಕಾಂಗ್ರೆಸ್ ಅಭ್ಯರ್ಥಿಗೆ ಸೋಲಾಗಿದ್ದರೂ ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಮತಗಳನ್ನು ಕೊಡಿಸಲು ಶ್ರಮಿಸಿದ ಕ್ಷೇತ್ರದ ಎಲ್ಲಾ ಮುಖಂಡರು, ಕಾರ್ಯಕರ್ತರಿಗೆ ಕೃತಜ್ಞತೆ ತಿಳಿಸುತ್ತೇನೆ. ಹಾಗೆಯೇ ಮುಂಬರುವ ನಗರಪಾಲಿಕೆ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ 12 ರಿಂದ 13 ಸ್ಥಾನ ಗೆಲ್ಲಲೇಬೇಕಿದೆ. ಈ ನಿಟ್ಟಿನಲ್ಲಿ ಸಂಘಟನೆ ಮಾಡುವಂತೆ ಸೂಚಿಸಿದರು.


ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಇನ್ನಷ್ಟು ಬಲಿಷ್ಠವಾಗಬೇಕಾದರೆ ಅಹಿಂದ ಸಂಘಟನೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸಣ್ಣ ಸಣ್ಣ ಸಮುದಾಯಗಳನ್ನು ಗುರ್ತಿಸಿ ಪಕ್ಷದೊಳಗೆ ಸೇರಿಸಿಕೊಳ್ಳಬೇಕು. ಅವರಿಗೆ ಸ್ಥಾನಮಾನ ನೀಡಬೇಕು. ನಿಷ್ಠಾವಂತ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಬೇಕು. ಪಕ್ಷ ನಮಗೆ ಅವಕಾಶ ಕೊಟ್ಟಿದೆ. ಹೀಗಾಗಿ ಮುಂದಿನ ದಿನಗಳಲ್ಲಿಯೂ ಜನತೆ ಪರವಾಗಿ ದುಡಿಯುವೆ. ನಗರಪಾಲಿಕೆಯಲ್ಲಿ ಹೆಚ್ಚಿನ ಸ್ಥಾನ ಗೆಲ್ಲಲು ಶ್ರಮಿಸುವುದಾಗಿ ಹೇಳಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಇಂದಿರಾ ಬ್ಲಾಕ್ ಅಧ್ಯಕ್ಷ ರವಿ ಎನ್ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ಯು.ಎಸ್.ರಮೇಶ್(ರಾಯಪ್ಪ), ನಗರ ನಗರ ಪ್ರಧಾನ ಕಾರ್ಯದರ್ಶಿಗಳಾದ ಭಾಸ್ಕರ್ ಎಲ್.ಗೌಡ, ಎಂ.ಶಿವಣ್ಣ, ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ವೆಂಕಟಸುಬ್ಬಯ್ಯ, ಎ.ಆರ್.ರವಿಕುಮಾರ್, ರವಿ ರಾಜಕೀಯ, ಪುಷ್ಪವಲ್ಲಿ, ಸುಧೀರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಪಾಲಿಕೆಗೆ ಆಸ್ಟ್ರೇಲಿಯಾ ಕಾನ್ಸುಲ್ ಜನರಲ್ ಹಿಲರಿ ಮ್ಯಾಕ್‌ಗೆಚಿ ಭೇಟಿ

ಪಾಲಿಕೆ ಆಯುಕ್ತರೊಂದಿಗೆ ಸಮಾಲೋಚನೆ





ಬೆಂಗಳೂರಲ್ಲಿ ಆಸ್ಟ್ರೇಲಿಯಾ ಕಾನ್ಸುಲ್ ಜನರಲ್ ಹಿಲರಿ ಮ್ಯಾಕ್‌ಗೆಚಿ (ಬಲದಿಂದ ಎರಡನೆಯವರು) ಮತ್ತು ಸಹಪಾಠಿ ಆಂಡ್ರ್ಯೂ ಕೊಲಿಸ್ಟರ್(ಎಡಬದಿ) ಅವರು ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಬುಧವಾರ ಪಾಲಿಕೆ ಆಯುಕ್ತ ಆಶಾದ್ ಉರ್‌ರೆಹಮಾನ್ ಷರೀಫ್ ಹಾಗೂ ಅಸಿಸ್ಟಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಎಸ್.ಮೃತ್ಯುಂಜಯ ಅವರೊಂದಿಗೆ ಸಮಾಲೋಚನೆ ನಡೆಸಿದರು. (ಮತ್ತೊಂದು ಚಿತ್ರದಲ್ಲಿ) ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರೊಂದಿಗೂ ಕಾನ್ಸುಲ್ ಜನರಲ್

ಮೈಸೂರು, ಜೂ. 20 (ಆರ್‌ಕೆ)–ಆಸ್ಟ್ರೇಲಿಯಾ ಕಾನ್ಸುಲ್ ಜನರಲ್ ಹಿಲರಿ ಮ್ಯಾಕ್‌ಗೆಚಿ ಅವರು ಬುಧವಾರ ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ಭೇಟಿ ನೀಡಿ ಆಯುಕ್ತಆಶಾದ್ ಉರ್ ರೆಹಮಾನ್ ಷರೀಫ್‌ರೊಂದಿಗೆ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಿದರು.

ಆಂಡ್ರ್ಯೂ ಕೊಲಿಸ್ಟರ್ ಅವರೊಂದಿಗೆ ಆಗಮಿಸಿದ್ದ ಹಿಲರಿ ಮ್ಯಾಕ್‌ಗೆಚಿ ಅವರನ್ನು ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡ ಆಯುಕ್ತಷರೀಫ್, ಅಸಿಸ್ಟಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆಎಸ್. ಮೃತ್ಯುಂಜಯ ಅವರೊಂದಿಗೆ ಪಾಲಿಕೆ ಕಚೇರಿಯ ಎಲ್ಲಾ ವಿಭಾಗಗಳಿಗೂ ಕರೆದೊಯ್ದು ಅಲ್ಲಿನ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.

ನಂತರ ಆಯುಕ್ತರ ಕಚೇರಿಯಲ್ಲಿ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಸಾಂಸ್ಕೃತಿಕ ನಗರಿಯ ವಿಶ್ವ ಪ್ರಸಿದ್ಧ ದಸರಾ ಮಹೋತ್ಸವ, ಯೋಗಾಭ್ಯಾಸ, ಪ್ರವಾಸ, ಶಿಕ್ಷಣ, ಉದ್ಯಮಕ್ಕಾಗಿ ಆಸ್ಟ್ರೇಲಿಯಾ ಸೇರಿದಂತೆ ವಿಶ್ವದ ಹಲವು ದೇಶಗಳಿಂದ ಮೈಸೂರಿಗೆ ಬರುತ್ತಿದ್ದಾರೆ ಎಂದು ಆಯುಕ್ತ ಷರೀಫ್ ತಿಳಿಸಿದರು.

ಮೈಸೂರಿನ ಜನಸಂಖ್ಯೆ, ವಿದೇಶಿಗರ ವಾಸ್ತವ್ಯ, ಇಲ್ಲಿನ ಪರಿಸರ, ಪಾಲಿಕೆಯಿಂದ ಸಾರ್ವಜನಿಕರಿಗೆ ಕಲ್ಪಿಸುತ್ತಿರುವ ಮೂಲ ಸೌಕರ್ಯ, ಪಾರ್ಕ್‌ಗಳ ನಿರ್ವಹಣೆ, ಕುಡಿಯುವ ನೀರು ಸರಬರಾಜು, ಒಳಚರಂಡಿ, ಶೌಚಾಲಯ, ಸ್ವಚ್ಛತಾ ಕಾರ್ಯ ನಿರ್ವಹಣೆ, ಮನೆ ಮನೆಯಿಂದ ಸಂಗ್ರಹಿಸಿ ಘನತಾಜ್ಯ ವಿಲೇವಾರಿ, ಬೀದಿದೀಪ, ಐತಿಹಾಸಿಕ ಮಾರುಕಟ್ಟೆಗಳು, ಪ್ರವಾಸಿ ಕೇಂದ್ರಗಳು, ನಗರ ಸಾರಿಗೆ ವ್ಯವಸ್ಥೆ ಹೀಗೆ ಹಲವು ವಿಚಾರಗಳ ಬಗ್ಗೆ ಮಾಹಿತಿ ನೀಡಿದರು.

ಮೈಸೂರು ಯೋಗಕ್ಕೆ ಖ್ಯಾತಿಯಾಗಿದ್ದು, ಆಸ್ಟ್ರೇಲಿಯಾ ಸೇರಿದಂತೆ ವಿಶ್ವದ ಹಲವು ದೇಶಗಳಿಂದ ಯೋಗ ತರಬೇತಿಗೆ ಪ್ರತೀ ವರ್ಷ ಸಾವಿರಾರು ಜನ ಬರುತ್ತಿದ್ದಾರೆ. ಅರಮನೆ, ಚಾಮುಂಡಿಬೆಟ್ಟ, ಕೆಆರ್‌ಎಸ್, ಮೃಗಾಲಯ ವಿದೇಶಿಗರನ್ನು ಸೆಳೆಯುತ್ತಿವೆ. ಇಲ್ಲಿನ ಸ್ವಚ್ಛತೆ, ತಾಜ್ಯ ವಿಲೇವಾರಿ, ಪಾರಂಪರಿಕ ಕಟ್ಟಡ ಮತ್ತು ಸ್ಮಾರಕಗಳು, ಸಂಸ್ಕೃತಿ, ಕಲೆ ಜಗತ್ತಿನ ಇತಿಹಾಸವನ್ನು ಸಾರುವಂತಿದೆ ಎಂದು ತಿಳಿಸಿದರು.

ಅದೇ ವೇಳೆ ಕಾನ್ಸುಲ್ ಜನರಲ್ ಹಿಲರಿ ಮ್ಯಾಕ್‌ಗೆಚಿ, ಆಸ್ಟ್ರೇಲಿಯಾದ ನಗರ ನಿರ್ವಹಣೆ, ಪ್ರವಾಸಿ ತಾಣಗಳ ಇತಿಹಾಸ, ಶಿಕ್ಷಣ, ಆರೋಗ್ಯ ಪದ್ಧತಿಗಳ ಬಗ್ಗೆ ಪಾಲಿಕೆ ಅಧಿಕಾರಿಗಳೊಂದಿಗೆ ಹಂಚಿಕೊಂಡರಲ್ಲದೆ, ಆಸ್ಟ್ರೇಲಿಯಾದಲ್ಲಿರುವ ಜನಸಂಖ್ಯೆಯಲ್ಲಿ ಶೇ.4ರಷ್ಟು ಭಾರತೀಯರಿದ್ದು, ಅದರಲ್ಲೂ ದಕ್ಷಿಣ ಭಾರತ ರಾಜ್ಯಗಳವರೇ ಹೆಚ್ಚು ಮಂದಿ ನೆಲೆಸಿದ್ದಾರೆ. ಅದೇ ರೀತಿ ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿಗಳು ಆಸ್ಟ್ರೇಲಿಯಾಗೆ ಬಂದಿದ್ದಾರೆ ಎಂದು ಸಂತಸದಿಂದ ತಿಳಿಸಿದರು.

ನಂತರ ಮೈಸೂರು ಮಹಾನಗರ ಪಾಲಿಕೆಯಿಂದ ವಿವಿಧ ರೀತಿಯ ತೆರಿಗೆ ಸಂಗ್ರಹ, ಸಂಪನ್ಮೂಲ ಕ್ರೋಢೀಕರಣ, ನಗರದ ಸೌಂದರ್ಯೀಕರಣ, ನಿರ್ವಹಣೆ, ಸರ್ಕಾರದ ಅಭಿವೃದ್ಧಿ ಯೋಜನೆಗಳ ಬಗ್ಗೆಯೂ ಪಾಲಿಕೆ ಅಸಿಸ್ಟಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಎಸ್.ಮೃತ್ಯುಂಜಯ ಅವರು ಕಾನ್ಸುಲೇಟ್ ಜನರಲ್ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಅವರು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನೂ ಭೇಟಿ ಮಾಡಿ, ರಾಷ್ಟ್ರಗಳ ನಡುವೆ ಸಂಬಂಧ ಬೆಸೆಯುವ(ಸಹಭಾಗಿತ್ವ) ಬಗ್ಗೆಯೂ ಸಮಾಲೋಚನೆ ನಡೆಸಿದರು. ನಂತರ ಹೆಬ್ಬಾಳಿನ ಇನ್‌ಫೋಸಿಸ್ ಗ್ಲೋಬಲ್ ಎಜುಕೇಷನ್ ಸೆಂಟರ್‌ಗೂ ಭೇಟಿ ನೀಡಿದ್ದರು.

ಪತ್ನಿ ಹತ್ಯೆ: ಪತಿಗೆ ಜೀವಾವಧಿ ಶಿಕ್ಷೆ

ಮೈಸೂರು, ಜೂ. 20 (ಆರ್‌ಕೆ)– ಶೀಲ ಶಂಕಿಸಿ ಪತ್ನಿ ಮೇಲೆ ಸ್ಯಾನಿಟೈಜರ್ ಸುರಿದು ಬೆಂಕಿ ಹಚ್ಚಿ ಹತ್ಯೆ ಮಾಡಿದ್ದ ವ್ಯಕ್ತಿಗೆ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ನಂಜನಗೂಡು ತಾಲೂಕು, ದೇಬೂರು ಗ್ರಾಮದ ಲೇಟ್ ಕರ್ಷ ಅವರ ಮಗ ಸುಬ್ಬ ಅಲಿಯಾಸ್ ರವಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. 10 ವರ್ಷಗಳ ಹಿಂದೆ ನಂಜನಗೂಡು ಪಟ್ಟಣದ ರಾಜಾಜಿ ಕಾಲೋನಿಯ ನಂಜುಂಡ ಎಂಬುವರ ಪುತ್ರಿ ಅಮುದಾರನ್ನು ಮದುವೆಯಾಗಿದ್ದ. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿವೆ.

ಕೆಲ ವರ್ಷಗಳ ಬಳಿಕ ಶೀಲ ಶಂಕಿಸಿ ಸುಬ್ಬ ಪ್ರತೀ ದಿನ ಮದ್ಯಪಾನ ಮಾಡಿ ಬಂದು ಜಗಳ ತೆಗೆದು ಅಮುದಾಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ. 2020ರ ಡಿಸೆಂಬರ್ 6ರಂದು ಸಂಜೆ 4 ಗಂಟೆ ವೇಳೆ ಜಗಳ ಆರಂಭಿಸಿ, ಸಂಜೆ 6.30 ಗಂಟೆ ಸಮಯದಲ್ಲಿ ಮನೆಯಲ್ಲಿದ್ದ ಸ್ಯಾನಿಟೈಜರ್ ಅನ್ನು ಅಮುದಾ ಮೇಲೆ ಸುರಿದು ಬೆಂಕಿ ಹಚ್ಚಿದ್ದ. ತೀವ್ರ ಸುಟ್ಟಗಾಯಗಳಾಗಿ ನರಳುತ್ತಿದ್ದ ಆಕೆಯನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದರು.


ಪ್ರಕರಣ ದಾಖಲಿಸಿಕೊಂಡಿದ್ದ ನಂಜನಗೂಡು ಠಾಣೆಯ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ, ತನಿಖೆ ನಡೆಸಿ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗುರು ರಾಜ್ ಸೋಮಕ್ಕಳವರ, ವಾದ–ಪ್ರತಿವಾದ ಆಲಿಸಿ ಸಾಕ್ಷ್ಯಾಧಾರಗಳಿಂದ ಸುಬ್ಬನ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಜೀವಾವಧಿ ಶಿಕ್ಷೆ ಮತ್ತು 6 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಈ. ಯೋಗೇಶ್ವರ್ ವಾದ ಮಂಡಿಸಿದ್ದರು.

ಲೆಫ್ಟಿನೆಂಟ್ ಆಗಿ ಆಯ್ಕೆಯಾದ ಮೈಸೂರಿನ ಸಿ.ಎಸ್.ಕಿರಣ್ ಅವರಿಗೆ ಅಭಿನಂದನೆ

ಭಾರತೀಯ ಸೇನೆಯ ಸೇವೆಯಿಂದ ಉತ್ತಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ

ಮೈಸೂರು,ಜೂ.20(ಪಿಎಂ)– ಭಾರತೀಯ ಸೇನೆ ಸೇರ್ಪಡೆಯಿಂದ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.



ಮೈಸೂರಿನ ಗೋಕುಲಂನಲ್ಲಿರುವ ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಲೆಫ್ಟಿನೆಂಟ್ ಸಿ.ಎಸ್.ಕಿರಣ್ ಅವರನ್ನು ಗುರುವಾರ ಅಭಿನಂದಿಸಲಾಯಿತು.

ಮೈಸೂರಿನ ಗೋಕುಲಂನಲ್ಲಿರುವ ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಅಖಿಲ ಭಾರತ ಹಿಂದುಳಿದ ವರ್ಗಗಳ ರೈಲ್ವೆ ನೌಕರರ ಸಂಘದ ವತಿಯಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಲು ಲೆಫ್ಟಿನೆಂಟ್ ಆಗಿ ಆಯ್ಕೆಯಾಗಿರುವ ಮೈಸೂರಿನ ಸಿ.ಎಸ್.ಕಿರಣ್ ಅವರಿಗೆ ಗುರುವಾರ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುವುದು ಒಂದು ಮೇರು ವೃತ್ತಿಯೂ ಆಗಲಿದ್ದು, ಅದಕ್ಕೂ ಮಿಗಿಲಾಗಿ ಉನ್ನತ ವ್ಯಕ್ತಿತ್ವ ವಿಕಸನಕ್ಕೂ ಪೂರಕವಾಗುತ್ತದೆ. ಜೊತೆಗೆ ಭಾರತೀಯ ಸೇನೆಯ ತರಬೇತಿಗಳು ಆದರ್ಶಪೂರ್ಣ ಸಮಾಜ ನಿರ್ಮಾಣಕ್ಕೂ ಪೂರಕವಾಗುತ್ತದೆ. ಹಾಗಾಗಿ ಸೇನೆ ಎಂದರೆ ಕೇವಲ ಯುದ್ಧ ಎಂದು ಪರಿಭಾವಿಸುವುದು ತಪ್ಪು ಎಂದು ಹೇಳಿದರು.

ಸಿ.ಎಸ್.ಕಿರಣ್ ಅವರನ್ನು ಗುರುತಿಸಿ ಅಭಿನಂದಿಸಿರುವುದು ಶ್ಲಾಘನೀಯ. ಅವರು ಇಂಜಿನಿಯರಿಂಗ್ ಪದವೀಧರರಾದರೂ ದೇಶ ಸೇವೆಗಾಗಿ ಸೇನೆಯನ್ನು ಆಯ್ಕೆ ಮಾಡಿಕೊಂಡಿರುವುದು ಅಭಿನಂದನಾರ್ಹ. ದೇಶದ ರಕ್ಷಣೆ ವಿಚಾರದಲ್ಲಿ ನಮ್ಮ ಮೈಸೂರು ಅಥವಾ ಕರ್ನಾಟಕವು ಹಿಂದಿನಿಂದಲೂ ಮುಂದಿದೆ. ಮೈಸೂರು ಇತಿಹಾಸ ಗಮನಿಸಿದರೆ ದೇಶದ ರಕ್ಷಣೆ ವಿಚಾರದಲ್ಲಿ ಮಹತ್ವದ ಕೊಡುಗೆ ನೀಡಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಮೈಸೂರು ಅಶ್ವದಳ ಸೇನೆಯು ತನ್ನ ವಿಶಿಷ್ಟ ಪ್ರಾಮುಖ್ಯತೆ ಹೊಂದಿತ್ತು ಎಂದರು.

ಅಂದಿನ ಮೈಸೂರು ಸಂಸ್ಥಾನವು ಅತ್ಯುತ್ತಮವಾದ ಅಶ್ವದಳ ಸೇನೆಯನ್ನು ಹೊಂದಿತ್ತು. ಮೈಸೂರು ಇನ್‌ಫ್ಯಾಂಟ್ರಿ (ಕಾಲಾಳು ಪಡೆ) 1 ಮತ್ತು 2 ಈಗ 18ನೇ ಮದ್ರಾಸ್‌ನಲ್ಲಿ ಸೇರ್ಪಡೆಗೊಂಡಿವೆ. ನಮ್ಮ ಮೈಸೂರು ಲ್ಯಾನ್ಸರ್ಸ್ ಮೊದಲನೇ ಮಹಾಯುದ್ಧದಲ್ಲಿ ಮಹತ್ವದ ಪಾತ್ರ ವಹಿಸಿತ್ತು. ನಾವು ಇಂದಿನ ಇಸ್ರೇಲ್ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಅಂದೇ ಇಸ್ರೇಲ್‌ನ ನಗರಗಳನ್ನು ಸ್ವಾತಂತ್ರ್ಯಗೊಳಿಸುವಲ್ಲಿ ನಮ್ಮ ಮೈಸೂರಿನಿಂದ ತೆರಳಿದ್ದ ಯೋಧರು ದೊಡ್ಡ ಪಾತ್ರ ವಹಿಸಿದ್ದರು ಎಂದು ಸ್ಮರಿಸಿದರು.

ಮೈಸೂರು ಅರಸರು ಕೂಡ ಓಬಿಸಿ ಸಮುದಾಯಕ್ಕೆ ಸೇರಿದವರು. ಓಬಿಸಿ ಸಮುದಾಯಗಳು ಸಂಘಟಿತವಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು. ಈ ನಿಟ್ಟಿನಲ್ಲಿ ಮುಂದುವರೆಯುವ ಅಗತ್ಯವಿದೆ ಎಂದರು. ಇದಕ್ಕೂ ಮುನ್ನ ಲೆಫ್ಟಿನೆಂಟ್ ಸಿ.ಎಸ್.ಕಿರಣ್ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಸಿ.ಎಸ್.ಕಿರಣ್ ಸಂಕ್ಷಿಪ್ತ ಪರಿಚಯ: ಮೈಸೂರಿನ ನಿವಾಸಿಯಾದ ಲೆಫ್ಟಿನೆಂಟ್ ಸಿ.ಎಸ್.ಕಿರಣ್ ಅವರು 1998 ಆಗಸ್ಟ್ 17ರಂದು ಮಂಡ್ಯ ಜಿಲ್ಲೆಯ ಬೆಳ್ಳೂರು ಕ್ರಾಸ್‌ನಲ್ಲಿ ಜನಿಸಿದರು. ಇವರು ಸಿ.ಆರ್. ಶಿವಕುಮಾರ್ ಮತ್ತು ಆರ್.ರುಕ್ಮಿಣಿ ದಂಪತಿ ಪುತ್ರ. ಶಿವಕುಮಾರ್ ಮೈಸೂರಿನ ಜೆಕೆ ಟೈರ್ಸ್‌ನಲ್ಲಿ ಉದ್ಯೋಗಿ ಆಗಿದ್ದು, ರುಕ್ಮಿಣಿ ಗೃಹಿಣಿ. ಕಿರಣ್ ಅವರು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಭಾರತೀಯ ವಿದ್ಯಾಭವನದಲ್ಲಿ ಪೂರೈಸಿ, ಪಿಯು ಶಿಕ್ಷಣವನ್ನು ಮರಿಮಲ್ಲಪ್ಪ ಕಾಲೇಜಿನಲ್ಲಿ ಪಡೆದರು. ಬಳಿಕ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಪದವಿ ಪಡೆದರು.

ಭಾರತೀಯ ಸೇನೆಯ ಮೇಜರ್ ಮಂಜುನಾಥ, ಅಖಿಲ ಭಾರತ ಹಿಂದುಳಿದ ವರ್ಗಗಳ ರೈಲ್ವೆ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವೈಗೋವರ್ಧನ್, ಮೈಸೂರು ವಿಭಾಗದ ಕಾರ್ಯದರ್ಶಿ ಎಂ. ಜಗದೀಶ, ಯೂತ್ ಹಾಸ್ಟೆಲ್‌ನ ರಾಷ್ಟ್ರೀಯ ಉಪಾಧ್ಯಕ್ಷ ರವಿಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಅವರ ಪುತ್ರ ಮದನ್ ಮಾದೇಶ್ ಮತ್ತಿತರರು ಹಾಜರಿದ್ದರು.

ಭಾರತೀಯ ಸೇನೆ ಸೇರಲು ಪೋಷಕರು ತಮ್ಮ ಮಕ್ಕಳಿಗೆ ಪ್ರೇರೇಪಿಸಬೇಕು...

ನನ್ನ ವಿದ್ಯಾಭ್ಯಾಸ ಎಲ್ಲವೂ ಮೈಸೂರಿನಲ್ಲಿ ಆಯಿತು. ಇಂಜಿನಿಯರಿಂಗ್ ಪದವಿ ಪಡೆದ ಬಳಿಕ ಕಂಪನಿಯೊಂದರಲ್ಲಿ ಕೆಲಕಾಲ ಕೆಲಸ ಮಾಡಿದೆ. ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಆಗಿ 9 ತಿಂಗಳು ಸೇವೆ ಸಲ್ಲಿಸಿದ್ದೇನೆ. ಇಲ್ಲಿ ಸಾಕಷ್ಟು ಪೋಷಕರು ಬಂದಿರುವ ಕಾರಣಕ್ಕೆ ಹೇಳುತ್ತೇನೆ. ನಮ್ಮ ದಕ್ಷಿಣ ಭಾರತದಲ್ಲಿ ಸೇನೆ ಎಂದರೆ ಕೇವಲ ಯುದ್ಧ ಎಂಬ ತಪ್ಪು ಭಾವನೆ ಇದೆ. ಸೇನೆಯಲ್ಲಿ ಸೇವೆ ಸಲ್ಲಿಸುವುದೂ ಬೇರೆ ಎಲ್ಲಾ ವೃತ್ತಿಗಳಂತೆಯೇ ಆಗಿದೆ ಹಾಗಾಗಿ ಪೋಷಕರು ತಮ್ಮ ಮಕ್ಕಳು ಭಾರತೀಯ ಸೇನೆಯನ್ನು ಸೇರಲು ಪ್ರೇರೇಪಿಸಬೇಕು.

–ಲೆಫ್ಟಿನೆಂಟ್ ಸಿ.ಎಸ್.ಕಿರಣ್

ಮೈಸೂರು ಮಿತ್ರ ಶುಕ್ರವಾರ 21 ಜೂನ್ 2024

ಗೋಣಿಕೊಪ್ಪ ಅಂಬೂರ್ ಬಿರಿಯಾನಿ ಹೋಟೇಲ್ ಕಟ್ಟಡ ಕುಸಿತ





ಗೋಣಿಕೊಪ್ಪ ಮುಖ್ಯರಸ್ತೆಯಲ್ಲಿ ಕುಸಿದ ಹೋಟೆಲ್, ಮಾಂಸ ಮಾರಾಟ ಮಳಿಗೆಯ ಹಳೇ ಕಟ್ಟಡವನ್ನು ಸ್ಥಳೀಯರು, ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ತುರ್ತು ಕಾರ್ಯಾಚರಣೆ ನಡೆಸಿದರು.

ಗೋಣಿಕೊಪ್ಪ, ಜೂ.20– ಇಲ್ಲಿನ ಅಂಬೂರ್ ಬಿರಿಯಾನಿ ಹೋಟೇಲ್ ಹಾಗೂ ಮಾಂಸದ ಅಂಗಡಿ ಇದ್ದ ಕಟ್ಟಡ ಕುಸಿದು ಬಿದ್ದು, ನಾಲ್ವರು ಗಾಯಗೊಂಡ ಘಟನೆ ನಡೆದಿದೆ. ಅದೃಷ್ಟವಶಾತ್ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬಿರಿಯಾನಿ ಹೊಟೇಲ್ ಮಾಲೀಕ ಆಂಧ್ರ ಮೂಲದ ತಿರುಮುರುಗನ್(60), ಅಲಮೇಲ(50), ಗ್ರಾಹಕ ನಾಗರಹೊಳೆಯ ತಿಮ್ಮ (35) ಹಾಗೂ ತಿತಿಮತಿಯ ಮಧು (38) ಎಂಬುವರು ಘಟನೆಯಲ್ಲಿ ಗಾಯಗೊಂಡಿದ್ದಾರೆ. ಮಧು ಎಂಬುವವರ ಕಾಲು ಮುರಿದಿದ್ದು ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರು ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ.

ವಿವರ: ಗೋಣಿಕೊಪ್ಪದ ಮುಖ್ಯ ರಸ್ತೆಯ ಸಣ್ಣುವಂಡ ಉತ್ತಯ್ಯ ಎಂಬುವರಿಗೆ ಸೇರಿದ ಸುಮಾರು 80 ವರ್ಷ ಹಳೆಯದಾದ ಈ ಕಟ್ಟಡದಲ್ಲಿ ಅಂಬೂರ್ ಬಿರಿಯಾನಿ ಸೆಂಟರ್ ಮತ್ತು ಮಟನ್ ಅಂಗಡಿ ಇತ್ತು. ಮಧ್ಯಾಹ್ನ 2 ಗಂಟೆ ವೇಳೆ ಕಟ್ಟಡ ಕುಸಿದಿದೆ. ಮಟನ್ ಅಂಗಡಿ ಕಟ್ಟಡದ ಮುಂಭಾಗದಲ್ಲೇ ಇದ್ದಿದ್ದರಿಂದ ಮಟನ್ ಅಂಗಡಿ ಮಾಲೀಕ ಅಲ್ಲಿಂದ ಓಡಿ ತಪ್ಪಿಸಿ ಕೊಂಡಿದ್ದಾರೆ. ಹೊಟೇಲ್ ಒಳಭಾಗದಲ್ಲಿ ಇದ್ದ ಅದರ ಮಾಲೀಕ ಸಿಬ್ಬಂದಿ ಹಾಗೂ ಊಟಕ್ಕೆ ಬಂದಿದ್ದ ಇಬ್ಬರು ಗ್ರಾಹಕರು ಮನೆಯ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದರು.

ಕಟ್ಟಡ ಕುಸಿದು ಬೀಳುತ್ತಿದ್ದಂತೆ ಸ್ಥಳೀಯರು, ಪೊಲೀಸ್ ಇಲಾಖೆ ಹಾಗೂ ಅಗ್ನಿಶಾಮಕ ದಳ ಕಾರ್ಯಾಚರಣೆ ನಡೆಸಿ ಕಟ್ಟಡದ ಒಳಗೆ ಸಿಲುಕಿದ್ದವರನ್ನು ರಕ್ಷಣೆ ಮಾಡಿದರು. ಎರಡು ದ್ವಿಚಕ್ರ ವಾಹನಗಳು ಕಟ್ಟಡದ ಕೆಳಗೆ ಸಿಲುಕಿ ಜಖಂಗೊಂಡಿವೆ.

ತಿರುಮುರುಗನ್ ಮತ್ತು ಅಲಮೇಲ ಹೊಟೇಲ್‌ನ ಹೊರ ಕೋಣೆಯಲ್ಲಿದ್ದ

ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ನಾಲ್ವರ ರಕ್ಷಣೆ

ಕಾರಣ ಕಾರ್ಯಾಚರಣೆ ನಡೆಸಿ ತಕ್ಷಣ ಹೊರ ತರಲು ಸಾಧ್ಯವಾಯಿತು. ಸುಮಾರು 3 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಲಾಯಿತು. ಗೋಣಿಕೊಪ್ಪ ಠಾಣೆ ಎಸ್‌ಐ ರೂಪಾದೇವಿ ಬಿರಾದರ್ ನೇತೃತ್ವದಲ್ಲಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಜೆಸಿಬಿ ಕ್ರೇನ್ ಬಳಸಿ ಸತತ ಮೂರು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಕಟ್ಟಡದ ಅವಶೇಷಗಳ ಅಡಿ ಸಿಲುಕಿದ್ದವರನ್ನು ರಕ್ಷಿಸಿದರು. ಸ್ಥಳಕ್ಕೆ ಕೊಡಗು ಎಸ್.ಪಿ. ರಾಮರಾಜನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಪಂ ಅಧ್ಯಕ್ಷ ಕುಲ್ಲಚಂಡ ಪ್ರಮೋದ್ ಗಣಪತಿ ಇದ್ದರು. ಮೂರು ಗಂಟೆ ಕಾಲ ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿದ್ದು, ಎಲ್ಲಾ ವಾಹನಗಳೂ ಬೈಪಾಸ್ ರಸ್ತೆ ಮೂಲಕ ಚಲಿಸಿದವು.

ವಿರಾಜಪೇಟೆಯಲ್ಲಿ ಸಿಪಿಐ(ಎಂ) ಪ್ರತಿಭಟನೆ



ವಿರಾಜಪೇಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಖಂಡಿಸಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ವಿರಾಜಪೇಟೆ, ಜೂ.20–ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಖಂಡಿಸಿ ಸಿಪಿಐ (ಎಂ) ಕಾರ್ಯಕರ್ತರು ನಗರದ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ಜಿಲ್ಲಾ ಸಮಿತಿಯ ಎ.ಸಿ. ಸಾಬು ಮಾತನಾಡಿ, ಬಿಜೆಪಿ ಆಡಳಿತದಲ್ಲಿ ದಿನನಿತ್ಯ ಬಳಕೆಯ ಬೆಲೆ ಏರಿಕೆಯಾಗುತ್ತಿತ್ತು. ಆದರೆ, ಅದೇ ಚಾಳಿಯನ್ನು ಕಾಂಗ್ರೆಸ್ ಸರ್ಕಾರವೂ ಮಾಡುತ್ತಿದೆ. ವಿಧಾನಸಭೆ ಚುನಾವಣೆ ಕಾಂಗ್ರೆಸ್ ವೇಳೆ ಜನರಿಗೆ ಮಾತು ಕೊಟ್ಟ ಗ್ಯಾರಂಟಿ ಯೋಜನೆಗಳ ಜಾರಿಗಾಗಿ ಪೆಟ್ರೋಲ್ ಮತ್ತು ಡೀಸಲ್ ಬೆಲೆ ಏರಿಕೆ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಇಂಧನ ದರವನ್ನು ಕೂಡಲೇ ಇಳಿಕೆ ಮಾಡಬೇಕು. ಇನ್ನೂ ಕಾರ್ಮಿಕರಿಗೆ ವೈದ್ಯಕೀಯ ಸವಲತ್ತು ಹಾಗೂ ಅವರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ವಿರಾಜಪೇಟೆ ನಗರ ಕಾರ್ಯದರ್ಶಿ ಶಾಜಿ ರಮೇಶ್, ಮುಖಂಡರಾದ ಕೆ.ಎಸ್.ರತೀಶ್, ಹರಿದಾಸ್, ಹಮೀದ್, ಕೆ.ಎ.ಖಾಲಿದ್, ಖಾಶಿಂ ಮತ್ತಿತರರು ಭಾಗವಹಿಸಿದ್ದರು.

ಟ್ರ್ಯಾಕ್ಟರ್, ಕಾರಿಗೆ ಶಾಲಾ ಬಸ್ ಡಿಕ್ಕಿ



ವಿರಾಜಪೇಟೆ: ಪಟ್ಟಣದ ಗಾಂಧಿ ನಗರದ ಮುಖ್ಯ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಶಾಲಾ ಬಸ್ ಟ್ರ್ಯಾಕ್ಟರ್ ಮತ್ತು ಕಾರಿಗೆ ಡಿಕ್ಕಿ ಹೊಡೆದಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ.

ಇಲ್ಲಿನ ಕೊಡವ ಸಮಾಜ ಬಳಿಯ ತ್ರಿವೇಣಿ ಶಾಲೆಗೆ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದ ಬಸ್ ಚಾಲಕನ ನಿಯಂತ್ರಣ ಕಳೆದುಕೊಂಡು ಗಾಂಧಿ ನಗರದ ಮುಖ್ಯರಸ್ತೆಯಲ್ಲಿ ಟ್ರ್ಯಾಕ್ಟರ್ ಮತ್ತು ಕಾರಿಗೆ ಡಿಕ್ಕಿಯಾಗಿ ಕಾರನ್ನು 50 ಮೀ.ನಷ್ಟು ದೂರ ಎಳೆದು ಕೊಂಡು ಹೋಗಿದೆ. ಇದರಿಂದ ಕಾರು ಜಖಂಗೊಂಡಿದೆ. ನಗರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿದರು.

ಇಂಧನ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ



ಕುಶಾಲನಗರದ ಗಣಪತಿ ದೇವಾಲಯ ಮುಂಭಾಗ ಇಂಧನ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಸೋಮವಾರಪೇಟೆಯ ಪುಟ್ಟಪ್ಪ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸಿ, ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜೂ.20–ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಖಂಡಿಸಿ, ಬಿಜೆಪಿ ಕಾರ್ಯಕರ್ತರು ಸೋಮವಾರಪೇಟೆ, ಕುಶಾಲನಗರದಲ್ಲಿ ಹಾಗೂ ವಿರಾಜಪೇಟೆಯಲ್ಲಿ ಗುರುವಾರ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಸೋಮವಾರಪೇಟೆಯ ಪುಟ್ಟಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿದ ಬಿಜೆಪಿ ಕಾರ್ಯಕರ್ತರು, ರಾಜ್ಯ ಸರ್ಕಾರ ಜನವಿರೋಧಿ ನೀತಿ ಅನುಸರಿಸುತ್ತಿದೆ. ತಕ್ಷಣ ಇಂಧನ ಬೆಲೆ ಇಳಿಸಬೇಕು ಎಂದು ಆಗ್ರಹಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಪೆಟ್ರೋಲ್, ಡೀಸೆಲ್ ದರ ಏರಿಸಿ, ಜನಸಾಮಾನ್ಯರ ಮೇಲೆ ಬರೆ ಎಳೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಲು ಅಸಮರ್ಥವಾಗಿದೆ. ಸರ್ಕಾರಿ ನೌಕರರಿಗೂ ವೇತನ ನೀಡುವುದಕ್ಕೂ ಹಣವಿಲ್ಲದ ಪರಿಸ್ಥಿತಿ ಇದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಿಂದ ಅಗತ್ಯ ವಸ್ತುಗಳ ದರವೂ ದುಬಾರಿಯಾಗಲಿದ್ದು, ಇದರಿಂದ ಜನಸಾಮಾನ್ಯರಿಗೆ ಹೊರೆಯಾಗಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನರ ಹಾದಿ ತಪ್ಪಿಸುವುದಕ್ಕಾಗಿ ನೀಟ್ ಪರೀಕ್ಷೆ ಕುರಿತು ಪ್ರತಿಭಟನೆ ನಡೆಸುವುದಾಗಿ ಕಾಂಗ್ರೆಸ್ ಹೇಳುತ್ತಿದೆ. ಯಾರನ್ನೂ ನಾವು ಸಮರ್ಥಿಸಿಕೊಳ್ಳುವುದಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಆದರೆ, ರಾಜ್ಯ ಸರ್ಕಾರ ಮೊದಲು ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಕೆ ಮಾಡಲಿ ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್, ವಿಧಾನಪರಿಷತ್ ಮಾಜಿ ಸದಸ್ಯ ಎಸ್.ಜಿ.ಮೇದಪ್ಪ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ಸೋಮವಾರಪೇಟೆ ಮಂಡಲ ಅಧ್ಯಕ್ಷ ಗೌತಮ್ ಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಕುಶಾಲನಗರ: ಇಂಧನ ಬೆಲೆ ಏರಿಕೆ ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಕುಶಾಲನಗರದ ಗಣಪತಿ ದೇವಾಲಯ ಮುಂಭಾಗ ಪ್ರತಿಭಟನೆ ನಡೆಸಿದರು.

ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ನಿರಂತರವಾಗಿ ಬೆಲೆ ಏರಿಕೆ ಮಾಡಲಾಗುತ್ತಿದೆ. ಈ ಮೂಲಕ ಜನವಿರೋಧಿ ಸರ್ಕಾರವಾಗಿ ರೂಪುಗೊಂಡಿದೆ. ಗ್ಯಾರಂಟಿ ಹೆಸರಿನಲ್ಲಿ ಜನರಿಂದ ಕಿತ್ತು ಮತ್ತೆ ಜನರಿಗೆ ನೀಡುವ ಮೂಲಕ ಮೋಸ ಮಾಡುತ್ತಿದೆ ಎಂದು ಆರೋಪಿಸಿದರು.

ಕುಶಾಲನಗರ ಬಿಜೆಪಿ ಅಧ್ಯಕ್ಷ ಎಂ.ಎಂ. ಚರಣ್ ಮಾತನಾಡಿ, ಬಿಜೆಪಿ ಸರ್ಕಾರವಿದ್ದಾಗ ಬೆಲೆ ಏರಿಕೆ ವಿರುದ್ಧ ಆರೋಪಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದೀಗ ಸ್ವತಃ ತಾವೇ ಇಂಧನ ಬೆಲೆ ಏರಿಸಿ ಜನಸಾಮಾನ್ಯರು ಪರಿತಪಿಸುವಂತೆ ಮಾಡಿದ್ದಾರೆ. ಕೂಡಲೇ ಬೆಲೆ ಏರಿಕೆಗೆ ಕಡಿವಾಣ ಹಾಕಿ ಸಮರ್ಪಕವಾಗಿ ವಿದ್ಯುತ್ ಪೂರೈಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಆರ್.ಕೆ.ಚಂದ್ರ, ಪ್ರಧಾನ ಕಾರ್ಯದರ್ಶಿ ಅಮೃತ್ ರಾಜ್, ನಗರ ಪ್ರಧಾನ ಕಾರ್ಯದರ್ಶಿ ಮಧುಸೂದನ್, ಯುವ ಮೋರ್ಚಾ ಅಧ್ಯಕ್ಷ ರಾಮನಾಥನ್, ಪ್ರಧಾನ ಕಾರ್ಯದರ್ಶಿ ಸಚಿನ್, ಪುರಸಭೆ ಸದಸ್ಯ ಜೈವರ್ಧನ್, ಬಿಜೆಪಿ ಮಂಡಲಾಧ್ಯಕ್ಷ ಗೌತಮ್, ಮುಖಂಡರಾದ ಕೃಷ್ಣಪ್ಪ, ಪುಂಡರೀಕಾಕ್ಷ, ಗಣಿಪ್ರಸಾದ್, ಪ್ರವೀಣ್, ಚಂದ್ರಶೇಖರ್ ಹೇರೂರು, ಜಿ.ಎಲ್.ನಾಗರಾಜ್, ಸೋಮಶೇಖರ್ ಮಹಿಳಾ ಘಟಕದ ಸರಳ ರಾಮಣ್ಣ, ಅನಿತಾ ಉತ್ತಪ್ಪ, ಗಂಗಮ್ಮ, ಶೋಭಾ, ಗೀತಾಂಜಲಿ ಮತ್ತಿತರರು ಭಾಗವಹಿಸಿದ್ದರು.

ಜೂ.25, ಜನಸಂಪರ್ಕ ಸಭೆ

ಮಡಿಕೇರಿ: ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಣೆ ಸಭೆ ಜೂ.25ರಂದು ಬೆಳಗ್ಗೆ 11.30ಕ್ಕೆ ಸೆಸ್ಕ್‌ನ ಮಡಿಕೇರಿ ಉಪ ವಿಭಾಗ ಕಚೇರಿಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಗ್ರಾಹಕರ ವಿದ್ಯುತ್ ಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆ ಅಥವಾ ದೂರುಗಳು ಇದ್ದಲ್ಲಿ ಈ ಸಭೆಯಲ್ಲಿ ತಿಳಿಸಿ, ಬಗೆಹರಿಸಿಕೊಳ್ಳಲಾಗುವುದು.

ಗಿಡ ನೆಟ್ಟು ಪರಿಸರ ದಿನಾಚರಣೆ....



ಯಳಂದೂರು ತಾಲೂಕಿನ ಹೊನ್ನೂರು ಬೀಚಹಳ್ಳಿ ಗ್ರಾಮದಲ್ಲಿ ಉಪ್ಪಾರ ಸೇನಾ ಸಮಿತಿ ವತಿಯಿಂದ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು. ಸಮಿತಿಯ ಪ್ರಸಾದ್, ಗ್ರಾಮದ ಯಜಮಾನರಾದ ಗಣೇಶ್ ಶೆಟ್ಟಿ, ಜವರಶೆಟ್ಟಿ, ಸೋಮ, ನಂಜುಂಡಸ್ವಾಮಿ ಇದ್ದರು.

ಓವರ್‌ಟೇಕ್: ಎರಡು ವಾಹನಗಳಿಗೆ ಡಿಕ್ಕಿ

ಬೇಗೂರು: ಕಾರಿನ ಚಾಲಕ ಓವರ್‌ಟೇಕ್ ಮಾಡುವ ಭರದಲ್ಲಿ ಪೊಲೀಸರ ಹೈವೇ ಗಸ್ತು ವಾಹನ ಸೇರಿದಂತೆ ಎರಡು ವಾಹನಗಳಿಗೆ ಡಿಕ್ಕಿ ಹೊಡೆದ ಘಟನೆ ಗುಂಡ್ಲುಪೇಟೆ ತಾಲೂಕಿನ ಹಳ್ಳದಮಾದಹಳ್ಳಿ ಗೇಟ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.



ಕೇರಳ ಮೂಲದ ವ್ಯಕ್ತಿ ಕಾರಿನಲ್ಲಿ ವಾಹನಗಳನ್ನು ಓವರ್‌ಟೇಕ್ ಮಾಡುವ ವೇಳೆ ಏಕಾಏಕಿ ಎಡಕ್ಕೆ ತಿರುಗಿಸಿದಾಗ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದು, ತಿರುಗಿ ಹಿಂದೆ ಬರುತ್ತಿದ್ದ ಪೊಲೀಸ್ ಗಸ್ತು ವಾಹನಕ್ಕೂ ಡಿಕ್ಕಿ ಹೊಡೆದಿದ್ದಾನೆ.

ಅದೃಷ್ಟವಶಾತ್ ಅಪಘಾತದಲ್ಲಿ ಯಾರಿಗೂ ಯಾವುದೇ ಅಪಾಯ ಸಂಭವಿಸಿಲ್ಲ. ಆದರೆ, ಮೂರು ವಾಹನಗಳು ಜಖಂ ಆಗಿವೆ.

ಗುಂಡ್ಲುಪೇಟೆಯಲ್ಲಿ ನಂದಿನಿ ಕೆಫೆಮೂ ಉದ್ಘಾಟನೆ



ಗುಂಡ್ಲುಪೇಟೆಯಲ್ಲಿ ಕೆಫೆಮೂ ಕೇಂದ್ರವನ್ನು ಸಚಿವ ವೆಂಕಟೇಶ್ ಉದ್ಘಾಟಿಸಿದರು. ಶಾಸಕ ಗಣೇಶಪ್ರಸಾದ್, ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಇದ್ದರು.

ಗುಂಡ್ಲುಪೇಟೆ: ನಂದಿನಿಯ ಗುಣಮಟ್ಟದ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲು ಹಾಲು ಒಕ್ಕೂಟ ಪಟ್ಟಣದಲ್ಲಿ ನಂದಿನಿ ಕೆಫೆಮೂ ಆರಂಭಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ಪಟ್ಟಣದಲ್ಲಿ ಕೆಎಂಎಫ್ ಮತ್ತು ಚಾಮುಲ್ ವತಿಯಿಂದ ಆರಂಭಿಸಿದ ಕೆಫೆಮೂ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ ಹಾಗೂ ಕರ್ನಾಟಕ ಮಿಲ್ಕ್ ಫೆಡರೇಶನ್ ವತಿಯಿಂದ ಗುಂಡ್ಲುಪೇಟೆಯಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವಂತೆ ನಂದಿನಿ ಕೆಫೆಮೂ ಸ್ಥಾಪಿತವಾಗಿದೆ. ಉತ್ತಮ ದರ್ಜೆಯ ಹಾಲಿನ ಉತ್ಪನ್ನ ಹಾಗೂ ತಿಂಡಿ ತಿನಿಸುಗಳು ಮಾರಾಟ ಮಾಡಲಾಗುವುದು ಎಂದರು.

ಇದೇ ವೇಳೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಸಂಸದ ಸುನೀಲ್ ಬೋಸ್, ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್, ಚಾಮುಲ್ ಅಧ್ಯಕ್ಷ ನಾಗೇಂದ್ರ, ನಿರ್ದೇಶಕರಾದ ಹೆಚ್.ಎಸ್.ನಂಜುಂಡಪ್ರಸಾದ್, ಎಂ.ಪಿ.ಸುನೀಲ್, ಡಾ.ಚಂದ್ರಚೂಡ, ರಾಜ್ಯ ಹಾಲು ಮಹಾಮಂಡಲ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಹಲವರು ಇದ್ದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ವಿಶೇಷ ಕಾಳಜಿಯಿಂದ ಕಾರಾಗೃಹದಲ್ಲೇ

ಕೈದಿಗಳಿಗೆ ಕಂಪ್ಯೂಟರ್ ತರಬೇತಿ

> “ಸಮಾಜದಲ್ಲಿ ಯಾರೂ ಮೇಲು, ಕೀಳು ಅಲ್ಲ. ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ಲಭಿಸಬೇಕು. ಕೈದಿಗಳು ಇಲ್ಲಿಂದ ಬಿಡುಗಡೆಗೊಂಡ ಬಳಿಕ ಆತ್ಮವಿಶ್ವಾಸದಿಂದ ಉತ್ತಮ ಜೀವನ ಮಾಡಬೇಕು. ಕುಟುಂಬ, ಸಮಾಜಕ್ಕೆ ಆದರ್ಶಪ್ರಾಯವಾಗಿ ಕೊಡುಗೆ ನೀಡಬೇಕು. ಜೀವನೋಪಾಯಕ್ಕೆ ಪೂರಕವಾದ ಸ್ವಂತ ಉದ್ಯೋಗ ಮಾಡಬೇಕು ಎಂಬ ಸದಾಶಯ ನನ್ನದಾಗಿದೆ. ತರಬೇತಿ ಪಡೆದವರು ಸ್ವಂತ ಸೈಬರ್, ಸೇವಾ ಕೇಂದ್ರಗಳನ್ನು ತೆರೆದು ಇತರರಿಗೆ ಮಾದರಿಯಾಗಬಹುದು.
> –ಶಿಲ್ಪನಾಗ್, ಜಿಲ್ಲಾಧಿಕಾರಿ



ಚಾಮರಾಜನಗರ ಜಿಲ್ಲಾ ಕಾರಾಗೃಹ ಕೈದಿಗಳಿಗೆ ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ವಿತರಿಸಿದರು.

ಚಾಮರಾಜನಗರ, ಜೂ.20–ಜಿಲ್ಲಾಧಿಕಾರಿ ಶಿಲ್ಪನಾಗ್ ಅವರ ವಿಶೇಷ ಕಾಳಜಿಯಿಂದ ಜಿಲ್ಲಾ ಕಾರಾಗೃಹದ ಕೈದಿಗಳಿಗೆ ಕಂಪ್ಯೂಟರ್ ಶಿಕ್ಷಣದ ತರಬೇತಿ ನೀಡಿರುವುದು ರಾಜ್ಯದಲ್ಲೇ ವಿನೂತನ ಕಾರ್ಯಕ್ರಮ ಯಶಸ್ಸು ಕಂಡಿದೆ.

ಜಿಲ್ಲಾ ಕಾರಾಗೃಹದ ಕೈದಿಗಳು ಬಿಡುಗಡೆಗೊಂಡ ಬಳಿಕ ಅವರು ಬದುಕು ಕಟ್ಟಿಕೊಳ್ಳಲು ನೆರವಾಗಲಿ ಎಂಬ ಉದ್ದೇಶದಿಂದ ಕಂಪ್ಯೂಟರ್ ತರಬೇತಿ ನೀಡಲು ಯೋಚಿಸಿ, ಮೈಸೂರಿನ ಇನ್‌ಫೋಸಿಸ್, ರೋಟರಿ, ಪಂಚಶೀಲ ಸಂಸ್ಥೆಗಳೊಂದಿಗೆ ಸಿಎಸ್‌ಆರ್ ನೆರವಿನೊಂದಿಗೆ ಕಾರಾಗೃಹದಲ್ಲೇ ಕಂಪ್ಯೂಟರ್ ತರಬೇತಿಗೆ ಹಿಂದೆ ಶಿಲ್ಪನಾಗ್ ಚಾಲನೆ ನೀಡಿದ್ದರು.

ಕಾರಾಗೃಹದ ಸುಸಜ್ಜಿತ ಕೊಠಡಿಯಲ್ಲಿ 10 ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳೊಂದಿಗೆ ತರಬೇತಿ ಆರಂಭಿಸಲಾಗಿತ್ತು. ತರಬೇತಿಗೆ 38 ಕೈದಿಗಳು ನೋಂದಣಿಯಾಗಿದ್ದರು. ಇವರಲ್ಲಿ 7 ಕೈದಿಗಳು ಕಾರಾಗೃಹದಲ್ಲೇ ಕಂಪ್ಯೂಟರ್‌ನ ವಿವಿಧ ಕೋರ್ಸ್‌ಗಳನ್ನು ಪಡೆದು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇವರಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಗುರುವಾರ ಪ್ರಮಾಣ ಪತ್ರ ವಿತರಿಸಿದರು. ಈ ಮೂಲಕ ಚಾಮರಾಜನಗರ ಜಿಲ್ಲೆ ಸಾರ್ಥಕತೆ ಕಾರ್ಯ ಕೈಗೊಂಡು ರಾಜ್ಯದಲ್ಲೇ ವಿಶಿಷ್ಟ ಹೆಗ್ಗಳಿಕೆಗೆ ಪಾತ್ರವಾಗಿದೆ.

ಕಂಪ್ಯೂಟರ್ ತರಬೇತಿ ನೀಡಲು ಐಐಎಚ್‌ಟಿ ಟೆಕಾಡಮಿ ಬೋಧಕರನ್ನ ನಿಯೋಜಿಸಲಾಗಿತ್ತು. ಮೈಕ್ರೋಸಾಫ್ಟ್ ಆಫೀಸ್, ಕಂಪ್ಯೂಟರ್ ಫಂಡಮೆಂಟಲ್, ಸಾಫ್ಟ್‌ಸ್ಕಿಲ್ ಸೇರಿದಂತೆ ವಿವಿಧ ತರಬೇತಿ ನೀಡಲಾಗಿದೆ. ಮೊದಲನೇ ತಂಡದಲ್ಲಿ 38 ಕೈದಿಗಳು ಕಂಪ್ಯೂಟರ್ ಕೋರ್ಸ್ ಕಲಿಯಲು ಆರಂಭಿಸಿದ್ದರು. ಇವರಲ್ಲಿ 7 ಮಂದಿ ಯಶಸ್ವಿಯಾಗಿ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ್ದಾರೆ.

ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಜಿಲ್ಲಾ ಕಾರಾಗೃಹ ಅಧೀಕ್ಷಕ ಎನ್.ಎಸ್.ಶಿವಕುಮಾರ್, ಇನ್‌ಫೋಸಿಸ್ ಸಂಸ್ಥೆಯ ಪ್ರೋಗ್ರಾಂ ವ್ಯವಸ್ಥಾಪಕ ಬಿಳಿಗಿರಿರಂಗ, ಐಐಎಚ್‌ಟಿ ಸಂಸ್ಥೆಯ ಬೋಧಕ ವರ್ಗದ ಮುಖ್ಯಸ್ಥ ಶಿವಪ್ರಸಾದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ್ ಉಪಸ್ಥಿತರಿದ್ದರು.

ನರೇಗಾ ಯೋಜನೆಯಡಿ 100 ದಿನ ಕೆಲಸ ನೀಡಿ



ಹನೂರಿನ ಅಂಬೇಡ್ಕರ್ ಭವನದಲ್ಲಿ ನಡೆದ ಸಭೆಯಲ್ಲಿ ಶಾಸಕ ಎಂ.ಆರ್.ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಹನೂರು: ನರೇಗಾ ಯೋಜನೆಯಡಿ ಕಡ್ಡಾಯವಾಗಿ 100 ದಿನ ಕೆಲಸ ನೀಡಬೇಕು ಎಂದು ಗ್ರಾಪಂ ಅಧಿಕಾರಿಗಳಿಗೆ ಶಾಸಕ ಎಂ.ಆರ್.ಮಂಜುನಾಥ್ ಸೂಚಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಗ್ರಾಪಂಗಳ ಪ್ರಗತಿ ಪರಿಶೀಲನೆ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ ಬೈಲೂರು ಗ್ರಾಪಂ ವ್ಯಾಪ್ತಿಯಲ್ಲಿ ಸೋಲಿಗ ಸಮುದಾಯದವರಿಗೆ ನರೇಗಾ ಯೋಜನೆಯಡಿ ಕೂಲಿ ಕೆಲಸ ನೀಡಬೇಕು. ಕಾಡಂಚಿನ ಭಾಗದಲ್ಲಿ ಬೇರೆಡೆ ಕೆಲಸಗಳಿಗೆ ತೆರಳುವ ಜನರಿಗೆ ಸರ್ಕಾರದ ಮಹತ್ವ ಯೋಜನೆ ನರೇಗಾದಲ್ಲೂ ಕೂಲಿ ನೀಡಿ, ವಲಸೆ ಹೋಗುವುದನ್ನು ತಪ್ಪಿಸಬೇಕು. ಕೆರೆ ಅಭಿವೃದ್ಧಿಗೊಳಿಸಲು ನರೇಗಾ ಯೋಜನೆಯಡಿ ಹೆಚ್ಚಿನ ಜಾಬ್‌ಕಾರ್ಡ್ ನೀಡಬೇಕು ಎಂದು ತಿಳಿಸಿದರು.

ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಕೆರೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಅಮೃತ ಸರೋವರ, ಶಾಲಾ ಆಟದ ಮೈದಾನ ಅಭಿವೃದ್ಧಿಗೆ ನರೇಗಾದಲ್ಲಿ ಅವಕಾಶವಿದೆ. ಮಕ್ಕಳಿಗೆ ಅನುಕೂಲವಾಗುವಂತೆ ವಾಲಿಬಾಲ್, ಖೋ–ಖೋ ಸೇರಿದಂತೆ ಆಟದ ಮೈದಾನಗಳನ್ನು ನಿರ್ಮಿಸಬೇಕು. ಗ್ರಾಮಸಭೆಗಳಲ್ಲಿ ಉಳ್ಳವರಿಗೆ ಸೌಲಭ್ಯ ನೀಡಲಾಗುತ್ತಿದೆ. ಎಲ್ಲರಿಗೂ ಸೌಲಭ್ಯ ನೀಡಬೇಕು ಎಂದರು.

ಕೆಲವೆಡೆ ಗ್ರಾಮ ಪಂಚಾಯಿತಿ ಕಟ್ಟಡಗಳ ಟೆಂಡರ್ ನರೇಗಾ ಎನ್‌ಎಂಆರ್ ಮೆಟಿರಿಯಲ್, ಅಂಗನವಾಡಿ ಕಟ್ಟಡ ದುರಸ್ತಿ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. 252 ಅಪೂರ್ಣವಾಗಿದ್ದು, ಶಿಥಿಲಗೊಂಡಿರುವ ಅಂಗನವಾಡಿ ಕೇಂದ್ರಗಳ ಬಗ್ಗೆ ಗಮನಹರಿಸಬೇಕು. ಹೂಗ್ಯ ಗ್ರಾಪಂನಲ್ಲಿ ನರೇಗಾ ಯೋಜನೆಯಲ್ಲಿ ಕೆಲಸ ನೀಡುತ್ತಿಲ್ಲ ಎಂದು ಜಾಬ್‌ಕಾರ್ಡ್ ಪಡೆದ ಮಹಿಳೆಯರು ಅಸಮಾಧಾನ ಹೊರಹಾಕಿದ್ದಾರೆ. ಆದಷ್ಟು ಬೇಗ ಇವರಿಗೆ ಕೆಲಸ ನೀಡಬೇಕು ಎಂದು ತಾಕೀತು ಮಾಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ವಿವಿಧ ಇಲಾಖೆ ಅಧಿಕಾರಿಗಳಿಂದ ಕಾಮಗಾರಿಗಳ ಮಾಹಿತಿ ಪಡೆದರು. ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು. ಇದೇ ವೇಳೆ ತಾಲೂಕಿನ 25 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕ್ರಿಯಾ ಯೋಜನೆ ತಯಾರು ಸಂಬಂಧ, ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯ ಅಂಕಿ ಅಂಶಗಳ ಮಾಹಿತಿ ಪಡೆದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಆನಂದ್ ಮೀನಾ, ಎಸಿಎಫ್ ಚಂದ್ರಶೇಖರ್ ಪಾಟೀಲ್, ತಾಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ವ್ಯಕ್ತಿ ನೇಣು ಹಾಕಿಕೊಂಡು ಆತ್ಮಹತ್ಯೆ

ಬೇಗೂರು, ಜೂ.20–ಮರಕ್ಕೆ ನೇಣು ಹಾಕಿಕೊಂಡು ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಮಾದಪಟ್ಟಣ ಗೇಟ್ ಬಳಿಯ ಜಮೀನಿನೊಂದರಲ್ಲಿ ಗುರುವಾರ ನಡೆದಿದೆ.

ತಾಲೂಕಿನ ರಾಘವಾಪುರ ಗ್ರಾಮದ ಶಿವಣ್ಣ(36) ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ಕುಡಿತದ ಚಟದಿಂದ ಮಾನಸಿಕ ರೋಗಿಯಾಗಿದ್ದ ಎಂದು ಹೇಳಲಾಗುತ್ತಿದೆ. ಆದರೆ, ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ.

ಬೇಗೂರು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಶವ ಹಸ್ತಾಂತರಿಸಿದರು. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್ ಡಿಕ್ಕಿ: ಇಬ್ಬರು ಮಹಿಳೆಯರಿಗೆ ಗಾಯ

ಕೊಳ್ಳೇಗಾಲ: ವೇಗವಾಗಿ ಬಂದ ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಹಿಳೆಯರು ಗಾಯಗೊಂಡಿರುವ ಘಟನೆ ಗುರುವಾರ ನಡೆದಿದೆ.

ಪಟ್ಟಣದ ಬಾಪುನಗರದ ದೊಡ್ಡಮ್ಮ (70) ಮತ್ತು ಪುಟ್ಟಮ್ಮ(50) ಗಾಯಗೊಂಡಿದ್ದು, ಪಟ್ಟಣದ ಸರ್ಕಾರಿ ಉಪ ವಿಭಾಗೀಯ ಆಸ್ಪತ್ರೆಗೆ ದಾಖಲಾಗಿದ್ದಾರೆ.


ಸ್ಕೂಟರ್‌ನಲ್ಲಿ ವೇಗವಾಗಿ ಬಂದ ಮಾಂಬಳ್ಳಿ ಗ್ರಾಮದ ವರ್ಷಿತಾ ಈ ಇಬ್ಬರಿಗೂ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಪುಟ್ಟಮ್ಮ ಮತ್ತು ದೊಡ್ಡಮ್ಮಗೆ ಬೆನ್ನು, ಕಾಲಿಗೆ ತೀವ್ರ ಪೆಟ್ಟು ಬಿದ್ದಿದೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಳ್ಳೇಗಾಲದಲ್ಲಿ ಬಿಜೆಪಿ ಪ್ರತಿಭಟನೆ....



ರಾಜ್ಯ ಸರ್ಕಾರ ಏರಿಕೆ ಮಾಡಿರುವ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಇಳಿಕೆ ಮಾಡಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಕೊಳ್ಳೇಗಾಲದ ದೇವರ ದಾಸಿಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಬಿಜೆಪಿ ವಕ್ತಾರ ಬಸವರಾಜಪ್ಪ, ಎಸ್ಸಿ ಮೋರ್ಚಾ ನಗರ ಮಂಡಲಾಧ್ಯಕ್ಷ ಸಿದ್ದಪ್ಪಾಜಿ, ಯುವ ಮೋರ್ಚಾ ಅಧ್ಯಕ್ಷ ಆನಂದ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸುಶೀಲಾ ಶಾಂತರಾಜು, ಜಿಲ್ಲಾ ಕಾರ್ಯದರ್ಶಿ ಬೂದಿತಿಟ್ಟು ಶಿವಕುಮಾರ್, ಎಸ್ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ರಾಜಶೇಖರ್, ನಗರಸಭೆ ಸದಸ್ಯರಾದ ಪ್ರಕಾಶ್, ಸಿರಿಶಾ ಸತೀಶ್, ಬೆಂಡರಹಳ್ಳಿ ಮಹೇಶ್, ಉತ್ತಮ್, ಶಿವಕುಮಾರ್, ಕಿರಣ್, ಸೋಮಣ್ಣ ಉಪ್ಪಾರ್, ರಾಜೇಶ್, ನಿರಂಜನ್, ಮಮತಾ ಬದ್ರೀನಾಥ್, ಸುರೇಶ್, ತೇರಂಬಳ್ಳಿ ರವಿ ಇದ್ದರು.

■ ಸತ್ಯಮೂರ್ತಿ ತೋಳಹುಣಸೆ



ಹಳ್ಳಿಗಳ ಹುಡುಗರೆಲ್ಲ ಓದಿ, ಉದ್ಯೋಗಕ್ಕೆಂದು ಪಟ್ಟಣಕ್ಕೆ ಹೋಗಿ ಅಲ್ಲೇ ನೆಲೆಸುತ್ತಾರೆ. ಇದರಿಂದ ಮುಂದಿನ ತಲೆಮಾರಿನಲ್ಲಿ ಹಳ್ಳಿಗಳು ಅವನತಿಯತ್ತ ಹೋಗಲಿವೆ, ಹೀಗಾದರೆ ನಮ್ಮ ಹಳ್ಳಿಗಳು, ಆ ಪರಿಸರ ಉಳಿಯುವುದು ಹೇಗೆ, ವಿದ್ಯಾವಂತರಾದವರು ಹಳ್ಳಿಗಳಲ್ಲೇ ನೆಲೆಸಿ ಪ್ರಗತಿ ಸಾಧಿಸಬೇಕು ಎಂಬ ವಿಷಯವನ್ನಿಟ್ಟುಕೊಂಡು ಸಂಭವಾಮಿ ಯುಗೇ ಯುಗೇ ಚಿತ್ರವನ್ನು ಶ್ರೀಮತಿ ಪ್ರತಿಭಾ ಅವರು ನಿರ್ಮಿಸಿದ್ದು, ಚೇತನ್ ಚಂದ್ರಶೇಖರ್ ಶೆಟ್ಟಿ ಕಥೆ, ಚಿತ್ರಕಥೆ, ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರ ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಇದೊಂದು ಗ್ರಾಮೀಣ ಸೊಗಡಿನಲ್ಲಿ ನಡೆಯುವ ಕಮರ್ಷಿಯಲ್, ಥ್ರಿಲ್ಲರ್ ಚಿತ್ರವಾಗಿದ್ದು, ಮಂಡ್ಯ, ಚನ್ನಪಟ್ಟಣ, ರಾಮನಗರ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ. ಈ ಹಿಂದೆ 1975 ಎಂಬ ಚಿತ್ರದಲ್ಲಿ ನಟಿಸಿದ್ದ ಜಯ್ ಶೆಟ್ಟಿ, ಚಿತ್ರದ ನಾಯಕನಾಗಿದ್ದು, ಬಿಜಾಪುರ ಮೂಲದ ನಿಶಾ ರಜಪೂತ್ ನಾಯಕಿಯಾಗಿ ಅಭಿನಯಿಸಿದ್ದಾರೆ.

ತಾನು ಹಳ್ಳಿಯಲ್ಲೇ ನೆಲೆಸಿ, ಹಳ್ಳಿಯಲ್ಲಿ ಒಂದಿಷ್ಟು ಕೆಲಸ ಮಾಡಬೇಕು ಎಂದು ನಾಯಕ ಮುಂದಾಗುತ್ತಾನೆ. ಈ ನಿಟ್ಟಿನಲ್ಲಿ ಅವನು ಏನೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಾನೆ ಎನ್ನುವುದು ಚಿತ್ರದ ಕಥೆ ಎನ್ನುತ್ತಾರೆ ನಿರ್ದೇಶಕ ಚೇತನ್ ಚಂದ್ರಶೇಖರ್ ಶೆಟ್ಟಿ.

ಚಿತ್ರದ ಕುರಿತು ಮಾತನಾಡುವ ನಾಯಕ ನಟ ಜಯ್ ಶೆಟ್ಟಿ, ಇದು ಕೃಷಿಯ ಮಹತ್ವ ಮತ್ತು ರೈತರ ಸಮಸ್ಯೆಗಳ ಕುರಿತಂತೆ ಮಾಡಿರುವ ಚಿತ್ರ ತನಗೆ ಆಶ್ರಯ ಕೊಟ್ಟ ಊರಿಗೆ ಏನಾದರೂ ಮಾಡಬೇಕು ಎಂದು ನಾಯಕ ಮುಂದಾಗಿ ಪಂಚಾಯ್ತಿ ಅಧ್ಯಕ್ಷನಾಗುತ್ತಾನೆ. ಮುಂದೆ ನಡೆಯೋ ಕಥೆಯಲ್ಲಿ ಹಲವಾರು ಟ್ವಿಸ್ಟ್‌ಗಳಿವೆ ಎನ್ನುತ್ತಾರೆ. ಸಂಭವಾಮಿ ಯುಗೇಯುಗೇ



ಚಿತ್ರದಲ್ಲಿ ಪ್ರಮೋದ್ ಶೆಟ್ಟಿ, ಸುಧಾರಾಣಿ, ಭವ್ಯ, ಅಶೋಕ್‌ಕುಮಾರ್, ಮಧುರಗೌಡ, ಅಭಯ್ ಪುನೀತ್, ಬಲರಾಜವಾಡಿ, ಅಶ್ವಿನ್ ಹಾಸನ್ ಮುಂತಾದವರು ಅಭಿನಯಿಸಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಪೂರಣ್ ಶೆಟ್ಟಿಗಾರ್ ಸಂಗೀತ ಸಂಯೋಜಿಸಿದ್ದಾರೆ. ಪ್ರಾಂಕ್ರಿನ್ ರಾಖಿ ಅವರ ಹಿನ್ನೆಲೆ ಸಂಗೀತ, ರಾಜು ಹೆಮ್ಮಿಗೆಪುರ ಅವರ ಛಾಯಾಗ್ರಹಣ, ನರಸಿಂಹ ಅವರ ಸಾಹಸ ನಿರ್ದೇಶನ, ಗೀತಾ ಮಾಸ್ಟರ್ ಅವರ ನೃತ್ಯನಿರ್ದೇಶನ ಈ ಚಿತ್ರಕ್ಕಿದೆ.

ಈ ವಾರ ತೆರೆಗೆ



ಸದ್ಯದಲ್ಲೇ ತೆರೆಗೆ ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಕಥೆ

'ನಾಡಸಿಂಹ ಕೆಂಪೇಗೌಡ'



ನಿರ್ಮಾಪಕ ಹಾಗೂ ಸಮಾಜಸೇವಕ ಹೆಚ್.ಎಂ. ಕೃಷ್ಣಮೂರ್ತಿ ಅವರ ನಿರ್ಮಾಣದ 'ನಾಡಸಿಂಹ ಕೆಂಪೇಗೌಡ' ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಜೆ.ಕೆ. ಶರ್ಮ ಗುರೂಜಿ, ನಟರಾದ ವಸಿಷ್ಠಸಿಂಹ, ಅಶೋಕ್, ಧರ್ಮ, ತಬಲಾ ನಾಣಿ, ನೀನಾಸಂ ಅಶ್ವಥ್, ನಿರ್ಮಾಪಕ ಸಂಜಯ್‌ಗೌಡ, ನಿರ್ದೇಶಕ ಟಿ.ಎಸ್.ನಾಗಾಭರಣ, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಈ ಹಾಡನ್ನು ಬಿಡುಗಡೆ ಮಾಡಿದರು.

ಈ ಹಾಡಿನ ಕುರಿತಂತೆ ಮಾತನಾಡಿದ ನಿರ್ಮಾಪಕ ಹೆಚ್.ಎಂ. ಕೃಷ್ಣಮೂರ್ತಿ, ಈ ಹಾಡಲ್ಲಿ ನಾನೇ ಕೆಂಪೇಗೌಡರ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಅಲ್ಲದೆ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಕುರಿತು ಸದ್ಯದಲ್ಲೇ ಸಿನಿಮಾ ಮಾಡುವ ಪ್ಲಾನ್ ಕೂಡ ಇದೆ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಊರುಗಳ ಅಭಿವೃದ್ಧಿಯಲ್ಲಿ ಮಾಗಡಿ ಕೆಂಪೇಗೌಡರ ಪಾತ್ರ ದೊಡ್ಡದು. ಅವರು ಮಾಡಿದ ಕೆಲಸಗಳು ಇಂದಿಗೂ ಜನರ ಮನದಲ್ಲಿವೆ, ಅಂತಹ ಪುಣ್ಯಾತ್ಮರ ಸ್ಮರಣೆಗಾಗಿ ನಾನು ಈ ಹಾಡನ್ನು ನಿರ್ಮಿಸಿದ್ದೇನೆ. ಇದೇ ಮೊದಲ ಬಾರಿಗೆ ಕೆಂಪೇಗೌಡರ ಪಾತ್ರದಲ್ಲೂ ಸಹ ಕಾಣಿಸಿಕೊಂಡಿದ್ದೇನೆ. ಕೆಂಪೇಗೌಡರ ಮಹತ್ಕಾರ್ಯಗಳ ಬಗ್ಗೆ ತಿಳಿಸುವ ಈ ಹಾಡನ್ನು ಚಿತ್ರದಲ್ಲಿ ಬಳಸಿಕೊಳ್ಳುತ್ತೇವೆ. ಕೆ.ರಾಮನಾರಾಯಣ್ ಸಾಹಿತ್ಯ ಬರೆದಿರುವ ಈ ಹಾಡಿಗೆ ಶ್ರೀಧರ್ ವಿ.ಸಂಭ್ರಮ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಶಂಕರ್ ಮಹಾದೇವನ್ ಮತ್ತು ಅನುರಾಧಾ ಭಟ್ ದನಿಯಾಗಿದ್ದಾರೆ. ಭಜರಂಗಿ ಮೋಹನ್‌ರ ನೃತ್ಯ ನಿರ್ದೇಶನ, ಕೃಷ್ಣಕುಮಾರ್ ಅವರ ಛಾಯಾಗ್ರಹಣ ಈ ಹಾಡಿಗಿದೆ. ಕಲಾವಿದರಾದ ಧರ್ಮ, ನೀನಾಸಂ ಅಶ್ವಥ್, ವಿನಯಪ್ರಸಾದ್, ಮುನಿ ಅಲ್ಲದೆ ಹಿರಿಯ ನಿರ್ದೇಶಕರಾದ ಟಿ.ಎಸ್. ನಾಗಾಭರಣ, ಹೆಚ್.ವಾಸು, ವಿಕ್ಟರಿ ವಾಸು ಇವರೆಲ್ಲ ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ಕೆಂಪೇಗೌಡರು ಸ್ಥಾಪಿಸಿದ ಮಾಗಡಿ ಬೆಂಗಳೂರಿನ ಆಸುಪಾಸಿನಲ್ಲಿದೆ. ಅದನ್ನು ಈ ಹಾಡಿನ ಮೂಲಕ ಪರಿಚಯ ಮಾಡಿಕೊಡುತ್ತಿದ್ದೇನೆ ಎಂದರು.

'ನಸಾಬ್' ತಂದೆಯ ಜೀವನ ಕಥೆಗೆ ಮಗನೇ ನಾಯಕ

ನೈಜ ಕಥೆಯನ್ನಿಟ್ಟುಕೊಂಡು ಸಿನಿಮಾ ಮಾಡೋದು ಕಷ್ಟ, ಅದರಲ್ಲೂ ನಮ್ಮ ಕಣ್ಣೆದುರೇ ಇರುವ ವ್ಯಕ್ತಿಯೊಬ್ಬರ ಜೀವನ, ಸಾಧನೆಗಳ ಬಗ್ಗೆ ಹೇಳುವ ಚಿತ್ರ ಈವರೆಗೆ ಬಂದಿಲ್ಲ. ಇದೀಗ ಅಂಥದ್ದೊಂದು ಚಿತ್ರ ತೆರೆಗೆ ಬರುತ್ತಿದೆ. ಅದರ ಹೆಸರು ನಸಾಬ್. ಕಿಶೋರ್‌ಕುಮಾರ್ ನಾಯ್ಕ್ ಅವರ ಜೀವನಕಥೆ ಆಧರಿಸಿ ಮಾಡಿದ ಚಿತ್ರ. 'ನಸಾಬ್' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಬಂಜಾರ ಪೀಠದ ಕುಮಾರ ಮಹಾರಾಜರು, ಮಾಜಿ ಉಪಸಭಾಪತಿ ರುದ್ರಪ್ಪ ಎಂ.ಲಮಾಣಿ, ಐಎಎಸ್ ಅಧಿಕಾರಿ ಜಗದೀಶ್, ಮಾಜಿ ಶಾಸಕ ಪಿ.ರಾಜೀವ್ ಇತರರು ಅತಿಥಿಗಳಾಗಿ ಭಾಗವಹಿಸಿದ್ದರು.

ಕಥೆಗಾರ ಕಿಶೋರ್‌ಕುಮಾರ್ ನಾಯ್ಕ್ ಮಾತನಾಡಿ, ಇದು ನನ್ನ ಜೀವನದ ಹೋರಾಟದ ಕಥೆ. ನಮ್ಮ ತಂದೆಗೆ ಹದಿನಾಲ್ಕು ಜನ ಮಕ್ಕಳು. ಅವರಲ್ಲಿ ನಾನೂ ಒಬ್ಬ, ಬಡ ಕುಟುಂಬದಲ್ಲಿ ಹುಟ್ಟಿದ ಬಂಜಾರ ಸಮುದಾಯದ ಹುಡುಗನೊಬ್ಬ ಹೇಗೆ ವಿದ್ಯಾವಂತನಾಗಿ ಉನ್ನತ ಹುದ್ದೆಯನ್ನು ಅಲಂಕರಿಸುತ್ತಾನೆ ಎಂಬ ಕಥೆಯೇ ಈಗ ದೃಶ್ಯರೂಪದಲ್ಲಿದೆ. ನನ್ನ ಜೀವನದ ಕಥೆಯನ್ನು ನಸಾಬ್ ಪುಸ್ತಕದಲ್ಲಿ ಬರೆದಿದ್ದೆ. ಇದನ್ನು ಓದಿದ ಮಿತ್ರ ಹರೀಶ್, ಇದೊಂದು ಸ್ಫೂರ್ತಿದಾಯಕ ಕಥೆ, ಸಿನಿಮಾ ಮಾಡೋಣ ಎಂದು ಪ್ರೋತ್ಸಾಹಿಸಿದರು. ನನ್ನ ಮಗ ಕೀರ್ತಿಕುಮಾರ್‌ನಾಯ್ಕ್ ಈ ಚಿತ್ರವನ್ನು ನಿರ್ದೇಶಿಸುವುದರೊಂದಿಗೆ ನಾಯಕನಾಗೂ ಅಭಿನಯಿಸಿದ್ದಾರೆ. ಶಿಫಾಲಿಸಿಂಗ್ ಸೋನಿ ನಾಯಕಿಯಾಗಿ ನಟಿಸಿದ್ದು, ಬಿ.ಜಯಶ್ರೀ, ಪದ್ಮಾವಾಸಂತಿ, ವಿಜಯಕಾಶಿ, ತಬಲ ನಾಣಿ, ನಾಗೇಂದ್ರ ಅರಸ್, ಶೋಭರಾಜ್, ಪ್ರಕಾಶ್, ಹನುಮಂತೇಗೌಡ ಮುಂತಾದವರು ಚಿತ್ರದಲ್ಲಿದ್ದಾರೆ. ನಸಾಬ್ ಎಂದರೆ ಲಂಬಾಣಿ ಭಾಷೆಯಲ್ಲಿ 'ಕಟ್ಟೆ ಪಂಚಾಯ್ತಿ' ಎಂದರ್ಥ. ಸದ್ಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು.

ನಾಯಕ ಕೀರ್ತಿಕುಮಾರ್‌ನಾಯ್ಕ್ ಮಾತನಾಡುತ್ತ, ನಾನು ಯಾವುದೇ ಆಕ್ಟಿಂಗ್ ತರಗತಿಗೆ ಹೋಗಿಲ್ಲ, ಶೂಟಿಂಗ್ ಮಾಡಿದ ಪ್ರತಿದಿನ ಒಳ್ಳೆಯ ಅನುಭವ ಪಡೆದೆ. ಇಲ್ಲಿ ನಿಜವಾಗಿ ಕಷ್ಟಪಡೋದು ಕ್ಯಾಮರಾಮ್ಯಾನ್‌ಗಳು, ಆರ್ಟ್ ಡಿಪಾರ್ಟ್‌ಮೆಂಟ್‌ನವರು. ನಿಜವಾಗಿಯೂ ಅವರೇ ಗ್ರೇಟ್. ನನ್ನ ಮೇಲೆ ನಂಬಿಕೆಯಿಟ್ಟು ನನ್ನ ತಂದೆ ಈ ದೊಡ್ಡ ಜವಾಬ್ದಾರಿಯನ್ನು ನೀಡಿದ್ದಾರೆ. ಇದು ನನ್ನ ನಟನೆಯ ಮೊದಲ ಚಿತ್ರ ಎಂದರು.

ನಾಯಕಿ ಶಿಫಾಲಿಸಿಂಗ್ ಸೋನಿ, ವಿಜಯಕಾಶಿ, ತಬಲನಾಣಿ ಹಾಗೂ ಇತರರು ಚಿತ್ರದಲ್ಲಿನ ತಮ್ಮ ಪಾತ್ರಗಳ ಕುರಿತು ಮಾಹಿತಿ ನೀಡಿದರು. ಸುಜಾತ ಕಿಶೋರ್‌ನಾಯ್ಕ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಾಗಂ ಅವರ ಸಂಗೀತ ಈ ಚಿತ್ರಕ್ಕಿದೆ.



'ನಸಾಬ್' ಚಿತ್ರದಲ್ಲಿ ಕೀರ್ತಿಕುಮಾರ್ ನಾಯ್ಕ್, ಶಿಫಾಲಿಸಿಂಗ್ ಸೋನಿ



'ಟೆಡ್ಡಿ ಬೇರ್' ಟ್ರೇಲರ್ ಬಿಡುಗಡೆ

ಯುವನಟ ಭಾರ್ಗವ ನಾಯಕನಾಗಿ ನಟಿಸಿರುವ ಸೈನ್ಸ್ ಫಿಕ್ಷನ್, ಥ್ರಿಲ್ಲರ್ ಚಿತ್ರ ಟೆಡ್ಡಿ ಬೇರ್. ಲೋಕೇಶ್ ಬಿ. ಅವರ ಕಥೆ, ಚಿತ್ರಕಥೆ ಮತ್ತು ನಿರ್ದೇಶನವಿರುವ ಈ ಚಿತ್ರದ ಟ್ರೇಲರ್–ಹಾಡು ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಹಿರಿಯ ನಿರ್ದೇಶಕ ಸಾಯಿಪ್ರಕಾಶ್ ಹಾಗೂ ಶ್ರೀಮತಿ ಮಮತಾ ದೇವರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪುರಿ ಜಗನ್ನಾಥ್ ಅವರ ಶಿಷ್ಯನಾದ ಲೋಕೇಶ್ ಅವರಿಗಿದು ಮೊದಲ ನಿರ್ದೇಶನದ ಚಿತ್ರ. ಈ ಚಿತ್ರದ ನಂತರ ಅವರು ವಿಕ್ರಮಾರ್ಕ, ವಿದುರ ಮೊದಲಾದ ಚಿತ್ರಗಳಿಗೆ ಆಕ್ಷನ್ ಕಟ್ ಹೇಳಿದ್ದಾರೆ, ಇದೊಂದು ಸೈನ್ಸ್ ಫಿಕ್ಷನ್ ಚಿತ್ರವಾಗಿದ್ದು, ನಾಯಕ ಭಾರ್ಗವ ಚಿತ್ರದಲ್ಲಿ ಒಬ್ಬ ಸೈಕಲಾಜಿಸ್ಟ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಟೆಡ್ಡಿ ಬೇರ್ ಅವರ ನಟನೆಯ ಪ್ರಥಮ ಚಿತ್ರವಾದರೂ ರಿಲೀಸಾಗುವುದು ತಡವಾಗಿದೆ. ಇದಲ್ಲದೆ ಅವರು ಪರಿಶುದ್ಧ, ವಿದುರ, ವಿಪರ್ಯಾಸ ಸೇರಿದಂತೆ ಏಳು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.


ಬೆನಕರಾಜು, ದೀಪು, ಕೃಷ್ಣಸಾರಥಿ ಅವರು ಚಿತ್ರದ ಛಾಯಾಗ್ರಹಣ ಮಾಡಿದ್ದಾರೆ. ಚಿತ್ರದಲ್ಲಿ ಕಾಲಭೈರವನ ಕುರಿತಾದ ಹಾಡೊಂದಿದ್ದು, ರೀರೆಕಾರ್ಡಿಂಗ್ ಈ ಚಿತ್ರದ ಹೈಲೈಟ್, ವಿವೇಕ್ ಜಂಗ್ಲಿ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಇದು ಇವರ 2ನೇ ಚಿತ್ರ. ನಾಯಕಿಯಾಗಿ ಶೈಲಜಾ ಸಿಂಹ ಹಾಗೂ ಮತ್ತೊಂದು ಪಾತ್ರದಲ್ಲಿ ದೀನಾ ನಟಿಸಿದ್ದಾರೆ. ಬೆಂಗಳೂರು ಹಾಗೂ ಮಂಗಳೂರು ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ, ಈ ಸಿನಿಮಾ ವೀಕ್ಷಿಸಿದ ನಂತರ ಎಲ್ಲರಿಗೂ ಭಯ ಖಂಡಿತ ಆಗುತ್ತದೆ ಎನ್ನುವುದು ಚಿತ್ರತಂಡದ ಅಭಿಪ್ರಾಯ. ಆದಿಲಕ್ಷ್ಮೀ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಜ್ಯೋತಿ ತಾರಕೇಶ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸಿರಿ ಮ್ಯೂಸಿಕ್‌ನ ಚಿಕ್ಕಣ್ಣ ಅವರ ಮೂಲಕ ಈ ಚಿತ್ರದ ಟ್ರೇಲರ್ ಸಾಂಗ್ ಬಿಡುಗಡೆಯಾಗಿದೆ, ಈಗಾಗಲೇ ಸೆನ್ಸಾರ್ ಹಂತಕ್ಕೆ ಬಂದಿರುವ ಈ ಸಿನಿಮಾವನ್ನು ಜುಲೈನಲ್ಲಿ ಪ್ರೇಕ್ಷಕರ ಮುಂದೆ ತರಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ.

ಮದ್ಯಪಾನದ ಒಳಿತು–ಕೆಡುಕು 'ಎಣ್ಣೆ ಪಾರ್ಟಿ'

ಈ ಹಿಂದೆ ದ್ವಂದ್ವ ಎಂಬ ಚಿತ್ರ ನಿರ್ಮಿಸಿದ್ದ ಚಿತ್ರತಂಡ ಇದೀಗ 'ಎಣ್ಣೆ ಪಾರ್ಟಿ' ಎಂಬ ಸಿನಿಮಾ ಮಾಡುತ್ತಿದೆ. ಕಳೆದ ವಾರ ಈ ಚಿತ್ರದ ಮುಹೂರ್ತ ನೆರವೇರಿತು. ಕಾವುನ್‌ವ್ಯಾನ್ ಪ್ರೊಡಕ್ಷನ್ ಅಡಿಯಲ್ಲಿ ಪ್ರದೀಪ್ ಕುಮಾರ್.ಕೆ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹಿಂದಿನ ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ಧನಂಜಯ್ ನಾಗರಾಜು ಅವರ ಜೊತೆ ಸೇರಿ ಭರತ್.ಎಲ್ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ ಅಂದರೆ 'ಎಣ್ಣೆ ಪಾರ್ಟಿ' ಚಿತ್ರಕ್ಕೆ ಭರತ್ ಹಾಗೂ ಧನಂಜಯ್ ನಾಗರಾಜು ಇಬ್ಬರು ನಿರ್ದೇಶಕರು. ಕಥೆ ಚಿತ್ರಕಥೆ ಕೂಡ ಅವರದೇ.

ಪ್ರೀತಿ ಎನ್ನುವುದು ಎಲ್ಲಾ ಕಡೆ ಇರುತ್ತದೆ. ಅದೇರೀತಿ ಮದ್ಯ ಸಹ ಎಲ್ಲೆಡೆ ಸಿಗುವ ಯೂನಿವರ್ಸಲ್ ಡ್ರಿಂಕ್ ಆಗಿದೆ. ನಾಲ್ಕು ಯುವ ಜೋಡಿಗಳ ಸುತ್ತ ಸಾಗುವ ಕಥೆ ಈ ಚಿತ್ರದಲ್ಲಿದೆ. ಶ್ರೀಮಂತರು, ಬಡವರು ಎನ್ನದೆ ಎಲ್ಲರೂ ಮದ್ಯವನ್ನು ಕುಡಿಯುತಾರೆ. ಆದರೆ ಅದು ನಮ್ಮ ದೇಹದೊಳಗೆ ಹೋದಾಗ ಅವರು ಯಾವ ರೀತಿ ವರ್ತಿಸುತಾರೆ. ಕುಡಿತ ಒಳ್ಳೇದು ಅಥವಾ ಕೆಟ್ಟದು ಅಂತ ವಿಶ್ಲೇಷಿಸದೆ, ಮಿತಿಯೊಳಗೆ ಸೇವಿಸಿದರೆ ಅಂಥಾ ಅನಾಹುತ ಸಂಭವಿಸುವುದಿಲ್ಲ. ಆದರೆ ಮಿತಿಮೀರಿದರೆ, ಅದರ ಪರಿಣಾಮ ಏನಾಗುತ್ತದೆ ಎಂದು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ.

ಸಿನಿಪದಬಂಧ–531



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಷೇಕ್ಸ್ ಪಿಯರ್‌ನ "ದಿ ಕಾಮಿಡಿ ಆಫ್ ಎರರ್" ಕಥೆ ಆಧಾರಿತ ಚಿತ್ರ 4
4. ಸಂಗೀತಾಕ್ಷರಗಳನ್ನು ಇರಿಸಿಕೊಂಡಿರುವ ಹಾಸ್ಯನಟ 6
8. "ಕೊಡುವುದು" ಎಂಬ ಅರ್ಥದಲ್ಲಿ ಆತ್ರಿಯ ಮಗ ನೆನಪಾದರೆ ಈ ಪೋಷಕ ನಟ ಪ್ರತ್ಯಕ್ಷ! 4
9. ಜಯಶ್ರೀ ದೇವಿಯ ಗೆಳೆತನದ ಜಗತ್ತು 4
11. ರವಿಚಂದ್ರನ್, ಬಾಲಾಜಿ ನಿಖಿತಾ ಅಭಿನಯದ "ಅರಸ" 5
14. ಮುರಳಿ – ಭವ್ಯ ಅಭಿನಯದ ಪ್ರೀತಿಯ ಹಬ್ಬ 4
15. ಅಂಬಿ ಸಾಂಸ್ಕೃತಿಕ ನಗರಿಯ ಬುದ್ಧಿವಂತ 5
16. _ _ ಶೃದಿ 2
17. ಕಾಶೀನಾಥ್ ನೀಡಿದ ತರಬೇತಿ 5
18. ಈಕೆ 70–80 ರ ದಶಕದ ಕ್ಯಾಬರೆ ತಾರೆ 2

ವಿಜೇತರು: ರವಿತೇಜ ಎಸ್. ರಾಜ್, S/O ಸಿದ್ದರಾಜು, ಗಿರಿದರ್ಶಿನಿ ಲೇಔಟ್, ಆಲನಹಳ್ಳಿ ಪೋಸ್ಟ್, ಮೈಸೂರು-570028



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 530ರ ಉತ್ತರ

ಅಂ	ಗು	ಲಿ	ಮಾ	ಲ		ಯು		ಕ	ಬ	ಡ್ಡಿ
ದ			ಲ			ವ		ಮಾ		
ರ್		ಅ	ತಿ	ಮ	ಧು	ರ	ಅ	ನು	ರಾ	ಗ
ಬಾ	ಣ		ಮಾ			ತ್ನ		ಡಾ		
ಹ		ಗಂ	ಧ	ರ್ವ				ರ್ಲಿಂ		ಕಿಂ
ರ್	ಸ್ಟಾ		ವ		ಬೆ		ಹಾಂ	ಗ್	ಕಾಂ	ಗ್
					ಸು				ಚ	
	ಗಿ	ರಿ	ಮ	ಲ್ಲಿ	ಗೆ		ಅ		ನ	
	ರಿ						ಟೆಂ		ಗಂ	
	ಬಾ		ಸಿ	ಡು	ಕ	ಬೇ	ಡ	ಸಿಂ	ಗಾ	ರಿ
ಅ	ಲೆ	ಮಾ	ರಿ		ರ್ಣ		ರ್			

ಮೇಲಿನಿಂದ ಕೆಳಕ್ಕೆ

1. ವಾಯುವ್ಯ – ಈಶಾನ್ಯ ಮತ್ತು ಆಗ್ನೇಯ–ನೈರುತ್ಯ ನಡುವಿನ ದಿಕ್ಕುಗಳಿಗೆ ಕಲ್ಪನಾ ಅಭಿನಯವಿದೆ 6
2. ವಿಷ್ಣುವರ್ಧನ್, ಪ್ರೇಮ, ರೋಜಾ ಅಭಿನಯದ ಚಿತ್ರ 2
3. ಶಂಕರ್‌ನಾಗ್‌ನ ಕಪ್ಪನೆಯ ಹಾವು 4
5. ಎಡಕಲ್ಲು ಗುಡ್ಡದ ಮೇಲೆ ಜಯಂತಿಗೆ ಕಾಡಿದ ಅಗಲಿಕೆಯ ವೇದನೆ 10
6 ವಿಷ್ಣುವರ್ಧನ್ ವಕೀಲನಾಗಿ ಮಿಂಚಿದ ಚಿತ್ರಕ್ಕೆ ರಾಜ್ಯ ಪ್ರಶಸ್ತಿಯು ಲಭಿಸಿದೆ 9
7. 'ಬನ'ದ "ದೇವತೆ" 3
10. ಕಮಲ್‌ಹಾಸನ್ ತನ್ನ ಪ್ರಿಯತಮೆ ಶ್ರೀಪ್ರಿಯಳನ್ನು ಕರೆದ ಬಗೆ! 7
12 ರವಿಚಂದ್ರನ್ – ರಂಭಾ ಅಭಿನಯದ ಚಿತ್ರ 4
13. ನೆನಪಿರಲಿ ಪ್ರೇಮ್ ಒಳ್ಳೆಯ ನಡತೆಯುಳ್ಳವನು 4

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಮೈಸೂರು ಮಿತ್ರ

ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ | ತಿ.ನರಸೀಪುರ, ಕೆ.ಆರ್.ನಗರದಲ್ಲಿ ಬಿಜೆಪಿ–ಜೆಡಿಎಸ್ ಪ್ರತಿಭಟನೆ



ತಿ.ನರಸೀಪುರದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ/ಕೆ.ಆರ್.ನಗರ, ಜೂ.20– ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ತಿ.ನರಸೀಪುರದಲ್ಲಿ ಬಿಜೆಪಿ ಕಾರ್ಯಕರ್ತರು ರಸ್ತೆ ತಡೆ ನಡೆಸಿ ಪ್ರತ್ಯೇಕ ಪ್ರತಿಭಟನೆ ನಡೆಸಿದರೇ, ಕೆ.ಆರ್.ನಗರದಲ್ಲೂ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗರ್ಗೇಶ್ವರಿ: ತಿರುಮಕೂಡಲು ಸಮೀಪದ ಗರ್ಗೇಶ್ವರಿ ಬಿಂದಿಗೆ ಫ್ಯಾಕ್ಟರಿ ಬಳಿ ಜಮಾಯಿಸಿದ ವರುಣ ಬಿಜೆಪಿ ಮಂಡಲ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ ತಡೆದ ಪರಿಣಾಮ ರಸ್ತೆ ಸಂಚಾರ ಅಸ್ತವ್ಯಸ್ತವಾಯಿತು. ಅಲ್ಲದೇ ಸರ್ಕಾರದ ವಿರುದ್ಧ ನಾಮಫಲಕ, ಘೋಷಣಾ ಫಲಕ ಹಿಡಿದು ಘೋಷಣೆ ಕೂಗಿ ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಚುನಾವಣೆ ಮುಗಿಯುತ್ತಿದ್ದಂತೆಯೇ ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್ ಹೆಚ್ಚಳ ಮಾಡಿ ಪೆಟ್ರೋಲ್ 3 ರೂ. ಹಾಗೂ ಡೀಸೆಲ್‌ಗೆ 3.50 ರೂ. ಏರಿಕೆ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಪಕ್ಷ ಖಂಡಿಸುತ್ತದೆ. ಇದರಿಂದ ಸರಕು ಸಾಗಾಣಿಕೆ ವೆಚ್ಚ ಏರಿಕೆಯಾಗಿ ಬೆಲೆ ಏರಿಕೆ ಮೇಲೆ ಪರಿಣಾಮ ಉಂಟಾಗಲಿದೆ. ತರಕಾರಿ, ದಿನಸಿ ಬೆಲೆ ಏರಿಕೆಯಿಂದ ಕಂಗಾಲಾದ ಜನತೆಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ವರುಣ ಕ್ಷೇತ್ರದ ಉಸ್ತುವಾರಿ ಚಿಕ್ಕರಂಗನಾಯಕ, ಮೈಸೂರು ಜಿಲ್ಲಾ ಕಾರ್ಯದರ್ಶಿ ಕೆ.ವಾಸುದೇವ್, ತೋಟದಪ್ಪ ಬಸವರಾಜು, ವರುಣ ಮಂಜು, ಕೆಂಪಯ್ಯನಹುಂಡಿ ಅಂದಾನಿಗೌಡ, ಕೆಂಪೇಗೌಡ, ಕುಮಾರ್, ಕ್ಷೇತ್ರಾಧ್ಯಕ್ಷ ಸತೀಶ್, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಮುದ್ದುಕೃಷ್ಣ, ಪ್ರಧಾನ ಕಾರ್ಯದರ್ಶಿಗಳಾದ ವೆಂಕಟರಮಣ ಶೆಟ್ಟಿ, ಕುಮಾರ್, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಹಿಟ್ಟುವಳ್ಳಿ ಗೋಪಾಲ್, ಬಿ.ಎಲ್.ಮಹದೇವ, ಸಿ.ಪುಟ್ಟಯ್ಯ, ಪುಷ್ಪಲತಾ, ಲಕ್ಷ್ಮಿ ಇದ್ದರು.

ಗುಂಜಾನರಸಿಂಹಸ್ವಾಮಿ ದೇವಾಲಯ: ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಬಳಿ ತಿ.ನರಸೀಪುರ ಬಿಜೆಪಿ ಮಂಡಲದ ಕಾರ್ಯಕರ್ತರು ರಸ್ತೆ ತಡೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ, ಸರ್ಕಾರ ಜನವಿರೋಧಿ ನೀತಿಗಳನ್ನು ಜನರ ಮೇಲೆ ಹೇರುತ್ತಿದೆ. ಐದು ಗ್ಯಾರಂಟಿಗಳಿಗೆ ಹಣ ಹೊಂದಿಸಲು ಜನರ ಕಿಸೆಗೆ ಕೈ ಹಾಕಿದೆ. ಜನರಿಗೆ ಅಗ್ಗದ ಆಮಿಷಗಳನ್ನು ಒಡ್ಡಿ ಜನರಿಂದಲೇ ದೊಡ್ಡ ಪ್ರಮಾಣದಲ್ಲಿ ಹಣ ಸುಲಿಗೆ ಮಾಡುತ್ತಿದೆ. ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯಿಂದ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿದೆ. ಬಡವರು, ಮಧ್ಯಮ ವರ್ಗದ ಜನರ ಬದುಕು ದುಸ್ತರವಾಗಿದೆ ಎಂದು ದೂರಿದರು.

ಈ ವೇಳೆ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಜಿಲ್ಲಾ ಕಾರ್ಯದರ್ಶಿ ಎಸ್.ಎಂ.ದಾಮೋದರ್, ಪುರಸಭಾ ಸದಸ್ಯ ಕಿರಣ್, ಮಾಜಿ ಸದಸ್ಯ ಎನ್.ಲೋಕೇಶ್, ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ ಪಟೇಲ್, ಗೂಳಿ ಮಹೇಶ್, ಜಿಲ್ಲಾ ಉಪಾಧ್ಯಕ್ಷ ಎಂ.ದಾಸಯ್ಯ, ನಂಜುಂಡಸ್ವಾಮಿ, ಡಾ.ಮಲ್ಲಿಕಾರ್ಜುನ ಸ್ವಾಮಿ, ಚಂದ್ರಶೇಖರ್, ಚೌಹಳ್ಳಿ ಸಿದ್ದರಾಜು, ರಾಜಶೇಖರ್ ಭಾಗವಹಿಸಿದ್ದರು.

ಕೆ.ಆರ್.ನಗರ: ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಮಿನಿ ಆಡಳಿತಸೌಧಕ್ಕೆ ತೆರಳಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಬಿಜೆಪಿ ಅಧ್ಯಕ್ಷ ಧರ್ಮ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ತಕ್ಷಣ ಪೆಟ್ರೋಲ್, ಡೀಸೆಲ್ ದರ ಇಳಿಸಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಸಾಲಿಗ್ರಾಮ ಬಿಜೆಪಿ ಅಧ್ಯಕ್ಷ ಸಾ.ರಾ.ತಿಲಕ್ ಮಾತನಾಡಿ, ಕಳೆದ 13 ತಿಂಗಳಿಂದ ಕಾಂಗ್ರೆಸ್ ಸರ್ಕಾರ ಅಧಿಕಾರ ನಡೆಸುತ್ತಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಸಾರ್ವಜನಿಕರಿಗೆ ರಕ್ಷಣೆ ಇಲ್ಲದಂತಾಗಿದೆ. ತೈಲಬೆಲೆ ಏರಿಕೆಯಿಂದ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಾಗಲಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಲಿದ್ದು, ಚುನಾವಣಾ ಸಮಯ ನೀಡಿದ ಭರವಸೆಯಂತೆ ಅಗತ್ಯ ವಸ್ತುಗಳು ಸೇರಿದಂತೆ ತೈಲ ಬೆಲೆ ಹೆಚ್ಚಳ ಮಾಡಬಾರದು ಎಂದು ಒತ್ತಾಯಿಸಿದರು.

ಜೆಡಿಎಸ್ ನಗರ ಕಾರ್ಯದರ್ಶಿ ರುದ್ರೇಶ್ ಮಾತನಾಡಿದರು. ಇದೇ ವೇಳೆ ತಹಸೀಲ್ದಾರ್ ಪೂರ್ಣಿಮಾ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಪುರಸಭಾ ಸದಸ್ಯರಾದ ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ಉಮೇಶ್, ಮಾಜಿ ಸದಸ್ಯ ಉಮಾಶಂಕರ್, ಬಿಜೆಪಿ ಪದಾಧಿಕಾರಿಗಳಾದ ಸ್ವಪ್ನ, ನಾಗೇಶ್, ರಂಗಸ್ವಾಮಿ, ಅಂಬುಜ, ಮಾದೇಶ್, ಪ್ರವೀಣ, ವಿಶ್ವನಾಥ್, ಮಹದೇವ ನಾಯಕ, ಹರೀಶ, ಮಂಜುನಾಥ್, ಬಸವರಾಜ್, ಕುಮಾರ್, ರಾಜೇಶ್, ಗೋಪಾಲ್ ರಾಜ್ ಇದ್ದರು.



ಪೆಟ್ರೋಲ್, ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಕೆ.ಆರ್.ನಗರದಲ್ಲಿ ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆಯಲ್ಲೂ ಬೆಲೆ ಏರಿಕೆಗೆ ಆಕ್ರೋಶ



ಹೆಚ್.ಡಿ.ಕೋಟೆ: ಪಟ್ಟಣದ ಬಾಪೂಜಿ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಮಾನವ ಸರಪಳಿ ರಚಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಪಟ್ಟಣದ ಮಿನಿ ವಿಧಾನಸೌಧದವರೆಗೆ ಮೆರವಣಿಗೆಯಲ್ಲಿ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಮಾತನಾಡಿ, ಗ್ಯಾರಂಟಿಗಳಿಗೆ ಹಣ ಹೊಂದಿಸಲು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದೆ. ಇದರಿಂದ ಜನ ಸಾಮಾನ್ಯರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ನಡುವೆ ಗ್ಯಾರಂಟಿಗಳನ್ನು ಉಳಿಸಿಕೊಳ್ಳುವ ಸಲುವಾಗಿ ಖಾಲಿಯಾಗಿರುವ ಖಜಾನೆ ತುಂಬಿಸಿಕೊಳ್ಳಲು ಬೆಲೆಯನ್ನು ಏರಿಸಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ತಹಸೀಲ್ದಾರ್ ಶ್ರೀನಿವಾಸ್‌ಗೆ ಮನವಿ ಸಲ್ಲಿಸಿದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಶಂಬೇಗೌಡ, ಜಿಪಂ ಮಾಜಿ ಬಸವರಾಜಪ್ಪ, ರಾಜು, ಸ್ವಾಮಿ, ಎಪಿಎಂಸಿ ಅಧ್ಯಕ್ಷ ಬಸವರಾಜಪ್ಪ, ಮುಖಂಡರಾದ ಎಂ.ಡಿ.ಮಂಚಯ್ಯ, ಚಂದ್ರಮೌಳಿ, ನಂದೀಶ, ನಾಗರಾಜ್, ಮಲ್ಲಿಕಾರ್ಜುನಪ್ಪ ನಂದೀಶ್, ಮಾದೇಶ್, ಎನ್.ಎಸ್.ಮಂಚಯ್ಯ, ಗೋಪಾಲ್, ಪ್ರವೀಣ್, ರಾಜು, ವಿನೋದ್, ಪ್ರಭು, ಮಹೇಶ್ ಇದ್ದರು.

ಅಪಪ್ರಚಾರ, ಜೆಡಿಎಸ್–ಬಿಜೆಪಿ ಮೈತ್ರಿಯಿಂದ ಸೋಲು

ಕೃತಜ್ಞತಾ ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಎಂ.ಲಕ್ಷ್ಮಣ



ಕೃತಜ್ಞತಾ ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಎಂ.ಲಕ್ಷ್ಮಣ ಮಾತನಾಡಿದರು.

ಹುಣಸೂರು, ಜೂ.20– ಕಾಂಗ್ರೆಸ್ ವಿರುದ್ಧ ಅಪಪ್ರಚಾರ, ಜೆಡಿಎಸ್–ಬಿಜೆಪಿ ಮೈತ್ರಿಯಿಂದ ಸೋತಿದ್ದೇನೆ. ಅದಕ್ಕೆ ಯಾರನ್ನೂ ಹೊಣೆ ಮಾಡದೆ ಪಕ್ಷ ಸಂಘಟನೆ ಹಾಗೂ ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಎಂದು ಕಾಂಗ್ರೆಸ್ ಮುಖಂಡ ಎಂ.ಲಕ್ಷ್ಮಣ ತಿಳಿಸಿದರು.

ನಗರದಲ್ಲಿ ನಡೆದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ 5 ಗ್ಯಾರಂಟಿಗಳ ಫಲಾನುಭವಿಗಳು ಪ್ರತಿ ಕುಟುಂಬದಲ್ಲೂ ಇದ್ದಾರೆ. ಆದರೆ ಮತ ತಂದು ಕೊಡಲಿಲ್ಲ. ಎಲ್ಲೆಡೆ ಗೆಲ್ಲುವ ಉತ್ತಮ ವಾತಾವರಣವಿತ್ತು. ಸಿಎಂ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಎಲ್ಲಾ ಶಾಸಕರು ಬದ್ಧತೆಯಿಂದ ಗೆಲುವಿಗೆ ಶ್ರಮಿಸಿದ್ದರು. ಅಲ್ಲದೇ ಸಿಎಂ ಕ್ಷೇತ್ರವಾದ್ದರಿಂದ ಗೆಲುವಿನ ನಿರೀಕ್ಷೆಯಲ್ಲಿದ್ದೆ. ನಾನು ಪ್ರಬಲ ಕೋಮಿಗೆ ಸೇರಿದ್ದರೂ ಇಲ್ಲಿ ಜಾತಿ ವ್ಯವಸ್ಥೆ, ಅರಸರ ಮನೆತನ ಎಂಬ ಕಾರಣಕ್ಕೆ ಸೋಲಾಯಿತು. ಇದರಿಂದ ಯಾರೂ ಕೂಡ ಧೃತಿಗೆಡಬೇಡಿ. ಮುಂದೆ ಜಿಪಂ, ತಾಪಂ ಚುನಾವಣೆ ಬರಲಿದ್ದು, ಪಕ್ಷ ಸಂಘಟಿಸಿ ಅಧಿಕಾರ ಹಿಡಿಯಬೇಕು. ನಿಮ್ಮ ಸಮಸ್ಯೆಗಳೇನಿದ್ದರೂ ಸಂಪರ್ಕಿಸಿ ಎಂದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಗೆಲ್ಲಬೇಕಿದ್ದ ವಿಧಾನಸಭೆ, ಲೋಕಸಭೆ, ವಿಧಾನಪರಿಷತ್ ಚುನಾವಣೆಯಲ್ಲಿ ಸೋತಿದ್ದೇವೆ. ನಾನು ಗೆದ್ದಿದ್ದರೆ ಮಂತ್ರಿಯಾಗಿ ಕ್ಷೇತ್ರಕ್ಕೆ ಸುವರ್ಣ ಅವಕಾಶ ಸಿಗುತ್ತಿತ್ತು. ಸಮೀಕ್ಷೆಯನ್ನು ಗಮನಿಸಿದಾಗ ಬಿಜೆಪಿ–ಜೆಡಿಎಸ್ ಹೊಂದಾಣಿಕೆ, ಮೋದಿ ಅಲೆ, ನೇಹಾ ಕೊಲೆ ಹಾಗೂ ಮಹಾರಾಜರ ಭಾವನಾತ್ಮಕ ಸಂಬಂಧ ಹೀಗೆ ಅನೇಕ ಕಾರಣಗಳಿಂದ ಸೋಲಾಗಿದೆ. ಗ್ಯಾರಂಟಿ ಯೋಜನೆ ಓಟಿಗಾಗಿ ಅಲ್ಲ ಎಂಬುದನ್ನು ಅರಿಯಿರಿ ಎಂದ ಅವರು, ಮುಂದೆ ಸಹಕಾರ ಸಂಘಗಳು, ಸ್ಥಳೀಯ ಸಂಸ್ಥೆಗಳ ಚುನಾವಣೆ ಬರುತ್ತಿದ್ದು, ಇದರ ಗೆಲುವಿಗೆ ಶ್ರಮಿಸೋಣ ಎಂದರು.

ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಕುನ್ನೇಗೌಡ, ತಾಲೂಕು ಕಾರ್ಯಾಧ್ಯಕ್ಷ ಪುಟ್ಟರಾಜು, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಸ್.ಜಯರಾಂ, ನಾಯಕ ಸಮಾಜದ ತಾಲೂಕು ಅಧ್ಯಕ್ಷ ಅಣ್ಣಯ್ಯನಾಯಕ ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ, ಬಸವರಾಜಪ್ಪ, ಬಸವರಾಜ್, ಪ್ರೇಮಕುಮಾರ್, ನಗರಸಭೆ ಸದಸ್ಯ ರಮೇಶ್, ಮಾಜಿ ಅಧ್ಯಕ್ಷ ಎಂ.ಲಕ್ಷ್ಮಣ್, ಮಾಜಿ ಸದಸ್ಯ ಹೆಚ್.ಜೆ.ಯೋಗಾನಂದ, ತಾಪಂ ಮಾಜಿ ಸದಸ್ಯರಾದ ರವಿ ಪ್ರಸನ್ನ, ಗಣಪತಿ ರಾವ್ ಇಂದೋಲ್ಕರ್, ಮುಖಂಡರಾದ ಸುರೇಶ್, ಹೆಚ್.ಎಸ್.ಕುಮಾರ್, ಶಾಂತ, ಸ್ವರೂಪ್, ರಘು, ಅಕ್ರಮ–ಸಕ್ರಮ ಸಮಿತಿ ಮಾಜಿ ಸದಸ್ಯ ಚಿಕ್ಕಸ್ವಾಮಿ, ರಾಮಚಂದ್ರು, ಲೋಕೇಶ್, ರೇಣುಕಾ, ರೇಖಾ ಕಾರ್ಯಕರ್ತರು ಭಾಗವಹಿಸಿದ್ದರು.

ಗ್ಯಾರಂಟಿಗಳಿಗಾಗಿ ಡೀಸೆಲ್, ಪೆಟ್ರೋಲ್ ಬೆಲೆ ಏರಿಕೆ

ಮಾಜಿ ಶಾಸಕ ಬಿ.ಹರ್ಷವರ್ಧನ್ ಆಕ್ರೋಶ



ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿದರು.

ನಂಜನಗೂಡು, ಜೂ.20– ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಏರಿಸಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಆರ್ಥಿಕ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 53 ಸಾವಿರ ಕೋಟಿ ರೂ. ನೀಡಲಾಗುತ್ತಿದೆ. ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಬಿಜೆಪಿ ಅವಧಿಯಲ್ಲಿ ಬಿಡುಗಡೆಯಾಗಿದ್ದ ಅನುದಾನದಿಂದಲೇ ಈಗಲೂ ಯೋಜನೆಗಳು ಜಾರಿಯಲ್ಲಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿ ವೇತನಕ್ಕೂ ಕಡಿವಾಣ ಹಾಕಲಾಗಿದ್ದು, ಈವರೆಗೂ ಸರ್ಕಾರ ವಿದ್ಯಾರ್ಥಿ ವೇತನ ನೀಡಿಲ್ಲ. ಬಿಜೆಪಿ ಸರ್ಕಾರದಲ್ಲಿ ಸಂವಿಧಾನದ ವಿಚಾರ ತೆಗೆದುಕೊಂಡು ಟೀಕಾ ಪ್ರಹಾರದೊಂದಿಗೆ ಆಗಾಗ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರು ಮಾಯವಾಗಿದ್ದಾರೆ. ಈಗಾಗಲೇ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಬಯಲಾಗಿದ್ದು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ನೂರಾರು ಕೋಟಿ ರೂ. ಲೂಟಿ ಬಗ್ಗೆ ಜನರು ಹೋರಾಟಕ್ಕೆ ಮುಂದಾದ ಬಳಿಕ ಸರ್ಕಾರ ಸಚಿವ ನಾಗೇಂದ್ರ ರಾಜೀನಾಮೆ ಪಡೆದುಕೊಂಡಿದೆ. ಹೀಗಾಗಿ ರಾಜ್ಯದ ಜನರು ಕಾಂಗ್ರೆಸ್ ದುರಾಡಳಿತದ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ ಎಂದರು.

ನಂಜನಗೂಡಿನಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಳ್ಳತನ, ಕೊಲೆ ಸುಲಿಗೆ ನಡೆಯುತ್ತಿವೆ. ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಬೆಳ್ಳಿ ರಥ ಹಾಗೂ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದ್ದು, ನಂಜನಗೂಡು ಅಭಿವೃದ್ಧಿಯಿಂದ ಹಿಂದೆ ಸರಿಯುತ್ತಿರುವ ಆತಂಕವನ್ನು ಜನರು ವ್ಯಕ್ತಪಡಿಸಿದ್ದಾರೆ. ಇನ್ನು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಖಂಡಿಸಿ ಜೂ.21ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಗೋಷ್ಠಿಯಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ನಗರ ಮಂಡಲ ಅಧ್ಯಕ್ಷ ಸಿದ್ದರಾಜು, ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಬಾಲಚಂದ್ರ, ನಗರಸಭೆ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ಬಸವಣ್ಣ, ಉಮೇಶ್ ಮೋದಿ, ರಾಘವೇಂದ್ರ, ಕುಮಾರ್, ಶಂಕರಪ್ಪ, ಮತ್ತಿತರರಿದ್ದರು.

ಕಾನಕನಹಳ್ಳಿ ಮಕ್ಕಳಿಗೆ ಕಲಿಕಾ ಸಾಮಾಗ್ರಿ ವಿತರಣೆ



ಶಾಲಾ ಮಕ್ಕಳಿಗೆ ಕಲಿಕಾ ಸಾಮಾಗ್ರಿ ವಿತರಿಸಲಾಯಿತು.

ಸರಗೂರು, ಜೂ.20– ತಾಲೂಕಿನ ಕಾನಕನಹಳ್ಳಿ ಸರ್ಕಾರಿ ಶಾಲೆ ಮಕ್ಕಳಿಗೆ ನೋಟ್‌ಬುಕ್, ಕಲರ್ ಬುಕ್, ಪೆನ್ಸಿಲ್, ಜಾಮಿಟ್ರಿ ಬಾಕ್ಸ್ ಸೇರಿದಂತೆ ಕಲಿಕಾ ಸಾಮಾಗ್ರಿಗಳನ್ನು ವಿತರಿಸಲಾಯಿತು.

ಹಾದನೂರು ಗ್ರಾಪಂ ಸದಸ್ಯ ಶಿವಲಿಂಗಯ್ಯ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಸಂಘ ಸಂಸ್ಥೆಗಳು ಹಾಗೂ ದಾನಿಗಳ ಸಹಕಾರದೊಂದಿಗೆ ಶಾಲಾ ಮಕ್ಕಳಿಗೆ ಕಲಿಕಾ ಸಾಮಾಗ್ರಿ ವಿತರಿಸುತ್ತಿದ್ದೇವೆ. ಆ ಮೂಲಕ ಮಕ್ಕಳ ಓದಿಗೆ ಸಹಾಯ ಮಾಡಲಾಗುತ್ತಿದೆ. ಅಲ್ಲದೇ ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಾಗುವುದು ಎಂದರು.

ಮುಖಂಡ ಎಸ್.ಕುಮಾರ್ ಮಾತನಾಡಿದರು. ಇದೇ ವೇಳೆ ಶಿವಲಿಂಗಯ್ಯ ಅವರನ್ನು ಸನ್ಮಾನಿಲಾಯಿತು. ಅಲ್ಲದೇ ಯಶವಂತಪುರ, ಎತ್ತಿಗೆ, ಕಾನಕನಹಳ್ಳಿ, ಶಿವಪುರ, ಜಯಲಕ್ಷ್ಮಿಪುರ ಸೇರಿದಂತೆ ಇನ್ನಿತರ ಶಾಲಾ ಮಕ್ಕಳಿಗೆ ಕಲಿಕಾ ಸಾಮಾಗ್ರಿಗಳನ್ನು ವಿತರಿಸಲಾಯಿತು.

ಈ ವೇಳೆ ಮೀರಾ ಮುಕುಂದ, ಅನುರಾಧ, ಮಂಗಳ ವಿಜೇಂದ್ರ, ಶಿಕ್ಷಕರಾದ ನೇತ್ರಾವತಿ, ಕೃಷ್ಣಮೂರ್ತಿ, ಮಹೇಶ್, ಪ್ರಸಾದ್, ಪರಮೇಶ್, ಜಯಕುಮಾರ್, ವೆಂಕಟರಾಮು ಗ್ರಾಮಸ್ಥರು ಉಪಸ್ಥಿತರಿದ್ದರು.

ಎಸ್‌ಪಿಬಿ ಸ್ಮರಣಾರ್ಥ ಗೀತ ನಮನ



ಮೈಸೂರು, ಜೂ.20 (ಜಿಎ)–ಎಸ್.ಪಿ. ಬಾಲಸುಬ್ರಹ್ಮಣ್ಯಂ ಸ್ಮರಣಾರ್ಥ ಗಣೇಶ ಮ್ಯೂಸಿಕಲ್ ಗ್ರೂಪ್ ವತಿಯಿಂದ ಜೂ.22ರಂದು ಸಂಜೆ 5ರಿಂದ ರಾತ್ರಿ 9ರವರೆಗೆ ನಗರದ ಪುರಭವನದಲ್ಲಿ ಗೀತ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ. ಆಯೋಜಕ ಎ.ಕಾಂತರಾಜು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ತಮ್ಮ ಸಾರಥ್ಯದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದ್ದು, ಕನ್ನಡ ಚಲನಚಿತ್ರ ಗೀತೆಗಳ ಕರೋಕೆ ಕಾರ್ಯಕ್ರಮ ಇದಾಗಿದೆ ಅನೇಕ ಖ್ಯಾತ ಹವ್ಯಾಸಿ ಗಾಯಕ, ಗಾಯಕಿಯರು ಭಾಗವಹಿಸಲಿದ್ದಾರೆ ಪ್ರೇಕ್ಷಕರಿಗೆ ಉಚಿತ ಪ್ರವೇಶವಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ವರುಣ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ

ಸಂಸದ ಸುನೀಲ್ ಬೋಸ್ ಭರವಸೆ



ಸುತ್ತೂರು, ಜೂ.20– ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಎಂಎಲ್‌ಸಿ ಡಾ.ಯತೀಂದ್ರ ಮಾರ್ಗದರ್ಶನದಲ್ಲಿ ವರುಣ ಕ್ಷೇತ್ರಕ್ಕೆ ಕೇಂದ್ರದಿಂದ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳುವುದಾಗಿ ಸಂಸದ ಸುನೀಲ್ ಬೋಸ್ ಭರವಸೆ ನೀಡಿದರು.

ವರುಣ ಕ್ಷೇತ್ರದ ಬೊಕ್ಕಳ್ಳಿ ಗ್ರಾಮದಲ್ಲಿರುವ ತಮ್ಮ ಮನೆದೇವರಾದ ಉರಿ ಮಾರಮ್ಮ ತಾಯಿ ದೇವಸ್ಥಾನದಲ್ಲಿ ವಿಶೇಷ ಪೂಜೆಯೊಂದಿಗೆ ಹರಕೆ ತೀರಿಸಿ ಮಾತನಾಡಿದ ಅವರು, ಚುನಾವಣೆ ವೇಳೆ ನಮ್ಮ ಮನೆ ದೇವರು ಬೊಕ್ಕಳ್ಳಿ ಗ್ರಾಮದ ಗ್ರಾಮದೇವತೆ ಉರಿ ಮಾರಮ್ಮನವರ ದರ್ಶನ ಪಡೆದು ಹರಕೆ ಹೊತ್ತಿದ್ದೆ. ಅದೇ ರೀತಿ ಇಂದು ಪೂಜೆ ಸಲ್ಲಿಸಿದ್ದೇನೆ. ಅಲ್ಲದೆ ಗ್ರಾಮದ ಅಭಿವೃದ್ಧಿಗೆ ಕೇಂದ್ರದ ಅನುದಾನದ ಜೊತೆಗೆ ರಾಜ್ಯದ ಅನುದಾನ ಬಳಸಿಕೊಂಡು ಸಿಎಂ ಸಿದ್ದರಾಮಯ್ಯ ಮಾರ್ಗದರ್ಶನದಲ್ಲಿ ಶ್ರಮಿಸುತ್ತೇನೆ ಎಂದು ಗ್ರಾಮಸ್ಥರಿಗೆ ಭರವಸೆ ನೀಡಿದರು. ನಮ್ಮ ತಂದೆಗೆ ಕಳೆದ 25 ವರ್ಷಗಳಿಂದಲೂ ಎಲ್ಲಾ ವರ್ಗದ ಜನರು ಬೆಂಬಲಿಸುತ್ತಾ ಬಂದಿದ್ದರು. ಹಾಗಾಗಿ ಈ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಗೊಳಿಸುತ್ತೇನೆ ಎಂದರು.

ಕ್ಷೇತ್ರದ ಜನತೆಯ ಪ್ರೀತಿ, ವಿಶ್ವಾಸಕ್ಕೆ ಸದಾ ಋಣಿ

ನಾನು, ಯತೀಂದ್ರ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇವೆ: ಸಂಸದ ಸುನೀಲ್ ಬೋಸ್ ಭರವಸೆ



ತಿ.ನರಸೀಪುರಕ್ಕೆ ಆಗಮಿಸಿದ ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರನ್ನು ಎಪಿಎಂಸಿ ಮಾಜಿ ಅಧ್ಯಕ್ಷ ಉಕ್ಕಲಗೆರೆ ಬಸವಣ್ಣ ಮೈಸೂರು ಪೇಟ ತೊಡಿಸಿ ಸ್ವಾಗತಿಸಿದರು.

ತಿ.ನರಸೀಪುರ, ಜೂ.20–ಲೋಕಸಭಾ ಚುನಾವಣೆಯಲ್ಲಿ ನನ್ನ ಮೇಲೆ ನಂಬಿಕೆ ಇಟ್ಟು ಐತಿಹಾಸಿಕ ಗೆಲುವು ತಂದು ಕೊಟ್ಟ ಪಕ್ಷದ ಕಾರ್ಯಕರ್ತರು ಹಾಗೂ ಮತದಾರರ ನಂಬಿಕೆಗೆ ಚ್ಯುತಿ ಬಾರದಂತೆ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸುತ್ತೇನೆ ಎಂದು ನೂತನ ಸಂಸದ ಸುನೀಲ್ ಬೋಸ್ ತಿಳಿಸಿದರು.

ತಿ.ನರಸೀಪುರ ಹಾಗೂ ವರುಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ಮಹದೇಶ್ವರ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಅಧಿಕಾರ ಸಿಗಬಹುದು. ಆದರೆ ಜನರ ಪ್ರೀತಿ, ವಿಶ್ವಾಸ ಗಳಿಸುವುದು ಕಷ್ಟ, ಆ ಪ್ರೀತಿಯನ್ನು ನನಗೆ ಹಾಗೂ ಡಾ.ಯತೀಂದ್ರ ಅವರಿಗೆ ನೀಡಿದ್ದೀರಿ. ನಿಮ್ಮ ಪ್ರೀತಿ, ವಿಶ್ವಾಸಕ್ಕೆ ಯಾವಾಗಲೂ ಋಣಿಯಾಗಿರುತ್ತೇನೆ. ಯತೀಂದ್ರ ಹಾಗೂ ನಾನು ನೀವು ಕೊಟ್ಟ ಅಧಿಕಾರ ದುರುಪಯೋಗ ಮಾಡದೇ ಕ್ಷೇತ್ರದ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತೇವೆ ಎಂದು ಭರವಸೆ ನೀಡಿದರು.

ಏಳು ಕೆರೆ ನೀರು ಕುಡಿಸುತ್ತಾರೆ ಎಂದಿದ್ದೆ: ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 25 ಕ್ಷೇತ್ರಗಳ ಪಟ್ಟಿಯನ್ನು ಮೊದಲೇ ಅಂತಿಮಗೊಳಿಸಿತ್ತು. ಚಾಮರಾಜನಗರದಲ್ಲಿ ನಮ್ಮ ತಂದೆಯೇ ನಿಲ್ಲಬೇಕೆಂಬ ಒತ್ತಡ ಇದ್ದು, ನಾನು ನಿಂತರೆ ಗೆಲುವು ಕಷ್ಟವೆಂದು ತಿಳಿದು ನನ್ನನ್ನು ತಿ.ನರಸೀಪುರ ವಿಧಾನಸಭೆಗೆ ನಿಲ್ಲಿಸಲು ಚರ್ಚೆ ನಡೆದಿತ್ತು. ಆಗ ನಾನು ಯತೀಂದ್ರ ಬಳಿ ಹೇಳಿಕೊಂಡಿದ್ದೆ. ಡಾಕ್ಟ್ರೇ ನಮ್ಮ ತಂದೆಗೆ ಟಿಕೆಟ್ ಕೊಟ್ಟರೆ ಅವರು ಗೆದ್ದು ಸಂಸದರಾಗುತ್ತಾರೆ. ನಾನು ತಿ.ನರಸೀಪುರ ವಿಧಾನಸಭೆಗೆ ನಿಂತರೆ ನನಗೆ ಏಳು ಕೆರೆ ನೀರು ಕುಡಿಸ್ತಾರೆ. ದಯವಿಟ್ಟು ನನಗೆ ಲೋಕಸಭಾ ಟಿಕೆಟ್ ಕೊಡಿಸಿ ಎಂದಿದ್ದೆ. ಅದಕ್ಕೆ ಯತೀಂದ್ರ ಅವರು ತಮ್ಮ ತಂದೆ ಬಳಿ ಪಟ್ಟು ಹಿಡಿದು ನನಗೆ ಟಿಕೆಟ್ ಕೊಡಿಸಿದರು. ಇಂದು ನಾನು ಸಂಸದನಾಗಿದ್ದೇನೆ ಎಂದರೆ ಅದಕ್ಕೆ ಕಾರಣ ಯತೀಂದ್ರ ಸಿದ್ದರಾಮಯ್ಯ ಎಂದು ಸ್ಮರಿಸಿದರು.

ನನ್ನ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ ಶಾಸಕರಾದ ನರೇಂದ್ರ, ಅನಿಲ್, ದರ್ಶನ್, ಗಣೇಶ್ ಪ್ರಸಾದ್, ಪುಟ್ಟರಂಗಶೆಟ್ಟಿ ಹಾಗೂ ಕೃಷ್ಣಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ. ನನಗೆ ನರಸೀಪುರ ಹಾಗೂ ನಂಜನಗೂಡು ಬಿಟ್ಟರೆ ಇತರೆ ಕ್ಷೇತ್ರಗಳ ಪರಿಚಯ ಅಷ್ಟಾಗಿಲ್ಲದಿದ್ದರೂ ಅಲ್ಲಿಯ ಮತದಾರರು ನನಗೆ ನೀಡಿದ ಪ್ರೋತ್ಸಾಹ ನಿಜಕ್ಕೂ ಅದ್ಭುತ. ನಾನು ಗೆದ್ದಿರುವ ಕ್ಷೇತ್ರ ಚಾಮರಾಜನಗರವಾದರೂ ನನ್ನನ್ನು ರಾಜಕೀಯವಾಗಿ ಇಷ್ಟು ಎತ್ತರಕ್ಕೆ ಬೆಳೆಸಿದ್ದು ತಿ.ನರಸೀಪುರದ ಜನತೆ ಮತ್ತು ಕಾರ್ಯಕರ್ತರು. ಹಾಗಾಗಿ ಇಲ್ಲಿನ ಜನರ ಸಹಕಾರವನ್ನು ಎಂದೂ ಮರೆಯಲಾಗದು ಎಂದು ಬಣ್ಣಿಸಿದರು.

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಚಾಮರಾಜನಗರ ಕ್ಷೇತ್ರದಲ್ಲಿ ಗೆಲ್ಲುವುದೇ ಇಲ್ಲ ಎಂಬ ಚರ್ಚೆ ನಡುವೆಯೂ ಸುನೀಲ್ ಬೋಸ್ 1.88 ಲಕ್ಷ ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಇಷ್ಟು ಮಟ್ಟದ ಲೀಡ್ ಈವರೆಗೆ ಶ್ರೀನಿವಾಸ ಪ್ರಸಾದ್ ಸೇರಿದಂತೆ ಯಾರೂ ಪಡೆದಿಲ್ಲ. ಬೋಸ್ ಅವರಿಗೆ ಟಿಕೆಟ್ ನೀಡಿದ ಮೇಲೂ ಅವರ ವೈಯಕ್ತಿಕ ತೇಜೋವಧೆ ಮಾಡಲಾಗುತ್ತಿತ್ತು. ರಾಜಕೀಯ ತೇಜೋವಧೆ ಮಾಡಲಿ, ಆದರೆ ವೈಯಕ್ತಿಕ ತೇಜೋವಧೆ ಸಲ್ಲದು. ಈಗ ಪಕ್ಷದ ಕಾರ್ಯಕರ್ತರು ನಮಗೆ ಅಭಿನಂದನೆ ಮಾಡುತ್ತಿರುವುದು ಸರಿಯಲ್ಲ. ಬದಲಿಗೆ ನಾವೇ ನಿಮಗೆ ಕೃತಜ್ಞತೆ ಸಲ್ಲಿಸಬೇಕಿದೆ. ನಮ್ಮ ಗೆಲುವಿಗೆ ಮತದಾರರು ಹಾಗೂ ಕಾರ್ಯಕರ್ತರೇ ಕಾರಣ. ಹಾಗಾಗಿ ನಮಗೆ ಸಹಕರಿಸಿದ ನಿಮಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಕಾರ್ಯಕ್ರಮಕ್ಕೂ ಮುನ್ನಾ ತಿರುಮಕೂಡಲು ಬಿಂದಿಗೆ ಫ್ಯಾಕ್ಟರಿ ಬಳಿ ಸುನೀಲ್ ಬೋಸ್ ಹಾಗೂ ಡಾ.ಯತೀಂದ್ರ ಅವರನ್ನು ಉಕ್ಕಲಗೆರೆ ಗ್ರಾಮಸ್ಥರು ಹಾಗೂ ಕಾರ್ಯಕರ್ತರು ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಉಕ್ಕಲಗೆರೆ ಬಸವಣ್ಣ ನೇತೃತ್ವದಲ್ಲಿ ಪಟಾಕಿ ಸಿಡಿಸಿ, ಮೈಸೂರು ಪೇಟ ತೊಡಿಸಿ ಸ್ವಾಗತ ಕೋರಿದರು.

ತಳ್ಳಾಟ ನೂಕಾಟ; ಕಾಲ್ಕಿತ್ತ ಯತೀಂದ್ರ, ಬೋಸ್: ವೇದಿಕೆ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಕಾರ್ಯ ಕರ್ತರು, ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕರಿಗೆ ಹಾರ ಹಾಕಲು ನಾಮುಂದು ತಾಮುಂದು ಎಂದು ವೇದಿಕೆ ಮೇಲೆ ನುಗ್ಗಿದ ಪರಿಣಾಮ ನೂಕು ನುಗ್ಗಲು ಉಂಟಾಗಿದ್ದರಿಂದ ಯತೀಂದ್ರ ಹಾಗೂ ಬೋಸ್ ಕಾರ್ಯಕರ್ತರಿಂದ ತಪ್ಪಿಸಿ ಕೊಂಡು ವೇದಿಕೆಯಿಂದ ನಿರ್ಗಮಿಸಿದರು.

ಈ ವೇಳೆ ಮಾಜಿ ಶಾಸಕರಾದ ಡಾ.ಎನ್.ಎಲ್.ಭಾರತಿ ಶಂಕರ್, ಸುನೀತಾ ವೀರಪ್ಪಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವೈ.ಎನ್.ಶಂಕರೇ ಗೌಡ, ಸೋಸಲೆ ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಮಾಜಿ ಸದಸ್ಯರಾದ ತಲಕಾಡು ಮಂಜುನಾಥ್, ಓಂ ಪ್ರಕಾಶ್, ಸುಧಾಮಣಿ, ಕೆ.ಮಹದೇವ್, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಮಲ್ಲೇಗೌಡ, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು, ಬ್ಲಾಕ್ ಅಧ್ಯಕ್ಷರಾದ ಎಂ.ಡಿ.ಬಸವರಾಜು, ಚನ್ನಕೇಶವ, ಲಕ್ಷ್ಮಿನಾರಾಯಣ್, ಅನೀಲ್ ಬೋಸ್, ಎಪಿಎಂಸಿ ಮಾಜಿ ಅಧ್ಯಕ್ಷ ಅನೀಲ್ ಕುಮಾರ್, ತುಂಬಲ ಪ್ರಶಾಂತ್ ಬಾಬು, ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಮುನಾವರ್ ಪಾಷಾ, ಡಾ.ಜ್ಞಾನಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಲತಾ ಮಂಜುನಾಥ್, ಬೊಮ್ಮನಹಳ್ಳಿ ಚಿಕ್ಕಣ್ಣ, ಬೂದಹಳ್ಳಿ ಮಾದು, ಕನ್ನಾಯಕನಹಳ್ಳಿ ಕುಮಾರ್, ನಾಗೇಂದ್ರ, ಶಂಕರೇಗೌಡ, ಚಿಕ್ಕಲಕ್ಷ್ಮಿಪುರ ಲಿಂಗ ರಾಜು, ಪುಟ್ಮಲ್ಲಯ್ಯ, ರಂಗಸ್ವಾಮಿ, ಶ್ರೀಕಂಠಸ್ವಾಮಿ, ನಾಗಣ್ಣ, ದೇವರಾಜು, ಮಲ್ಲಪ್ಪ, ಶಿವರಾಮು, ನಂಜುಂಡೇಗೌಡ, ವರಲಹಳ್ಳಿ ಷಡಕ್ಷರಿ, ನಾಗೇಂದ್ರ, ಉಳುಕನಹುಂಡಿ ಸಿದ್ದರಾಜು, ಉಕ್ಕಲಗೆರೆ ಗ್ರಾಪಂ ಮಾಜಿ ಸದಸ್ಯ ರಾಜು, ಸದಸ್ಯ ರವಿ, ನಾಗರಾಜು, ನಂಜುಂಡಯ್ಯ, ಎಂ.ಎಲ್.ಹುಂಡಿ ಪ್ರಭುಸ್ವಾಮಿ ಮತ್ತಿತರಿದ್ದರು.

> ಸುನೀಲ್ ಮತ್ತು ಯತೀಂದ್ರ ಅವರು ಮೈಸೂರು ಮತ್ತು ಚಾಮರಾಜನಗರ ಕ್ಷೇತ್ರದ 2 ಕಣ್ಣುಗಳಿದ್ದಂತೆ. ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದಿದ್ದರೆ ಸುನೀಲ್ ಬೋಸ್ ಮಂತ್ರಿಯಾಗುತ್ತಿದ್ದರು. ಆದ್ದರಿಂದ ಸಿದ್ದರಾಮಯ್ಯ ಅವರ ಪುತ್ರ ಎಂಎಲ್‌ಸಿ ಯತೀಂದ್ರ ಅವರು ದಲಿತರು ಹಾಗೂ ಹಿಂದುಳಿದವರು ಸೇರಿದಂತೆ ಸಾಮಾಜಿಕ ನ್ಯಾಯದಡಿ ಎಲ್ಲಾ ವರ್ಗದವರ ಪರ ಕೆಲಸ ಮಾಡಬೇಕು. ಗ್ಯಾರಂಟಿ ಯೋಜನೆಗಳನ್ನು ರಾಜ್ಯ ಸರ್ಕಾರ ಮುಂದುವರೆಸಬೇಕು. ಬಿಜೆಪಿ ಪೆಟ್ರೋಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಪ್ರತಿಭಟನೆ ಮಾಡುತ್ತಿರುವುದು ಸರಿಯಲ್ಲ. 12 ರೂ. ದರ ಏರಿಕೆಯಾದಾಗಲೇ ಪ್ರತಿಭಟಿಸದ ಅವರು ಕೇವಲ 3 ರೂ. ಹೆಚ್ಚಿಂದು ಪ್ರತಿಭಟಿಸುತ್ತಿರುವುದು ಹಾಸ್ಯಾಸ್ಪದ.
>
> **-ಉಕ್ಕಲಗೆರೆ ಬಸವಣ್ಣ,** ಎಪಿಎಂಸಿ ಮಾಜಿ ಸದಸ್ಯ

ಮೈಸೂರು ಮಿತ್ರ ಶುಕ್ರವಾರ 21 ಜೂನ್ 2024

ಇಂಧನ ದರ ಏರಿಕೆ ಖಂಡಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ

ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

ಮೈಸೂರು, ಜೂ.20(ಎಂಟಿವೈ)– ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ ಖಂಡಿಸಿ ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ನಗರ ಹಾಗೂ ಗ್ರಾಮಾಂತರ ಮೋರ್ಚಾ ವತಿಯಿಂದ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ನೂರಾರು ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಮಹಾತ್ಮ ಗಾಂಧಿ ವೃತ್ತದಲ್ಲಿ ಧರಣಿ ನಡೆಸಿದ ಬಳಿಕ, ಮಾನವ ಸರಪಳಿ ರಚಿಸಿದರು. ಈ ವೇಳೆ ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಬಿಜೆಪಿಗೆ ಮತ ನೀಡಿದ್ದಾರೆ ಎಂಬ ಕಾರಣಕ್ಕೆ ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ರಾಜ್ಯ ಸರ್ಕಾರ ಜನರ ಭಾವನೆಗೆ ಧಕ್ಕೆ ತರುತ್ತಿದೆ. ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ. ಭ್ರಷ್ಟಾಚಾರ ರಾಜ್ಯದಲ್ಲಿ ಮಿತಿ ಮೀರಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ರಾಜ್ಯ ಸರ್ಕಾರ ಕಳೆದ ಒಂದು ವರ್ಷದಿಂದ ನಿರಂತರವಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಲೇ ಇದೆ. ಇದರಿಂದ ಜನರ ಮೇಲೆ ಹೊರೆ ಬೀಳುತ್ತಿದೆ. ವಿದ್ಯುತ್ ದರ ಹೆಚ್ಚಿಸಿ ರೈತರಿಗೆ ತೊಂದರೆ ನೀಡಿದ್ದಾರೆ. ಗ್ಯಾರಂಟಿ ಯೋಜನೆಗಳಿಗಾಗಿ ಪರಿಶಿಷ್ಟರ 11 ಸಾವಿರ ಕೋಟಿ ಅನುದಾನ ಬಳಕೆ ಮಾಡಿ ದ್ರೋಹವೆಸಗಲಾಗಿದೆ ಎಂದು ಆರೋಪಿಸಿದರು.



ಇಂಧನ ಬೆಲೆ ಹೆಚ್ಚಳ ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಗುರುವಾರ ಮೈಸೂರಿನ ಮಹಾತ್ಮಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಇಂಧನ ಬೆಲೆ ಏರಿಕೆಯಾದರೆ ಕೇವಲ ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯಾಗಲ್ಲ. ಸಾಗಾಣೆ ದುಬಾರಿಯಾಗಲಿದೆ. ಪರಿಣಾಮ ತರಕಾರಿಗಳು, ಆಹಾರ ಪದಾರ್ಥಗಳು, ಹೋಟೆಲ್ ತಿಂಡಿ–ತಿನಿಸುಗಳ ಬೆಲೆಯೂ ದುಪ್ಪಟ್ಟಾಗಿ ಸಾರ್ವಜನಿಕರ ಜೀವನ ಅಸ್ತವ್ಯಸ್ತವಾಗಲಿದೆ. ಇಷ್ಟು ಸಾಲದೇ 4.75 ರೂ.ವಿದ್ಯುತ್ ದರವನ್ನು 7.25 ರೂ.ಗೆ ಏರಿಕೆ ಮಾಡಲಾಗಿದೆ. ಹಾಲಿನ ದರವನ್ನು 3 ರೂ. ಹೆಚ್ಚಳ ಮಾಡಲಾಗಿದೆ.

ರಾಜ್ಯದಲ್ಲಿ ವಿದ್ಯಾರ್ಥಿನಿಯರು ನೆಮ್ಮದಿಯಿಂದ ಓಡಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. 480 ಕೊಲೆ, 198 ಅತ್ಯಾಚಾರ, 612 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಜೊತೆಗೆ 5360 ಎಕರೆ ಸರ್ಕಾರಿ ಭೂಮಿ ಮಾರಾಟಕ್ಕೆ ಮುಂದಾಗಿದ್ದು, ಇದುವರೆಗಿನ ಯಾವ ಸರ್ಕಾರ ಮಾಡದಿರುವ ದ್ರೋಹ ನಡೆದಿದೆ. ಹಿಂದೂತ್ವ ಮೇಲಿನ ದ್ವೇಷ ರಾಜಕಾರಣದಿಂದ ಸರ್ಕಾರ ಈ ರೀತಿ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಶಿವಕುಮಾರ್, ಮಾಜಿ ಉಪಮೇಯರ್ ಶೈಲೇಂದ್ರ ಮಾಧ್ಯಮ ವಕ್ತಾರ ಮಹೇಶ್ ರಾಜೇ ಅರಸ್, ಪಡುವಾರಹಳ್ಳಿ ರಾಮಕೃಷ್ಣ, ಮುಖಂಡರಾದ ಹೆಚ್.ಜಿ.ಗಿರಿಧರ್, ಅಪ್ಪಣ್ಣ, ಬಿ.ಎಂ.ರಘು, ಜೋಗಿ ಮಂಜು, ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಹದ್ದೂರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅರನ್‌ಮನೈ–4 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಭಾವಾಮಿ ಯುಗೇ ಯುಗೇ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಹಾರಾಜ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಕರಟಕ ದಮನಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಹದ್ದೂರ್ (ಕ)	4 ಪ್ರದರ್ಶನಗಳು
ಪ್ರಭಾ	
ಬಹದ್ದೂರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಇನ್‌ಸೈಡ್ ಔಟ್ 2(3ಡಿ) (ಇಂ): ಬೆ.11ಕ್ಕೆ, ಪೋಕಿರಿ (ತ): ಮ.1ಕ್ಕೆ, ಹಮಾರೆ ಬಾರಹ್ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ಕ್ರಿಯೇಷನ್ಸ್ ಆಫ್ ದಿ ಗಾಡ್ಸ್ 1 (ಚೈ): ರಾ.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.25ಕ್ಕೆ, ರಾ.7.10ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಶಿವಮ್ಮ ಚಂದು ಚಾಂಪಿಯನ್ (ಹಿಂ): ಸಂ.4.10ಕ್ಕೆ, ನಡನ್ನ ಸಂಭವಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ಮಹಾರಾಜ (ತ): ಬೆ.10.30ಕ್ಕೆ, ಸಂ.4.15ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಮ.1.25ಕ್ಕೆ, ಉಲ್ಲೋಝುಕ್ಕು (ಮ): ರಾ.7.15ಕ್ಕೆ, ಜಹಂಗೀರ್ ನ್ಯಾಷನಲ್ ಯೂನಿವರ್ಸಿಟಿ (ಹಿಂ): ರಾ.9.50ಕ್ಕೆ.
ಸ್ಕ್ರೀನ್ 4	ಚಿಲ್ಲಿ ಚಿಕನ್ (ಕ): ಬೆ.10.50ಕ್ಕೆ, ಕೋಟಿ (ಕ): ಮ.1.25ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೋಟಿ (ಕ): ಮ.1ಕ್ಕೆ, ಸಂಭವಾಮಿ ಯುಗೇ ಯುಗೆ (ಕ): ಸಂ.4.05ಕ್ಕೆ, ಚಿಲ್ಲಿ ಚಿಕನ್ (ಕ): ರಾ.7.05ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ದೇಸಾಯಿ (ಕ): ಸಂ.4.15ಕ್ಕೆ, ಕೋಟಿ (ಕ): ರಾ.7.45ಕ್ಕೆ.
ಸ್ಕ್ರೀನ್ 3	ಪೋಕಿರಿ (ತ): ಮ.1.15ಕ್ಕೆ, ಲವ್ ಲಿ (ಕ): ಸಂ.4.20ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1.30ಕ್ಕೆ, ಮಹಾರಾಜ (ತ): ಸಂ.6.45ಕ್ಕೆ, ಕೋಟಿ (ಕ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಷ್ಟ್ರೀಯ ಯೋಗ ಒಲಂಪಿಯಾಡ್‌ನಲ್ಲಿ ಪ.ಬಂಗಾಳ ಪ್ರಥಮ; ಮೈಸೂರು ಕೇಂದ್ರೀಯ ವಿದ್ಯಾಲಯ ದ್ವಿತೀಯ ಸ್ಥಾನ

ತಮಿಳುನಾಡು ತೃತೀಯ ಸ್ಥಾನಕ್ಕೆ ತೃಪ್ತಿ



'ರಾಷ್ಟ್ರೀಯ ಯೋಗ ಒಲಿಂಪಿಯಾಡ್'ನಲ್ಲಿ 16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕಂಚಿನ ಪದಕ ಪಡೆದ ಕರ್ನಾಟಕ ಕೆ.ವೈ.ಸೃಷ್ಟಿ (ಎಂಆರ್‌ಬಿ ಶಾಲೆ, ಹರಿಹರ), ಎಂ.ಸಂಧ್ಯಾ (ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ನಾಯಂಡಹಳ್ಳಿ, ಬೆಂಗಳೂರು), ಟಿ.ಆರ್.ಕಲ್ಲೇಶ್ವರಿ (ಇಂದಿರಾ ಗಾಂಧಿ ವಸತಿ ಶಾಲೆ, ಹರಿಹರ) ಹಾಗೂ ಆರ್.ಅನುಷಾ (ರಾಜೇಶ್ವರಿ ವಿದ್ಯಾಶಾಲೆ, ಕೆಂಚನಹಳ್ಳಿ, ಬೆಂಗಳೂರು) ಅವರ ತಂಡ.

ಮೈಸೂರು,ಜೂ.20(ಎಂಟಿವೈ)– ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳಿಗೆ (ಆರ್‌ಐಇ) ಆವರಣದಲ್ಲಿ ನಡೆದ 'ರಾಷ್ಟ್ರೀಯ ಯೋಗ ಒಲಿಂಪಿಯಾಡ್'ನಲ್ಲಿ ಪಶ್ಚಿಮ ಬಂಗಾಳ ಮೊದಲ ಸ್ಥಾನ ಪಡೆದರೆ, ಕೇಂದ್ರೀಯ ವಿದ್ಯಾಲಯ ದ್ವಿತೀಯ ಹಾಗೂ ತಮಿಳುನಾಡು ತೃತೀಯ ಸ್ಥಾನ ಪಡೆದಿವೆ.

ಒಲಿಂಪಿಯಾಡ್‌ನಲ್ಲಿ 18 ರಾಜ್ಯ, 5 ಕೇಂದ್ರಾಡಳಿತ ಪ್ರದೇಶದ 483 ಯೋಗಪಟುಗಳು ಸ್ಪರ್ಧಿಸಿ, ಯೋಗ ಕೌಶಲ ಪ್ರದರ್ಶಿಸಿದ್ದರು. ಪ್ರತಿ ತಂಡದ ಸದಸ್ಯರು ಪ್ರಾಣಾಯಾಮದ ಜೊತೆಗೆ ಅರ್ಧ ಮತ್ಸ್ಯೇಂದ್ರಾಸನ, ತಾಡಾಸನ, ಸರ್ವಾಂಗಾಸನ, ಉಷ್ಟ್ರಾಸನ, ಆಕರ್ಣ ಧನುರ್ ಆಸನ, ಶೀರ್ಸಾಸನ ಪ್ರದರ್ಶಿಸಿದರು.

ಎಲ್ಲಾ 4 ವಿಭಾಗಗಳಲ್ಲೂ ಪಶ್ಚಿಮ ಬಂಗಾಳ ತಂಡದ ಸದಸ್ಯರು ಉತ್ತಮ ಪ್ರದರ್ಶನ ನೀಡಿ, ಸಮಗ್ರ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಪಶ್ಚಿಮ ಬಂಗಾಳ (1,078) ಮೊದಲ ಸ್ಥಾನ ಪಡೆದರೆ, ಕೇಂದ್ರೀಯ ವಿದ್ಯಾಶಾಲೆ (1,029) ಹಾಗೂ ತಮಿಳುನಾಡು (1,010) ಕ್ರಮವಾಗಿ 2 ಹಾಗೂ 4ನೇ ಸ್ಥಾನ ಪಡೆದವು.

16 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸಿಐಎಸ್‌ಸಿಇ ಶಾಲೆಗಳ ತಂಡವು ಮೊದಲ ಸ್ಥಾನ ಪಡೆದಿದ್ದು, ತಂಡದಲ್ಲಿ ರಾಜ್ಯದ ತುಮಕೂರು ಜಿಲ್ಲೆಯ ಶಿರಾದ ಪ್ರೆಸಿಡೆಂಟ್ ಪಬ್ಲಿಕ್ ಶಾಲೆಯ ಉದಿತ್ ಬಾಲಾಜಿ ಚಿನ್ನಕ್ಕೆ ಕೊರಳೊಡ್ಡಿದರು.

16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕರ್ನಾಟಕ ಕಂಚಿನ ಪದಕ ಜಯ ಗಳಿಸುವಲ್ಲಿ ಯಶಸ್ವಿಯಾಯಿತು. ಕೆ.ವೈ.ಸೃಷ್ಟಿ (ಎಂಆರ್‌ಬಿ ಶಾಲೆ, ಹರಿಹರ), ಎಂ.ಸಂಧ್ಯಾ (ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ನಾಯಂಡಹಳ್ಳಿ, ಬೆಂಗಳೂರು), ಟಿ.ಆರ್.ಕಲ್ಲೇಶ್ವರಿ (ಇಂದಿರಾ ಗಾಂಧಿ ವಸತಿ ಶಾಲೆ, ಹರಿಹರ) ಹಾಗೂ ಆರ್.ಅನುಷಾ (ರಾಜೇಶ್ವರಿ ವಿದ್ಯಾಶಾಲೆ, ಕೆಂಚನಹಳ್ಳಿ, ಬೆಂಗಳೂರು) ಅವರ ತಂಡವು 1,027 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನ ಪಡೆಯಿತು.

14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ 2ನೇ ಸ್ಥಾನ ಪಡೆದ ಸಿಐಎಸ್‌ಸಿಇ ಶಾಲೆಗಳ ತಂಡದಲ್ಲಿ ರಾಜ್ಯದ ದೊಡ್ಡಬಳ್ಳಾಪುರದಲ್ಲಿನ ಆದಿತ್ಯ ಪಬ್ಲಿಕ್ ಶಾಲೆಯ ಸಿಂಚನಾ ಹಾಗೂ ಯಶಿಕಾ, ಬಾಲಕರ ವಿಭಾಗದಲ್ಲಿ 2ನೇ ಸ್ಥಾನ ಪಡೆದ ಸಿಐಎಸ್‌ಸಿಇ ತಂಡದಲ್ಲಿ ಮೈಸೂರಿನ ಆಚಾರ್ಯ ವಿದ್ಯಾಕುಲ ಶಾಲೆಯ ಹೇಮಂತ್ ಬೆಳ್ಳಿ ಗೆದ್ದರು.

ಕೇಂದ್ರ ಶಾಲಾ ಮತ್ತು ಸಾಕ್ಷರತಾ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಕುಮಾರ್, ಎನ್‌ಸಿಇಆರ್‌ಟಿ ನಿರ್ದೇಶಕ ಪ್ರೊ.ದಿನೇಶ್ ಪ್ರಸಾದ್ ಸಕ್ಲಾನಿ, ಆರ್‌ಐಇ ಪ್ರಾಂಶುಪಾಲ ಪ್ರೊ.ವಿ.ಶ್ರೀಕಾಂತ್ ಪ್ರಶಸ್ತಿ ವಿತರಿಸಿದರು.

ರಾಷ್ಟ್ರೀಯ ಯೋಗ ಒಲಂಪಿಯಾಡ್ ಸಮಾರೋಪ

ವಿದ್ಯಾರ್ಥಿಗಳ ಸಮಗ್ರ ಸುಧಾರಣೆಗೆ ರಾಷ್ಟ್ರೀಯ ಶಿಕ್ಷಣ ನೀತಿ ಅನುಕೂಲಕಾರಿ

ಕೇಂದ್ರ ಶಾಲಾ ಮತ್ತು ಸಾಕ್ಷರತಾ ಶಿಕ್ಷಣ ಸಚಿವಾಲಯ ಕಾರ್ಯದರ್ಶಿ ಸಂಜಯ್ ಕುಮಾರ್ ಅಭಿಮತ



ಮೈಸೂರು,ಜೂ.20(ಎಂಟಿವೈ)– ವಿದ್ಯಾರ್ಥಿಗಳ ಸಮಗ್ರ ಸುಧಾರಣೆಗೆ ರಾಷ್ಟ್ರೀಯ ಶಿಕ್ಷಣ ನೀತಿ ನೆರವಾಗಲಿದೆ ಎಂದು ಕೇಂದ್ರ ಶಾಲಾ ಮತ್ತು ಸಾಕ್ಷರತಾ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಗುರುವಾರ ನಡೆದ 'ರಾಷ್ಟ್ರೀಯ ಯೋಗ ಒಲಿಂಪಿಯಾಡ್'ನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಎನ್‌ಸಿಇಆರ್‌ಟಿಯು ಪಠ್ಯಕ್ರಮವನ್ನು ಪರಿಷ್ಕೃತಗೊಳಿಸಿ ಹೊಸ ಪಠ್ಯಗಳನ್ನು ಸೇರಿಸಿದೆ. ಅದರಲ್ಲಿ ಭಾರತೀಯ ಸಂಸ್ಕೃತಿ ಹಾಗೂ ಜ್ಞಾನದ ಬಗ್ಗೆ ಹೆಮ್ಮೆಪಡುವ ಪಠ್ಯಗಳಿರುವುದು ಹೆಮ್ಮೆಯ ಸಂಗತಿ. ಇದರಿಂದ ವಿಶ್ವವೇ ನಮ್ಮ ಸಂಸ್ಕೃತಿಯನ್ನು ನಿಬ್ಬೆರಗಾಗಿ ನೋಡುವಂತಾಗಲಿದೆ. ನೂತನ ಪಠ್ಯಕ್ರಮದಲ್ಲಿ ಯೋಗ ಸೇರಿದಂತೆ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗಿದೆ. ಇದರಿಂದ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ನೂತನ ಶಿಕ್ಷಣ ನೀತಿ ಸಹಕಾರಿಯೂ, ಶ್ರೇಯದಾಯಕವೂ ಆಗಿದೆ ಎಂದು ತಿಳಿಸಿದರು.

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಭಾಗವಹಿಸಿರುವ ಯೋಗಪಟುಗಳು ವಿಶ್ವದ ಯೋಗ ರಾಯಭಾರಿಗಳಾಗಿದ್ದಾರೆ. ಯೋಗ ಶಿಕ್ಷಣ ಪಡೆದವರು ತರಬೇತಿ ನೀಡುತ್ತಲೇ ಜೀವನ ನಡೆಸುವುದರೊಂದಿಗೆ ಸ್ವಯಂ ಉದ್ಯೋಗ ಮಾಡುವುದಕ್ಕೂ ಸಾಧ್ಯವಾಗುತ್ತಿದೆ. 2027ರ ವೇಳೆಗೆ ಯೋಗ ಕ್ಷೇತ್ರವು 5.47 ಲಕ್ಷ ಕೋಟಿ ವಹಿವಾಟಿನ ಕ್ಷೇತ್ರವಾಗಿ ಹೊರಹೊಮ್ಮಲಿದ್ದು, ವಾರ್ಷಿಕ ಶೇ.10ರಷ್ಟು ಬೆಳವಣಿಗೆ ದಾಖಲಿಸುತ್ತಿದೆ. ಉತ್ತಮ ಸಮಾಜವನ್ನು ನಿರ್ಮಿಸುವ ಜವಾಬ್ದಾರಿ ಯೋಗ ಶಿಕ್ಷಣ ಪಡೆದವರ ಮೇಲಿದೆ. ಪ್ರಜ್ಞಾಪೂರ್ವಕವಾಗಿ ಸಮಾಜದೊಂದಿಗೆ ವರ್ತಿಸಲು, ಸಮಾಜದ ಸ್ವಾಸ್ಥ್ಯ ಉತ್ತಮವಾಗಿಸಲು ಪ್ರತಿದಿನ ಯೋಗಾಭ್ಯಾಸ ಮಾಡಬೇಕು. ಶಾಲಾ ಶಿಕ್ಷಣದಲ್ಲೂ ಯೋಗವು ಒಂದು ಭಾಗವಾಗಿದ್ದು, ಅದು ಎಲ್ಲರನ್ನು ಒಂದುಗೂಡಿಸುತ್ತದೆ ಎಂದರು.

ವರ್ಷದ ದೀರ್ಘ ಹಗಲಿರುವ ದಿನವಾದ ಜೂ.21ರಂದೇ ವಿಶ್ವ ಯೋಗ ದಿನವೆಂದು ವಿಶ್ವಸಂಸ್ಥೆ ಘೋಷಿಸಿದೆ. ಯೋಗಕ್ಕೆ ವಿಶ್ವ ಮಾನ್ಯತೆ ಲಭಿಸಲು ಪ್ರಧಾನಿ ನರೇಂದ್ರ ಮೋದಿ ಕಾರಣರಾಗಿದ್ದಾರೆ. ಜನರ ಜೀವನ ಆರೋಗ್ಯಪೂರ್ಣವಾಗಿರಲು ಯೋಗ ಮಾರ್ಗ ಅನುಸರಿಸಬೇಕು. ಈ ಬಾರಿ 'ವ್ಯಕ್ತಿ ಹಾಗೂ ಸಮಾಜಕ್ಕೆ ಯೋಗ' ಧ್ಯೇಯ ವಾಕ್ಯದೊಂದಿಗೆ ಯೋಗ ದಿನ ಆಚರಿಸಲಾಗುತ್ತಿದೆ. ಆರೋಗ್ಯ ಪೂರ್ಣ ಮನಸ್ಸು ಆರೋಗ್ಯಯುತ ದೇಹದಲ್ಲಿ ಇರುತ್ತದೆ. ಯೋಗವು ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎನ್‌ಸಿಇಆರ್‌ಟಿ ನಿರ್ದೇಶಕ ಪ್ರೊ.ದಿನೇಶ್ ಪ್ರಸಾದ್ ಸಕ್ಲಾನಿ, ಆರ್‌ಐಇ ಪ್ರಾಂಶುಪಾಲ ಪ್ರೊ.ವಿ.ಶ್ರೀಕಾಂತ್ ಉಪಸ್ಥಿತರಿದ್ದರು.

ಸೂರ್ಯ ಅಬ್ಬರ: ಆಫ್ಘಾನ್ ವಿರುದ್ಧ ಭಾರತಕ್ಕೆ ಜಯ



ಬ್ರಿಡ್ಜ್‌ಟೌನ್ (ಬಾರ್ಬಡೊಸ್), ಜೂ.20– ಸೂರ್ಯಕುಮಾರ್ ಯಾದವ್ ಅರ್ಧಶತಕ ಹಾಗೂ ಜಸ್ಪ್ರೀತ್ ಬುಮ್ರಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ಆಫ್ಘಾನಿಸ್ತಾನ ಎದುರು 47 ರನ್‌ಗಳ ಸುಲಭ ಗೆಲುವು ದಾಖಲಿಸಿದೆ.

ಇಲ್ಲಿನ ಕೆನ್ಸಿಂಗ್ಟನ್ ಓವಲ್ ಮೈದಾನದಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8 ಹಂತದ ಪಂದ್ಯದಲ್ಲಿ ಭಾರತ ನೀಡಿದ 182 ರನ್‌ಗಳ ಸವಾಲಿನ ಗುರಿ ಬೆನ್ನತ್ತಿದ ಆಫ್ಘಾನಿಸ್ತಾನ 134 ರನ್‌ಗಳಿಗೆ ಆಲೌಟಾಯಿತು. ಇದರೊಂದಿಗೆ ಆಫ್ಘಾನಿಸ್ತಾನ ಎದುರು ಟೀಂ ಇಂಡಿಯಾ ಗೆಲುವಿನ ನಾಗಾಲೋಟ ಮುಂದುವರೆಸಿದ್ದು, ಸತತ 9ನೇ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾಗಿದೆ.

ಸವಾಲಿನ ಗುರಿ ಬೆನ್ನತ್ತಿದ ಆಫ್ಘಾನಿಸ್ತಾನ ಉತ್ತಮ ಆರಂಭ ಪಡೆಯಲು ವಿಫಲವಾಯಿತು. ಆರಂಭಿಕ ಬ್ಯಾಟರ್‌ಗಳಾದ ರೆಹಮನುಲ್ಲಾ ಗುರ್ಬಾಜ್(11) ಹಾಗೂ ಹಜರತುಲ್ಲಾ ಝುಝೈ(2) ಬಲಿ ಪಡೆಯುವಲ್ಲಿ ಜಸ್ಪ್ರೀತ್ ಬುಮ್ರಾ ಯಶಸ್ವಿಯಾದರು. ಇನ್ನು ಇಬ್ರಾಹಿಂ ಜದ್ರಾನ್ (8)ಗೆ ಅಕ್ಷರ್ ಪಟೇಲ್ ಪೆವಿಲಿಯನ್ ಹಾದಿ ತೋರಿಸಿದರು. ಆಫ್ಘಾನಿಸ್ತಾನ 23 ರನ್ ಗಳಿಸುವಷ್ಟರಲ್ಲಿ ಮೂವರು ಬ್ಯಾಟ್ಸ್‌ಮನ್‌ಗಳು ಪೆವಿಲಿಯನ್ ಸೇರಿದ್ದರು. ಬಳಿಕ ಮಧ್ಯಮ ಕ್ರಮಾಂಕದಲ್ಲಿ ಗುಲ್ಬದ್ದೀನ್ ನೈಬ್(17), ಅಝ್ಮತುಲ್ಲಾ ಓಮರ್‌ಝೈ (26) ಹಾಗೂ ನಜೀಬುಲ್ಲಾ ಜದ್ರಾನ್ (19) ಕೊಂಚ ಪ್ರತಿರೋಧ ತೋರಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ.

ಭಾರತದ ಪರ ಜಸ್ಪ್ರೀತ್ ಬುಮ್ರಾ, ಅರ್ಶದೀಪ್ ಸಿಂಗ್ ತಲಾ 3, ಕುಲ್ದೀಪ್ ಯಾದವ್ 2 ಹಾಗೂ ರವೀಂದ್ರ ಜಡೇಜಾ ಮತ್ತು ಅಕ್ಷರ್ ಪಟೇಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ಉತ್ತಮ ಆರಂಭ ಪಡೆಯಲು ವಿಫಲವಾಯಿತು. ರೋಹಿತ್ ಶರ್ಮಾ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ರಿಷಭ್ ಪಂತ್ 20, ಶಿವಂ ದುಬೆ 10 ಹಾಗೂ ಕೊಹ್ಲಿ 24 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಸೂರ್ಯಕುಮಾರ್ ಯಾದವ್ ಹಾಗೂ ಹಾರ್ದಿಕ್ ಪಾಂಡ್ಯ 5ನೇ ವಿಕೆಟ್‌ಗೆ 60 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 150ರ ಗಡಿ ಮುಟ್ಟಿಸಿದರು. ಅಂತಿಮವಾಗಿ 28 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 53 ರನ್ ಗಳಿಸಿ ನಿರ್ಗಮಿಸಿದರೇ, ಪಾಂಡ್ಯ 32, ಅಕ್ಷರ್ ಪಟೇಲ್ 12 ರನ್ ಗಳಿಸಿದರು. ಅಂತಿಮವಾಗಿ ಭಾರತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಿತು. ಆಫ್ಘಾನಿಸ್ತಾನ ಪರ ಫಜಲ್ಹಕ್ ಫಾರೂಕಿ, ರಶೀದ್ ಖಾನ್ ತಲಾ 3, ನವೀನ್ ಉಲ್ ಹಕ್ 1 ವಿಕೆಟ್ ಪಡೆದರು. ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದು ಅಂತರರಾಷ್ಟ್ರೀಯ ಯೋಗ ದಿನ

ಮೈಸೂರು ಅರಮನೆ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನ

●ಹತ್ತು ಸಾವಿರ ಯೋಗಪಟುಗಳು ಪಾಲ್ಗೊಳ್ಳುವ ನಿರೀಕ್ಷೆ ●ಜಿಲ್ಲಾ ಆಯುಷ್ ಇಲಾಖೆಯಿಂದ ಆಯೋಜನೆ ●ನೂರಾರು ಯೋಗ ತರಬೇತಿ ಸಂಸ್ಥೆಗಳು ಸಹಭಾಗಿ

ಮೈಸೂರು,ಜೂ.20(ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ನಾಳೆ(ಜೂ.21) ಬೆಳಗ್ಗೆ 6ರಿಂದ 8 ಗಂಟೆವರೆಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 10 ಸಾವಿರಕ್ಕೂ ಹೆಚ್ಚು ಮಂದಿ ಸಾಮೂಹಿಕ ಯೋಗ ಪ್ರದರ್ಶನ ಮಾಡಲಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ಹಾಗೂ ಮೈಸೂರು ಯೋಗ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಯೋಗ ದಿನದ ಕಾರ್ಯಕ್ರಮಕ್ಕೆ ಅರಮನೆ ಆವರಣದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಸಾಮೂಹಿಕ ಯೋಗ ಪ್ರದರ್ಶನಕ್ಕೆ ಸ್ಥಳ ಗುರುತು ಮಾಡಲಾಗಿದೆ. ಸುಮಾರು ಎರಡು ಗಂಟೆಗಳ ಕಾಲ ಕಾರ್ಯಕ್ರಮ ಜರುಗಲಿದೆ.

ಅಂತರರಾಷ್ಟ್ರೀಯ ಯೋಗ ದಿನದ ಸಭಾ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್ ಬಾನೊತ್, ಎಸ್ಪಿ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಲತಾ, ಯೋಗ ಒಕ್ಕೂಟದ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಆರಂಭದಲ್ಲಿ ಒಂದು ನಿಮಿಷ ಪ್ರಾರ್ಥನೆ, 4 ನಿಮಿಷ ಚಲನ ಕ್ರಿಯೆ, 25 ನಿಮಿಷ ಯೋಗಾಸನ ಪ್ರದರ್ಶನ, 14 ನಿಮಿಷ ಪ್ರಾಣಾಯಾಮ, ಧ್ಯಾನ, ಅಂತಿಮ ಹಂತದಲ್ಲಿ ಒಂದು ನಿಮಿಷ ಶಾಂತಿಮಂತ್ರ ಪಠಿಸಲಾಗುತ್ತದೆ.



ಸಾಂದರ್ಭಿಕ ಚಿತ್ರ

ಮೈಸೂರಿನ ವಿವಿಧ ಯೋಗ ಶಾಲೆಗಳ ಯೋಗಪಟುಗಳು, ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ ಯೋಗಾಸಕ್ತರು ಬೆಳಗ್ಗೆ 6 ಗಂಟೆಯೊಳಗೆ ಅರಮನೆಯೊಳಗೆ ಪ್ರವೇಶಿಸುವಂತೆ ಸೂಚನೆ ನೀಡಲಾಗಿದ್ದು, ವರಹಾ ದ್ವಾರ, ಜಯಮಾರ್ತಾಂಡ ದ್ವಾರ ಪಾರ್ಕಿಂಗ್ ಜಾಗ ಸೇರಿದಂತೆ ವಿವಿಧೆಡೆ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಸಾಮೂಹಿಕ ಯೋಗ ಪ್ರದರ್ಶನದ ಹಿನ್ನೆಲೆಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಎಲ್ಲಾ ಯೋಗಪಟುಗಳಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಮುಂಜಾಗ್ರತಾ ಕ್ರಮವಾಗಿ ಆರೋಗ್ಯ ಸಿಬ್ಬಂದಿ ಹಾಗೂ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ. ಕಳೆದ ವರ್ಷ ಮೈಸೂರಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ 12 ಸಾವಿರ ಯೋಗಪಟುಗಳು ಪಾಲ್ಗೊಂಡಿದ್ದರು. ಈ ಬಾರಿಯೂ 10 ಸಾವಿರಕ್ಕಿಂತ ಹೆಚ್ಚು ಯೋಗಪಟುಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ದಾಖಲೆಯ ಪ್ರಯತ್ನವಿಲ್ಲ: ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಹೆಚ್ಚು ಜನರನ್ನು ಸೇರಿಸಿ ದಾಖಲೆ ಬರೆಯುವ ಉದ್ದೇಶ ಜಿಲ್ಲಾಡಳಿತಕ್ಕೆ ಈ ಬಾರಿ ಇಲ್ಲ. ಸಾಂಕೇತಿಕವಾಗಿ ಯೋಗ ದಿನ ಆಚರಿಸಲಾಗುತ್ತಿದೆ ಕಳೆದ ವರ್ಷದಂತೆ ಈ ಬಾರಿ 10 ಸಾವಿರಕ್ಕೂ ಹೆಚ್ಚು ಯೋಗಪಟುಗಳನ್ನು ಸೇರಿಸಿ, ಯೋಗ ಪ್ರದರ್ಶನ ನೀಡಲು ಉದ್ದೇಶಿಸಲಾಗಿದೆ ಇದಕ್ಕೆ ಮೈಸೂರು ಯೋಗ ಒಕ್ಕೂಟವು ಸಾಥ್ ನೀಡುತ್ತಿದೆ.

ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ

ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಈ ಬಾರಿ ಮೈಸೂರಲ್ಲಿ 10 ಸಾವಿರಕ್ಕಿಂತ ಹೆಚ್ಚು ಯೋಗಪಟುಗಳು ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ಯೋಗ ಒಕ್ಕೂಟ ಸಹಕಾರ ನೀಡುತ್ತಿದ್ದು, ಈಗಾಗಲೇ ವಿವಿಧೆಡೆ ಯೋಗ ತಾಲೀಮು ನಡೆಸಲಾಗಿದೆ. ಅರಮನೆ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

-ಡಾ.ಪುಷ್ಪಾ, ಜಿಲ್ಲಾ ಆಯುಷ್ ಅಧಿಕಾರಿ


ಸಂಸದರ ನಿಧಿ ಬಳಕೆಯಲ್ಲಿ ರಾಜ್ಯಕ್ಕೆ ನಂ 1 ಅಭಿವೃದ್ಧಿ ಕಣ್ಮಣಿ, ಅಭಿವೃದ್ಧಿ ಹರಿಕಾರರು
ನಿಕಟ ಪೂರ್ವ ಮೈಸೂರು ಮತ್ತು ಕೊಡಗು ಲೋಕಸಭಾ ಸದಸ್ಯರು
ಶ್ರೀ ಪ್ರತಾಪ್ ಸಿಂಹ
ರವರಿಗೆ
ಜನ್ಮ ದಿನದ ಶುಭಾಶಯಗಳು
ಬಿ ಜೆ ಪಿ
ಶುಭ ಕೋರುವರು ಶ್ರೀ ಪ್ರತಾಪ್ ಸಿಂಹ ಅಭಿಮಾನಿಗಳ ಬಳಗ, ಮೈಸೂರು


ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ಮಾಜಿ ಸಂಸದರಾದ
ಸನ್ಮಾನ್ಯ ಶ್ರೀ ಪ್ರತಾಪ್‌ಸಿಂಹರವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು :
ಶಮಂತ್ ಮಾಲೀಕರು,
ಅಮ್ಮಾಸ್ ಹೋಟೆಲ್